ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರ ಪತ್ರಿಕೆ

ಸಂಪುಟ 11 ಸಂಚಿಕೆ 2-3 ಜನವರಿ 8-15 1989 ರೂ. 2-00



XIII CONGRESS TRIVANDRUM Dec 27 – Jan 1

ಜನತೆಯ ಚಳುವಳಿಯತ್ತ

ರಾಷ್ಟ್ರೀಯ ಆಂದೋಲನ ಸಮಿತಿ

ದೇಶಾದ್ಯಂತ ಕಾಂಗ್ರೆಸ್(ಐ) ದುರಾಳಿತೆಯ ಬಗ್ಗೆ ಜನತೆಯ ತೀವ್ರ ಅಸಂತೃಪ್ತಿಗೆ ಆಂದೋಲನದ ಸ್ವರೂಪ ನೀಡಲು, ದೇಶ ಎದುರಿಸುತ್ತಿರುವ ಮೂಲಭೂತ ಪ್ರಶ್ನೆಗಳ ಸುತ್ತ ಜನ ಸಮೂಹವನ್ನು ಅಣಿ ನೆರೆಸುವ ಇನ್ನೊಂದು ಹೆಜ್ಜೆಯಾಗಿ ಏಳು ಪಕ್ಷಗಳ ರಾಷ್ಟ್ರೀಯ ಆಂದೋಲನ ಸಮಿತಿ ರಚನೆಗೊಂಡಿದೆ. ವಿಚ್ಛಿದ್ರಕಾರಿ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳ ವಿರುದ್ಧ ಜನತೆಯನ್ನು ಅಣಿ ನೆರೆಸಿ ದೇಶದ ಐಕ್ಯತೆ ಮತ್ತು ಸಮಗ್ರತೆಯ ರಕ್ಷಣೆ, ಶಾಂತಿ, ಅಲಿಪ್ತ ಮತ್ತು ಸಾಮ್ರಾಜ್ಯಶಾಹಿ-ವಿರೋಧಿ ವಿದೇಶಾಂಗನೀತಿ, ಕೇಂದ್ರ-ರಾಜ್ಯ ಸಂಬಂಧಗಳ ಪುನರ‍್ರಚನೆ, ಅಲ್ಪಸಂಖ್ಯಾತರು, ಹರಿಜನರು, ಗಿರಿಜನರ ಹಿತಾಸಕ್ತಿಗಳ ರಕ್ಷಣೆ, ಬೆಲೆ ಏರಿಕೆ, ನಿರುದ್ಯೋಗ, ಭ್ರಷ್ಟಾಚಾರದ ವಿರುದ್ಧ ಹೋರಾಟ ಮುಂತಾದ ಹದಿನೈದು ಅಂಶಗಳ ಕಾರ‍್ಯಕ್ರಮವನ್ನು ಆಂದೋಲನ ಸಮಿತಿ ರೂಪಿಸಿಕೊಂಡಿದೆ.

ನಾಲ್ಕು ಎಡಪಕ್ಷಗಳಾದ ಸಿ.ಪಿ.ಐ.(ಎಂ), ಸಿ.ಪಿ.ಐ., ಫಾರ್ವರ್ಡ್ ಬ್ಲಾಕ್ ಮತ್ತು ಆರ್.ಎಸ್.ಪಿ. ಹಾಗೂ ಇತರ ಮೂರು ಪಕ್ಷಗಳಾದ ಲೋಕದಳ (ಬಹುಗುಣ), ಜನಮೋರ್ಚಾ ಮತ್ತು ಕಾಂಗ್ರೆಸ್(ಎಸ್) ಮುಖಂಡರು ಜನವರಿ 11ರಂದು ನವದೆಹಲಿಯಲ್ಲಿ ಪತ್ರಿಕಾ ಸಮ್ಮೇಳನವೊಂದರಲ್ಲಿ ರಾಷ್ಟ್ರೀಯ ಆಂದೋಲನ ಸಮಿತಿಯ ರಚನೆಯ ಬಗ್ಗೆ ತಿಳಿಯಪಡಿಸಿದರು. ಸಿ.ಪಿ.ಐ.(ಎಂ) ಪರವಾಗಿ ಪ್ರಧಾನ ಕಾರ‍್ಯದರ್ಶಿಗಳಾದ ಇ.ಎಂ.ಎಸ್. ಹಾಗೂ ಪಾಲಿಟ್‌ಬ್ಯೂರೋ ಸಮಿತಿ ಸದಸ್ಯ ಹರಿಕಿಶನ್‌ಸಿಂಗ್ ಸುರ್ಜಿತ್ ಪತ್ರಿಕಾ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್(ಐ)ಗೆ ಸವಾಲೆಸೆಯಬಹುದಾದ ಪ್ರಮುಖ ವಿರೋಧ ಪಕ್ಷಗಳನ್ನು ಮುಖಂಡತ್ವದ ಜಗ್ಗಾಟದಲ್ಲಿರುವಾಗ ಜನತೆಯ ಆಶೋತ್ತರಗಳನ್ನು ಬಿಂಬಿಸುವ ಕಾರ‍್ಯಕ್ರಮಕ್ಕಾಗಿ ಸಾಮೂಹಿಕ ಚಳುವಳಿಗಳನ್ನು ರೂಪಿಸುವ ರಾಷ್ಟ್ರೀಯ ರಂಗದ ನೀತಿಗಳ ಮುಖ್ಯ ಕೊರತೆಯಾದ ವಿದೇಶಾಂಗ ನೀತಿ ಹಾಗೂ ಕೋಮು ವಾದದ ವಿರೋಧದ ಬಗ್ಗೆ ಒತ್ತಡ ಹೇರುವ ಕೋಮುವಾದಿ ಪ್ರತ್ಯೇಕವಾದಿ ಶಕ್ತಿಗಳನ್ನು ಜನರಿಂದ ದೂರ ಸರಿಸುವ ಹೆಜ್ಜೆಯಿದು ಎಂದು ದೇಶದ ರಾಜಕೀಯ ವೀಕ್ಷಕರು ಗಮನಿಸಿದ್ದಾರೆ.

ಒಳಜಗಳವ ಈ ಕ್ಷಣವೇ ನಿಲ್ಲಿಸಿ

ಸಿ.ಪಿ.ಐ.(ಎಂ) ಕರೆ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ಕಾರ‍್ಯದರ್ಶಿ ಮಂಡಳಿಯ ಸಭೆ ಜನವರಿ 10, 11ರಂದು ಬೆಂಗಳೂರಿನಲ್ಲಿ ಸೇರಿ ರಾಜ್ಯದ ರಾಜಕೀಯ ಪರಿಸ್ಥಿತಿ, ಕೋಲಾರದಲ್ಲಿ ಮತೀಯ ದಂಗೆ, ಮಣ್ಣಿನ ಮಕ್ಕಳ ಹೆಸರಿನಲ್ಲಿ ಕನ್ನಡ ಭಾಷಾಭಿಮಾನದ ನೆಪದಲ್ಲಿ ಇತರ ಭಾಷಿಕರ ಮೇಲೆ ಬೆಂಗಳೂರಿನಲ್ಲಿ ನಡೆಯುತ್ತಿರುವ ಅತ್ಯಾಚಾರಗಳ ಕುರಿತು ಚರ್ಚಿಸಿ ಈ ಕೆಳಗಿನ ಪತ್ರಿಕಾ ಹೇಳಿಕೆ ನೀಡಿದೆ.

ದೇಶದ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳು ರಾಜೀವ್‌ಗಾಂಧಿ ಸರ್ಕಾರವನ್ನು ಸೋಲಿಸುವ ಪ್ರಯತ್ನದಲ್ಲಿರುವಾಗ, ಕರ್ನಾಟಕ ಜನತಾ ಪಕ್ಷದ ಮುಖಂಡರು ಅಂಥ ಪ್ರಯತ್ನಕ್ಕೆ ಒಟ್ಟಾಗಿ ಬೆಂಬಲ ನೀಡದೆ ಒಬ್ಬರನ್ನೊಬ್ಬರು ಬಹಿರಂಗವಾಗಿಯೇ ಟೀಕಿಸುತ್ತಾ ಆಂತರಿಕ ಜಗಳದಲ್ಲಿ ತೊಡಗಿರುವುದು ನಿಜವಾಗಿಯೂ ಖಂಡನೀಯ. ಬಹಳ ಪ್ರಯತ್ನ ಪಟ್ಟು ಕಾಂಗ್ರೆಯನ್ನು ಸೋಲಿಸಿ ಜನತಾ ಪಕ್ಷವನ್ನು ಅಧಿಕಾರಕ್ಕೆ ತಂದ ಕರ್ನಾಟಕ ಜನತೆ, ಜನತಾ ಮುಖಂಡರೊಳಗಿನ ಆಂತರಿಕ ಜಗಳವನ್ನು ಒಪ್ಪಲಾರರು. ಈ

ಪುಟ 12ಕ್ಕೆ

ಐಕ್ಯತೆಯತ್ತ ಸಾಗುತ್ತಿರುವ ಸಿ.ಪಿ.ಐ.(ಎಂ)

-ಕಾಂ. ಇ.ಎಂ.ಎಸ್.

ಅವಿಭಾಜ್ಯ ಕಮ್ಯೂನಿಸ್ಟ್ ಪಕ್ಷದ ಮಹಾಧಿವೇಶನ-ಕೇರಳದಲ್ಲಿ ನಡೆದ ಮೂರು ಮಹಾಧಿವೇಶನಗಳಲ್ಲಿ ಮೊದಲನೆಯದು- ಪಾಲ್ಘಾಟನಲ್ಲಿ ೧೯೫೬ರಲ್ಲಿ ನಡೆದಾಗ ಭಿನ್ನಾಭಿಪ್ರಾಯಗಳಾಗಲೇ ಮೂಡುತ್ತಿದ್ದವು. ಈಗ ಮತ್ತೆ ಕೇರಳದಲ್ಲಿ ಹದಿಮೂರನೇ ಮಹಾಧಿವೇಶನ ನಡೆಯುತ್ತಿರುವಾಗ ಈ ಭಿನ್ನಾಭಿಪ್ರಾಯಗಳು ಮೂಡಿದ ಮೂರು ಪ್ರಮುಖ ಪ್ರಶ್ನೆಗಳ ಬಗೆಗೂ ಸಮಾನ ಅಭಿಪ್ರಾಯ ಮೂಡುತ್ತಿದೆ. ಪಕ್ಷ ಐಕ್ಯತೆಯತ್ತ ಸಾಗುತ್ತಿದೆ ಎಂದು ಪಕ್ಷದ ಪ್ರಧಾನ ಕಾರ‍್ಯದರ್ಶಿ ಕಾಂ. ಇ.ಎಂ.ಎಸ್. ನಂಬೂದರಿಪಾದ್ ಘೋಷಿಸಿದರು. ತಿರುವನಂತಪುರದ ಶಂಖುಮುಗಂ ಕಡಲ ದಂಡೆಯಲ್ಲಿ ಕಿಕ್ಕಿರಿದು ನೆರೆದಿದ್ದ ಲಕ್ಷೋಪಲಕ್ಷ ಜನರ ಬಹಿರಂಗ ಸಭೆಯನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಪಕ್ಷ ವಿಭಜಿತವಾದಾಗ ಪ್ರಮುಖವಾದ ಮೂರು ಪ್ರಶ್ನೆಗಳು ಪಕ್ಷದಲ್ಲಿ ತೀಕ್ಷ್ಣವಾದ ಭಿನ್ನಾಭಿಪ್ರಾಯಕ್ಕೆ ಕಾರಣವಾಗಿದ್ದವು.

ಈ ಮೂರು ಪ್ರಶ್ನೆಗಳೂ ಭಾರತದ ಕಮ್ಯೂನಿಸ್ಟ್ ಚಳವಳಿಯ ಗತಿಯನ್ನು ನಿರ್ಧರಿಸುವ ಪ್ರಶ್ನೆಗಳೂ ಆಗಿದ್ದವು. ಈಗ ಪ್ರಧಾನವಾದ ಮೂರು ಪ್ರಶ್ನೆಗಳ ಬಗ್ಗೆಯೂ ಒಮ್ಮತ ಅಭಿಪ್ರಾಯ ಮೂಡಿದೆ ಎಂದು ಅವರು ವಿವರಿಸಿದರು.

ಮೊದಲನೆಯದಾಗಿ ಭಾರತದ ಪ್ರಭುತ್ವದ ಸ್ವರೂಪ, ಈ ಆಳುವ ವರ್ಗವನ್ನೆದುರಿಸುವ ಬಗ್ಗೆ, ಇಂತಹ ವಿಷಯದಲ್ಲಿ ಬೆಳೆಸಬೇಕಾಗಿರುವ ಸಖ್ಯತೆ ಇವುಗಳೆಲ್ಲದರ ಬಗ್ಗೆ ಭಿನ್ನಾಭಿಪ್ರಾಯಗಳಿದ್ದವು. ಈಗ ಹದಿಮೂರನೇ ಮಹಾಧಿವೇಶನದ ಸಮಯದಲ್ಲಿ ಐಕ್ಯತೆ ಮೂಡಿದೆ. ಭಾರತ ಕಮ್ಯೂನಿಸ್ಟ್ ಪಕ್ಷ ಹಾಗೂ ನಮ್ಮ ಪಕ್ಷದ ನಡುವೆಯೂ ಈ ಪ್ರಶ್ನೆಗಳ ಬಗ್ಗೆ ಐಕ್ಯತೆ ಮೂಡಿ ಬರುತ್ತಾ ಇದೆ. ಇದು ಎಡ ಪಕ್ಷಗಳ ನಡುವಿನ ಐಕ್ಯತೆಗೂ, ಎಡ ಹಾಗೂ ಇತರ ಜಾತ್ಯಾತೀತ ಪ್ರಜಾಸತ್ತಾತ್ಮಕ ಪಕ್ಷಗಳ ನಡುವಿನ ಐಕ್ಯತೆಗೂ ಇದು ಚಾಲಕ ಶಕ್ತಿಯಾಗಿದೆ ಎಂದು ಹೇಳಿದರು ಅವರು.

ಎರಡನೆಯ ಪ್ರಶ್ನೆಯೆಂದರೆ ಅಂದು ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯಲ್ಲಿನ ತೀವ್ರ ಭಿನ್ನಾಭಿಪ್ರಾಯಗಳು. ಹಾಗೂ ವಿಶ್ವದ ಕಮ್ಯೂನಿಸ್ಟ್ ಪಕ್ಷಗಳ ನಡುವಿನ ಸಂಬಂಧಗಳಲ್ಲಿನ ತೀವ್ರ ವಿಷಮತೆ. ಅದರ ಫಲವಾಗಿ 1964ರಲ್ಲಿ ಪಕ್ಷದ ವಿಭಜನೆಯ ನಂತರ ಸಿ.ಪಿ.ಐ.(ಎಂ)ಗೆ ವಿಶ್ವದ ಅನೇಕ ಕಮ್ಯೂನಿಸ್ಟ್ ಪಕ್ಷಗಳ ಸಂಬಂಧವಿರಲಿಲ್ಲ, ಆದರೆ ನಿರಂತರವಾದ ಕಾರ್ಮಿಕ ವರ್ಗದ ಅಂತರರಾಷ್ಟ್ರೀಯ ನಿಲುವಿನ ಫಲವಾಗಿ, ದೃಢವಾದ ಸ್ವತಂತ್ರ ಅಭಿಪ್ರಾಯಗಳ ಫಲವಾಗಿ ಈಗ ಆ ಎಲ್ಲಾ

ಪುಟ 12ಕ್ಕೆ





ಕೆಂಪು ಹಬ್ಬ

ಹಲವು ಕಡೆ ಮಾರ್ಕ್ಸ್ ಎಂಗೆಲ್ಸ್, ಲೆನಿನ್, ಸ್ಟಾಲಿನ್‌ರಂತಹ ಅಂತರ್ರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ಮಹಾನಾಯಕರ ಕಲಾತ್ಮಕ ಭಾವಚಿತ್ರಗಳನ್ನು ಬರೆಯಲಾಗಿದ್ದವು. ಆ ಭಾವ ಚಿತ್ರಗಳ ಜತೆ ನಾಯಕರ ಪ್ರಸಿದ್ಧ ಉದ್ಧರಣೆಗಳು ಬರೆಯಲ್ಪಟ್ಟಿದ್ದವು. ಇಂತಹುದೇ ಆದರಕ್ಕೊಳಗಾದ ಭಾರತೀಯ ನಾಯಕರೆಂದರ ಕಾ॥ ಕೃಷ್ಣಪಿಳ್ಳೆ, ಎ.ಕೆ. ಗೋಪಾಲನ್, ಇ.ಎಂ.ಎಸ್, ನಯನಾರ್, ಬಿ.ಟಿ.ಆರ್ ಜ್ಯೋತಿಬಸು, ಸುಂದರಯ್ಯ ಮುಂತಾದವರು.

ಇನ್ನೂ ದೊಡ್ಡ ದೊಡ್ಡ ಪೈಂಟಿಂಗ್‌ಗಳನ್ನು ಬೇರೆ ಬೇರೆ ಕಡೆ (ಕಮಾನುಗಳಿಂದ, ವೃತ್ತಗಳಲ್ಲಿ, ಇತ್ಯಾದಿ) ತೂಗುಹಾಕಲಾಗಿತ್ತು. ಭಾರಿ ದೊಡ್ಡ ಪೈಂಟಿಂಗ್ ಕಟೌಟ್‌ಗಳನ್ನು ನಗರದ ಮುಖ್ಯ ವೃತ್ತಗಳಲ್ಲಿ ಇಡಲಾಗಿತ್ತು. ಇಂತಹ ಕಟೌಟ್‌ಗಳು 20 ರಿಂದ 40 ಅಡಿಗಳಷ್ಟು ಎತ್ತರವಾಗಿದ್ದವು. ಕಟೌಟ್‌ಗಳಲ್ಲಿ ಲೆನಿನ್‌ನ ಬೇರೆ ಬೇರೆ ಭಂಗಿಯವೇ ಹೆಚ್ಚು. ಇದಲ್ಲದೆ ಚೀನೀ ಊಳಿಗಮಾನ್ಯದ ವಿರುದ್ಧ ಹೋರಾಟದ ಪ್ರಖ್ಯಾತ ಚಿತ್ರಕೃತಿಗಳ ಕಟೌಟ್‌ಗಳು ಹಲವಾರು ಇದ್ದವು.

ಇನ್ನು ನಗರದ ತುಂಬಾ ನೂರಾರು ಕಮಾನುಗಳು ಆದರಲ್ಲೂ ಮುಖ್ಯವಾಗಿ ರೈಲ್ವೇ ಸ್ಟೇಷನ್ನಿನಿಂದ ಕಾಂಗ್ರೆಸ್ ನಡೆಯುತ್ತಿದ್ದ ಕಾ॥ ಕೃಷ್ಣ ಪಿಳ್ಳೆ ನಗರಕ್ಕೆ ಹೋಗುವ ದಾರಿ, ರ್‍ಯಾಲಿ ಹೋಗುವ ಎರಡು ಮಾರ್ಗಗಳಲ್ಲಿ ವಿಶೇಷವಾದ ವೈವಿಧ್ಯಮಯ ಕಮಾನುಗಳನ್ನು ರಚಿಸಲಾಗಿತ್ತು. ಒಂದು ಕಮಾನಿನಂತೆ ಇನ್ನೊಂದಿಲ್ಲ. ಕೆಲವು ಕಮಾನುಗಳಲ್ಲಿ ಮಹಾನಾಯಕರ ಭಾವಚಿತ್ರಗಳನ್ನು ತೂಗಿ ಹಾಕಿದರೆ, ಇನ್ನೂ ಕೆಲವು ಕಮಾನುಗಳಲ್ಲಿ ಇತರ ಅಲಂಕಾರಗಳು. ಕೆಲವು ಕಮಾನುಗಳು ಸಾಂಪ್ರದಾಯಿಕವಾಗಿರುವಂತೆ ಬಟ್ಟೆಯದ್ದಾದರೆ, ಇನ್ನೂ ಕೆಲವು ಕಮಾನುಗಳು ತಟ್ಟಿಕೆಯಲ್ಲಿ ಮಾಡಿದ ಕೋಟೆ ಹೆಬ್ಬಾಗಿಲುಗಳ ಮಾದರಿಯವು. ಕಮಾನುಗಳ ವಿನ್ಯಾಸವು ಹತ್ತು ಹಲವು ಬಗೆಯವು. ಕಮಾನುಗಳ ಮೇಲೆ 13ನೇ ಮಹಾಧಿವೇಶನದ ಸಂದೇಶದ ಜತೆ, ಪ್ರತಿನಿಧಿಗಳನ್ನು ಸ್ವಾಗತಿಸುವ ತಲೆಬರಹಗಳು. ಆದರ ಜತೆ ಕಮಾನುಗಳನ್ನು ರಚಿಸಿದ ಸಾಮೂಹಿಕ ಸಂಘಟನೆ, ಪಕ್ಷದ ಶಾಖೆಯ ಹೆಸರು ಹೆಮ್ಮೆಯಿಂದ ತಲೆ ಬರಹಗಳಲ್ಲಿ ಕಂಡು ಬರುತ್ತಿತ್ತು.

ಪ್ರತಿಯೊಂದು ವೃತ್ತದಲ್ಲೊಂದು ವಿಶೇಷ ಆಕರ್ಷಣೆ


ಇನ್ನು ಪ್ರಮುಖ ವೃತ್ತಗಳಲ್ಲಂತೂ ಕೇರಳದ ದುಡಿಯುವ ಜನತೆ ತಮ್ಮ ಕಲಾತ್ಮಕ ಪರಂಪರೆಯನ್ನೆಲ್ಲಾ ಧಾರೆಯೆರೆದು ಅರ್ಥಪೂರ್ಣ ಅಲಂಕಾರಗಳನ್ನು ಮಾಡಿದ್ದರು. ಉದಾಹರಣೆಗೆ ರೈಲ್ವೇ ಸ್ಟೇಷನ್ನಿನ ಮುಂದಿನ ವೃತ್ತದ ಸುತ್ತಮುತ್ತ ಹೆಜ್ಜೆ ಹೆಜ್ಜೆಗೂ ಆಕರ್ಷಣೆ. ಒಟ್ಟಾರೆ ಕಣ್ಣಿಗೆ ಹಬ್ಬ. ಇಡೀ ವೃತ್ತದ ತುಂಬಾ ಕೆಂಪು ಬಾವುಟಗಳ ಮಹಾಪೂರ ಒಂದೆಡೆ ಪಂಜಾಬಿನ ಇಂದಿನ ಪರಿಸ್ಥಿತಿ ಮೇಲೊಂದು ಕಲಾಕೃತಿ. ಮಾರ್ಕ್ಸ್, ಎಂಗೆಲ್ಸ್, ಲೆನಿನ್, ಸ್ಟಾಲಿನ್ ಭಾವಚಿತ್ರಗಳು. ಅವರ ಉದ್ಧರಣೆಗಳು. ಹಲವಾರು ಜಾನಪದ ಮುಖವಾಡಗಳನ್ನು ಹತ್ತಾರು ಬ್ಯಾನರುಗಳಲ್ಲಿ ಬೋರ್ಡುಗಳು, ಕೆಂಪು ತೋರಣಗಳು ನೆಲ್ಸನ್ ಮೆಂಡೆಲರ ಚಿತ್ರ. ಪುನ್ನಪ್ರ ವಯಲಾರ್ ಹೋರಾಟದ ಮೇಲೊಂದು ಕಲಾಕೃತಿ.

ಪ್ರತಿಯೊಂದು ವೃತ್ತದಲ್ಲೂ ಏನಾದರೊಂದು ವಿಶೇಷ ಆಕರ್ಷಣೆ ಇರುತ್ತಿತ್ತು. ಉಳಿದ ಸಾಮಾನ್ಯ ಅಲಂಕಾರಗಳ ಜತೆ, ಒಂದು ಕಡೆ ಕೇರಳದ ಸಾಂಪ್ರದಾಯಿಕ ಕಡೆ ಅಡಿ ಕುಳಿತ ಮಾರ್ಕ್ಸ್ ಆದರೆ, ಇನ್ನೊಂದು ಕಡೆ ಆನೆ, ಅಂಬಾರಿಯ ಮೇಲೆ 13ನೇ ಮಹಾಧಿವೇಶನದ Logo ಮತ್ತೊಂದು ಕಡೆ ಸುಮಾರು 10 ಅಡಿ ಎತ್ತರದ ತಿರುಗುತ್ತಿರುವ ಬೆಳ್ಳಿಯ ಮಿಂಚಿನ ಕತ್ತಿ-ಸುತ್ತಿಗೆ. ಮಗದೊಂದು ಕಡೆ 10–15 ಅಡಿ ಎತ್ತರದ ಕೆಂಪು ನಕ್ಷತ್ರ (DYFI ಸಂಗಾತಿಗಳ ಕೃತಿ)

13ನೇ ಮಹಾಧಿವೇಶನವನ್ನು ಸಾರುವ ರೀತಿಯೂ ಅಷ್ಟೇ ವೈವಿಧ್ಯಮಯ ಒಂದು ಕಡೆ 13 ಮೆಟ್ಟಲುಗಳಿರುವ ರಚನೆ. ಮೆಟ್ಟಲಿಗೊಂದು ಕೆಂಪು ಧ್ವಜ. ಮಹಾಧಿವೇಶನ ನಡೆದ ಜಾಗ, ವರ್ಷ ಬರೆದ ಫಲಕ. ಇನ್ನೂ ಹಲವು ಕಡೆ 13 ಕೆಂಬಾವುಟಗಳನ್ನು ನಾನಾ ರೀತಿಯ ಕಲಾತ್ಮಕ ವಿನ್ಯಾಸಗಳಲ್ಲಿ ಹಾರಾಟ ಇನ್ನೊಂದು ಕಡೆ ಹದಿಮೂರು ಆನೆಗಳ ಮಸ್ತಕಾಲಂಕಾರ (Logo ಸೇರಿದಂತೆ)ಗಳ ರಚನೆ ಅರ್ಥಪೂರ್ಣ ಫಲಕಗಳ ಜತೆ 13 ಕೇರಳದ ಸಾಂಪ್ರದಾಯಿಕ ಕೊಡೆಗಳು. PARTY CONGRESSನ ಅಕ್ಷರಗಳನ್ನು ಹೊತ್ತ ದೊಡ್ಡ ವಜ್ರಾಕೃತಿಯ ಫಲಕಗಳ ವಿವಿಧ ವಿನ್ಯಾಸಗಳು.

ಇದೇ ರೀತಿ ಕಾರ್ಮಿಕ ಪುರುಷ, ರೈತ ಮಹಿಳೆ ಒಟ್ಟಿಗೆ ಕತ್ತಿ-ಸುತ್ತಿಗೆ ಹಿಡಿದಿರುವ ಸರ್ವೇಸಾಮಾನ್ಯ ಚಿತ್ರದ ವೈವಿಧ್ಯಮಯ ಅವತರಣಿಕೆಗಳು- ಬೀದಿಗಳಲ್ಲಿ, ವೃತ್ತಗಳಲ್ಲಿ, ಮುಖ್ಯ ತಿರುವುಗಳಲ್ಲಿ, ಮೂಲೆಗನ್ನು ಗೋಡೆಗಳನ್ನು - ಅಲಂಕರಿಸಿತ್ತು. ಒಂದು ಕಡೆ ಕಾರ್ಮಿಕ ಪುರುಷ, ರೈತಮಹಿಳೆ ಕೇರಳದ ಸಾಂಪ್ರದಾಯಿಕ ವೇಷಭೂಷಣದಿಂದಿದ್ದರೆ ಇನ್ನೊಂದು ಕಡೆ ಆಧುನಿಕ ಪೋಷಾಕಿನಲ್ಲಿ, ಮಗದೊಂದು ಕಡೆ ಕಥಕ್ಕಳಿಯ ಪೋಷಾಕುಗಳು. ಕೇರಳದ ಜನತೆ ಹಬ್ಬಗಳಲ್ಲಿ ಉಪಯೋಗಿಸುವ ಎಲ್ಲಾ, ಸಾಂಪ್ರದಾಯಿಕ ಪ್ರತೀಕಗಳನ್ನು ಉಪಯೋಗಿಸಲಾಗಿತ್ತು. ಪೇಪರ್ ಕೆಂಪು ನಕ್ಷತ್ರಗಳು, ತೂಗುಹಾಕುವ ಗೂಡುದೀಪಗಳು, ಆನೆಯಮಸ್ತಕಾಲಂಕಾರಗಳನ್ನು ಮಹಾಧಿವೇಶನದ ಸಂದೇಶ ಸಾರಲು ಕಲಾತ್ಮಕವಾಗಿ ಉಪಯೋಗಿಸಲಾಗಿತ್ತು.

ಅಲಂಕಾರಿಗಳಿಗೆ ಉಪಯೋಗಿಸಿದ ಸಾಮಗ್ರಿಗಳಲ್ಲೂ ಅಷ್ಟೇ ವೈವಿಧ್ಯತೆ ಇತ್ತು. ಹಲವು ಕಡೆ ಹಳೆ ಟ್ಯೂಬ್‌ಲೈಟ್ ಟ್ಯೂಬ್‌ಗಳನ್ನು ಸೇರಿಸಿ ಬೇರೆ ಬೇರೆ ಆಕಾರ ರಚನೆಗಳನ್ನು ಮಾಡಿದ್ದರು. ಒಂದು ಕಡೆ ಅದನ್ನು ಪ್ಯಾನೆಲ್ ತರಹ ಬಳಸಿದರೆ, ಇನ್ನೊಂದು ಕಡೆ ಹಲವು ಮೆಟ್ಟಲುಗಳಿರುವ ಸ್ತೂಪ. ಇದಲ್ಲದೆ ತೆಂಗಿನ ತಟ್ಟಿಕೆಗಳು, ಬುಟ್ಟಿಗಳು ಮತ್ತು ಇತರ ಬೆತ್ತದಿಂದ ಹೆಣೆದ ವಸ್ತುಗಳನ್ನು ಬಳಸಿದ ರೀತಿ ಚಮತ್ಕಾರಿಯಾಗಿತ್ತು.







ಸ್ವಯಂಸೇವಕರು

ಮಹಾಧಿವೇಶನಕ್ಕೆ ಸಂಘಟಿಸಲಾದ ಸ್ವಯಂಸೇವಕರಲ್ಲಿ ಮೂರು ಬಗೆ. ಮೊದಲನೆಯದಾಗಿ ಜನವರಿ 1ರಂದು ನಡೆದ ರ್‍ಯಾಲಿಯಲ್ಲಿ ಶಿಸ್ತಿನ ಸಿಪಾಯಿಗಳಾಗಿ ನಡೆಯುವವರು. ಇದಕ್ಕೆ ಗುರಿ ಇದ್ದುದು 50,000 ಸ್ವಯಂಸೇವಕರು ಎಂದಾದರೂ, ಯುವಕ-ಯುವತಿಯರ ಉತ್ಸಾಹದಿಂದ ಇದು 60,000 -70,000ಕ್ಕೆ ಏರಿತ್ತು. ತ್ರಿವೇಂಡ್ರಮ್ ಜಿಲ್ಲೆಯ ಪ್ರತಿಯೊಂದು ವಿಭಾಗದ 2500 ಕೋಟಾ ಕೊಡಲಾಗಿತ್ತು. ಈ ಕೋಟಾ ತುಂಬಿಸಲು ಎಲ್ಲಾ ಕಡೆ ಪೈಪೋಟಿ ಇತ್ತು. ಈ ಸ್ವಯಂ ಸೇವಕರಲ್ಲಿ ಮೂರನೇ ಒಂದು ಭಾಗ ಯುವತಿಯರು.

ಇನ್ನೊಂದು ಬಗೆ ರ್‍ಯಾಲಿಯ ದಿನ ಮುಖ್ಯವಾಗಿ (ಇತರ ದಿನಗಳಲ್ಲೂ ಕೂಡಾ) ನಗರದ ಹಲವು ಕಡೆ ಕಡೆಗಳಲ್ಲಿ ಟ್ರಾಫಿಕ್ ನಿಯಂತ್ರಣ ಮಾಡುವ ಜವಾಬ್ದಾರಿ ಇರುವ ಸ್ವಯಂ ಸೇವಕರು. ಮೂರನೇಯ ಬಗೆ ರ್‍ಯಾಲಿಯ ದಿನ ರ್‍ಯಾಲಿನಡೆಯುವ ಸ್ಥಳದಲ್ಲಿ ವ್ಯವಸ್ಥೆ ನೋಡಿಕೊಳ್ಳುವ ಸ್ವಯಂ ಸೇವಕರು. ಶಂಖು ಮುಖಂ ಕಡಲತೀರದ ಸಾರ್ವಜನಿಕ ಸಭೆ ನಡೆಯುವ ಜಾಗಕ್ಕೆ ಬರುವ ಎರಡು ದಾರಿಗಳಲ್ಲೂ ಸುಮಾರು 2 ಕಿ.ಮಿ ಉದ್ದಕ್ಕೆ ಈ ಸ್ವಯಂಸೇವಕರು ಮಾನವ ಸರಪಣಿ ನಿರ್ಮಿಸಿದ್ದರು. ಇದಲ್ಲದೆ ಮಹಾಧಿವೇಶನ ನಡೆದ ಜಾಗ ಕೃಷ್ಣಪಿಳ್ಳೆ ನಗರದಲ್ಲಿ ಬೇರೆ ಸ್ವಯಂಸೇವಕರು ಇದ್ದರು. ಈ ಸ್ವಯಂ ಸೇವಕರು ಕೆಂಪು ಸಮವಸ್ತ್ರಧಾರಿಗಳಲ್ಲ. ಈ ಮೇಲೆ ಹೇಳಿದ ಮೂರು ಬಗೆಯ ಸ್ವಯಂ ಸೇವಕರ ಸಮವಸ್ತ್ರಗಳಲ್ಲಿ ಅವರ ಜವಾಬ್ದಾರಿಗನುಗುಣವಾಗಿ ಸ್ವಲ್ಪ ವ್ಯತ್ಯಾಸವಿತ್ತು.

ಜನಸಾಗರ

ಅನಂತರ ವಿದೇಶೀ ಸೌಹಾರ್ದ ಪ್ರತಿನಿಧಿಗಳನ್ನು ಜನತೆಗೆ ಪರಿಚಯಿಸಲಾಯಿತು. ಜನತೆ ಭಾರಿ ಹರ್ಷೋದ್ಗಾರಗಳಿಂದ ವಿದೇಶೀ ಸೌಹಾರ್ದ ಪ್ರತಿನಿಧಿಗಳನ್ನು ಅಭಿನಂದಿಸಿದರು. ಸೋವಿಯೆತ್, ಚೀನೀ, ವಿಯೆಟ್ನಾಂ, ಶ್ರೀಲಂಕಾ, ಕ್ಯೂಬಾ ಮತ್ತು SWAPO, ANC ಪ್ರತಿನಿಧಿಗಳನ್ನು ಜನತೆ ವಿಶೇಷವಾಗಿ ಅಭಿನಂದಿಸಿತು.

ಅದರ ನಂತರ ಕಾ. ಜ್ಯೋತಿಬಸು, ಕಾ ಇ.ಎಂ.ಎಸ್ ಕಾ. ಬಿ.ಟಿ.ಆರ್ ಸುದೀರ್ಘವಾಗಿ ಹದಿಮೂರನೇ ಅಧಿವೇಶನದ ಮುಖ್ಯ ನಿರ್ಣಯ ಗಳನ್ನು ಮಹತ್ವವನ್ನು ಜನತೆಗೆ ವಿವರವಾಗಿ ತಿಳಿಸಿದರು. ಕೊನೆಯದಾಗಿ ಕಾ॥ ನಾಯನಾರ್ ಮಾತನಾಡಿದರು. ಎಲ್ಲರ ಭಾಷಣವನ್ನು ವಿಶಾಲ ಜನಸ್ತೋಮ ಗಮನದಿಂದ ಆಲಿಸಿತು. ಭಾಷಣಗಳು ಮುಗಿಯುವವರೆಗೂ ಮೆರವಣಿಗೆಯಲ್ಲಿ ಜನ ಬಂದು ಸುಂದರಯ್ಯ ನಗರಕ್ಕೆ ಸೇರುತ್ತಲೇ ಇದ್ದರು. ಸಾರ್ವಜನಿಕ ಸಭೆಯಲ್ಲಿ ಮಾಡಿದ ಭಾಷಣ ಇಡೀ ತ್ರಿವೇಂದ್ರಮ್‌ಗೆ ಕೇಳುವಂತೆ ಸ್ಪೀಕರ್‌ಗಳನ್ನು ನಗರಕ್ಕೆ ಹೋಗುವ ಎರಡು ಹಾದಿಗಳುದ್ದಕ್ಕೂ, ನಗರದಲ್ಲಿ ಹಲವು ಪ್ರಮುಖ ಸ್ಥಳಗಳನ್ನು ವ್ಯವಸ್ಥೆ ಮಾಡಲಾಗಿತ್ತು. ಸುಂದರಯ್ಯ ನಗರ ಸೇರಲಾಗದ ಜನ ನಿರಾಶರಾಗಬೇಕಿಲ್ಲ. ಇದ್ದಲ್ಲಿಂದಲೇ ಎಲ್ಲಾ ಭಾಷಣಗಳನ್ನು ಕೇಳಬಹುದಾಗಿತ್ತು.

ರ್‍ಯಾಲಿಗೆ ಬಂದ ಸ್ವಯಂಸೇವಕರಿಗೆ ವಿಶೇಷವಾಗಿ ವೇದಿಕೆಯ ಹಿಂಭಾಗದಲ್ಲಿ Closed -Ureail-TV ವ್ಯವಸ್ಥೆ ಮಾಡಲಾಗಿತ್ತು.

ಸಾರ್ವಜನಿಕ ಸಭೆ ಮುಗಿದ ನಂತರವೂ ರಾತ್ರಿ ಯೆಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿ ಸಲಾಗಿತ್ತು. ನಾಟಕ, ಹಾಡುಗಳು, ಜನಪದ ನೃತ್ಯ ಇತ್ಯಾದಿಗಳಿಂದ ಜನರ ಮನರಂಜಿಸಲಾಯಿತು.

ಎಷ್ಟು ಜನ ಆ ಸಭೆಯಲ್ಲಿ ಸೇರಿದ್ದರು ಎಂದು ಅಂದಾಜು ಮಾಡುವುದು ಕಷ್ಟದ ಕೆಲಸ. ಸುಂದರಯ್ಯ ನಗರದಲ್ಲದೆ, ಸುಮಾರು 3-4 ಕಿ.ಮಿ ದೂರದವರೆಗೆ ಜನ ಗಿಜಿ ಗಿಜಿಯಾಗಿ ತುಂಬಿದ್ದರು. ಒಂದು ಅಂದಾಜು ಪ್ರಕಾರ ಸುಮಾರು 10ರಿಂದ 12ಲಕ್ಷ ಜನ ಆ ಸಂಜೆ ಸೇರಿದ್ದರು ಇದು ಹದಿಮೂರನೇ ಮಹಾಧಿವೇಶನಕ್ಕೆ ನಿಜವಾಗಿಯೂ ಅರ್ಹವಾದ ಮುಕ್ತಾಯ ಸಮಾರಂಭವಾಗಿತ್ತು.

ಶಂಖುಮುಖಂ ತೀರದಲ್ಲಿ ಜನಸಾಗರ



ಶಂಖುಮುಖಂ ಸಾಗರತೀರದಲ್ಲಿ ಮುಸ್ಸಂಜೆ ಹೊತ್ತು ಸಾಗರದ ಜತೆ ಪೈಪೋಟಿ ನಡೆಸುವಂತೆ ಜನಸಾಗರ ಸೇರಿತ್ತು. ಸಾಗರ ಮತ್ತು ತ್ರಿವೇಂದ್ರಮ ನಗರದ ನಡುವಿನ ಅಂತರವನ್ನು ತೊಡೆದು ಹಾಕಿತ್ತು. ಸ್ಮರಣೀಯ 13ನೇ ಮಹಾಧಿವೇಶನದ ಕೊನೆಯ ದಿನ (ಜನವರಿ 1) ಹೊಸ ವರ್ಷದ ಮೊದಲದಿನದ ರ್‍ಯಾಲಿ ಅಷ್ಟೇ ಸ್ಮರಣೀಯವಾಗಿತ್ತು.

ರ್‍ಯಾಲಿಗೆ ಬರಿಯ ತ್ರಿವೇಂದ್ರಮ್ ಜಿಲ್ಲೆಯಿಂದಲೇ ಬಹುಸಂಖ್ಯಾತ ಜನ ಬರಬೇಕೆಂದು ಆಗಲೇ ನಿರ್ಧರಿಸಲಾಗಿತ್ತು 5 ಲಕ್ಷ ಜನ ರ್‍ಯಾಲಿಯಲ್ಲಿ ಭಾಗವಹಿಸಬೇಕೆಂಬುದು ಗುರಿಯಾಗಿತ್ತು. ಕೇರಳದಲ್ಲಿ ಯಾವಾಗಲೂ ಆಗುವಂತೆ ನಿರೀಕ್ಷೆ ಮೀರಿ ಗುರಿ ಮೀರಿ ಜನ ಸಾಗರ ಶಂಖ ಮುಖಂ ಸಾಗರ ತೀರಕ್ಕೆ ಹರಿದಿತ್ತು.

ಕಾಂ. ಪಿ.ಸುಂದರಯ್ಯ

ನಗರ ಶಂಖಮುಖಂ ಸಾಗರ ತೀರದಲ್ಲಿ ಸಾರ್ವಜನಿಕ ಸಭೆ ನಡೆಯುವ ಜಾಗಕ್ಕೆ ಕಾ. ಪಿ.. ಸುಂದರಯ್ಯ ನಗರ ಎಂದು ಹೆಸರಿಡಲಾಗಿತ್ತು. ಈ ಜಾಗ ಇಡೀ ತ್ರಿವೇಂದ್ರಮ್‌ನಲ್ಲಿ ಲಕ್ಷ ಗಟ್ಟಲೆ ಜನ ಹಿಡಿಸಬಲ್ಲ ಏಕಮಾತ್ರ ಜಾಗವಾಗಿತ್ತು. ಸಾರ್ವಜನಿಕ ಸಭೆಗೆ ರಚಿಸಲಾಗಿದ್ದ ವಿಶೇಷ ಕಲಾತ್ಮಕ ವೇದಿಕೆಯನ್ನು ನೋಡಲೆಂದೇ ರ್‍ಯಾಲಿಯ ಕೆಲವುದಿನಗಳ ಮೊದಲೇ ಜನ ಅಲ್ಲಿ ಸೇರುತ್ತಿದ್ದರು ದೊಡ್ಡ ದೋಣಿಯಾಕಾರದಲ್ಲಿದ್ದ ಈ ವೇದಿಕೆಯ ಮೆಲ್ಛಾವಣಿಯ ಮೇಲೆ ಮೂರು ಶಿಖರಗಳಂತಹ ರಚನೆ ಇತ್ತು. ಮಧ್ಯದ ಗೋಪುರ ಕ್ರೆಮ್ಲಿನ್‌ನದು. ಇನ್ನೆರಡು ಪಕ್ಕಗಳಲ್ಲಿ ಒಂದು ಕಡೆ ಚೀನಿ ಮನೆಯ ಮಾದರಿ. ಮತ್ತೊಂದು ಕಡೆ ಕೇರಳದ ಮನೆಯ ಮಾದರಿ. ಮೂರು ಶಿಖರಗಳ ಮೇಲೆ ಕೆಂಬಾವುಟ ಹಾರುತ್ತಿತ್ತು. ವೇದಿಕೆ ನಾಲ್ಕು ದಿಕ್ಕುಗಳಿಂದಲೂ ತೆರದಿತ್ತು.

ಕಾ.ಪಿ. ಸುಂದರಯ್ಯ ನಗರ ನಗರ ಕೇಂದ್ರದಿಂದ ಸುಮಾರು 10 ಕಿ.ಮೀ ದೂರದಲ್ಲಿದ್ದು ವಿಮಾನ ನಿಲ್ದಾಣಕ್ಕೆ ಹತ್ತಿರವಾಗಿತ್ತು. ನಗರದಿಂದ ಎರಡು ಹಾದಿಗಳಿದ್ದವು . ಸುಂದರಯ್ಯ ನಗರಕ್ಕೆ. ರ್‍ಯಾಲಿಯ ಮುಖ್ಯ ಆಕರ್ಷಣೆ ಈ ಎರಡು ಹಾದಿಗಳಲ್ಲಿ ಸುಮಾರು 50.000ಕ್ಕಿಂತಲೂ ಹೆಚ್ಚು ಕೆಂಪು ಸಮವಸ್ತ್ರಧಾರಿ ಸ್ವಯಂಸೇವಕ, ಸೇವಕಿಯರ ಶಿಸ್ತಿನ ನಡೆ. ರ್‍ಯಾಲಿಗೆ ಎರಡು ದಿನಗಳ ಹಿಂದಿನಿಂದಲೇ ಜನ ಸೇರಲು ಆರಂಭಿಸಿದ್ದರು. ಕೇರಳದ ಇತರ ಜಿಲ್ಲೆಗಳಿಂದ, ಇತರ ರಾಜ್ಯಗಳಿಂದ ಉತ್ಸಾಹಿ ಪಕ್ಷದ ಸದಸ್ಯರು ಬೆಂಬಲಿಗರು ಬಂದಿದ್ದರು. ಮಹಾರಾಷ್ಟ್ರದ ಸುಮಾರು 2 ಸಾವಿರ ಜನ ಟಿಕೇಟ್‌ರಹಿತ ಪ್ರಯಾಣ ಮಾಡಿ ತ್ರಿವೇಂದ್ರಮ್ ಸೇರಿದ್ದರು. ಇದರಲ್ಲಿ ಆದಿವಾಸಿಗಳು ದೊಡ್ಡ ಸಂಖ್ಯೆಯಲ್ಲಿದ್ದರು. ಇವರ ಟಿಕೇಟ್ ರಹಿತ ಪ್ರಯಾಣವನ್ನು ಕೇರಳದ ಬೂರ್ಜ್ವಾ ಪತ್ರಿಕೆಗಳಿಗೆ ದೊಡ್ಡ ಸುದ್ದಿಯಾಗಿತ್ತು. ಕುಹಕಕ್ಕೆ ಆಹಾರವಾಗಿತ್ತು. ದೂರದ ಪ.ಬಂಗಾಳದಿಂದ ಜನ ಹಲವು ಬಸ್ಸುಗಳನ್ನು ಮಾಡಿಕೊಂಡು ಬಂದಿದ್ದರು. ಆಂಧ್ರ ತಮಿಳುನಾಡುಗಳಿಂದಲೂ ಸಾವಿರಾರು ಜನರು ಬಸ್ಸುಗಳಲ್ಲಿ, ರೈಲುಗಳಲ್ಲಿ ಬಂದಿದ್ದರು. ಕೇರಳದ ಇತರ ಜಿಲ್ಲೆಗಳಿಂದ ಜನ ಬಸ್ಸುಗಳಲ್ಲಿ, ವ್ಯಾನುಗಳಲ್ಲ, ಲಾರಿಗಳಲ್ಲಿ, ಮತ್ತಿತರ ವಾಹನಗಳಲ್ಲಿ ಬಂದಿದ್ದರು. ಕರ್ನಾಟಕದಿಂದ ಸುಮಾರು ಎರಡು ಸಾವಿರ ಜನ ರ್‍ಯಾಲಿಗೆ ಬಂದಿದ್ದರು. ಮಂಗಳೂರು, ಬೆಂಗಳೂರು, ರಾಯಚೂರು ಮತ್ತಿತರ ಕೇಂದ್ರಗಳಿಂದ ಬಸ್ಸು, ರೈಲು, ಇತರ ವಾಹನಗಳಲ್ಲ, ಪಕ್ಷದ ಸದಸ್ಯರು , ಬೆಂಬಲಿಗರು ಬಂದಿದ್ದರು.

ಸ್ವಯಂಸೇವಕರ ಕೆಂಪು ನದಿ ಸಾಗರದತ್ತ

ರ್‍ಯಾಲಿಯ ದಿನ ಬೆಳಗಿನಿಂದಲೇ ಜನ ಮೆರವಣಿಗೆಯಲ್ಲಿ ಸುಂದರಯ್ಯ ನಗರ ಸೇರಲು ಆರಂಭಿಸಿದ್ದರು. ತಮ್ಮ ತಮ್ಮ ಬ್ಯಾನರುಗಳನ್ನು ಹಿಡಿದು ಉತ್ಸಾಹದಿಂದ ಘೋಷಣೆಗಳನ್ನು ಕೂಗುತ್ತಾ. ಆದರೆ ಮುಖ್ಯ ರ್‍ಯಾಲಿ -ಉತ್ತರ ಮತ್ತು ದಕ್ಷಿಣವೆಂದು ವಿಭಾಗಿಸಲಾಗಿತ್ತು. ಎರಡೂ ರ್‍ಯಾಲಿಗಳಲ್ಲಿ 25 ರಿಂದ 30 ಸಾವಿರ ಸ್ವಯಂಸೇವಕರ ಸೇವಿಕೆಯರು ಮುಖ್ಯ ಭಾಗವಾಗಿದ್ದರು. ಉತ್ತರದ ರ್‍ಯಾಲಿ ನಿಂದ ಆರಂಭವಾಯಿತು ಇದರ ನಾಯತತ್ವವನ್ನು ಕಾ ಬಿ.ಟಿ.ಆರ್. ಮತ್ತಿತರ ಪಾಲಿಟ್ ಬ್ಯೂರೋ ನಾಯಕರುಗಳು ವಹಿಸಿದ್ದರು. ದಕ್ಷಿಣ ರ್‍ಯಾಲಿ ನಿಂದ ಆರಂಭವಾಗಿ ಕಾ ಇ. ಎಂ. ಎಸ್. ಕಾ. ನಾಯನಾರ್, ಮತ್ತಿತರ ನಾಯಕರು ಇದರ ನಾಯಕತ್ವ ವಹಿಸಿದ್ದರು. ಎರಡೂ ಸ್ವಯಂಸೇವಕರ ರ್‍ಯಾಲಿ ಆರಂಭದ ಮೊದಲು, ಪ್ರಾರಂಭವಾದ ಪರೇಡ್ ಇತ್ತು .

ಎರಡೂ ರ್‍ಯಾಲಿಗಳಲ್ಲಿ ಮುಂದ ತೆರೆದ ವ್ಯಾನುಗಳಲ್ಲಿ ನಾಯಕರು, ಅದರ ಹಿಂದೆ ಕೆಂಬಾವುಟ ಬ್ಯಾನರುಗಳನ್ನು ಹಿಡಿದ ಕೆಲವು ಪ್ರಮುಖ ನಾಯಕರು ಮತ್ತು ಪ್ರತಿನಿಧಿಗಳು ಇನ್ನುಳಿದ ಪ್ರತಿನಿಧಿಗಳು ಅದರ ಹಿಂದೆ ಬಸ್ಸುಗಳಲ್ಲಿ, ವ್ಯಾನುಗಳಲ್ಲಿ ಅದರ ಹಿಂದ ಸ್ವಯಂಸೇವಕರ ಸೈನ್ಯದ ತುಕಡಿಗಳು. ಸ್ವಯಂಸೇವಕರ ಸಾಲುಗಳ ಮುಂದೆ ಕೆಂಬಾವುಟದಿಂದ ಸಜ್ಜಿತವಾದ ಕೈನೆಟಿಕ್ ಹೊಂಡಾದ ತುಕಡಿ ಇತ್ತು. ಅದರ ಹಿಂದೆ ಶಿಸ್ತಿನ ಹೆಜ್ಜೆಗಳನ್ನಿಡುತ್ತಾ ಸ್ವಯಂಸೇವಕರ ತುಕಡಿಗಳು. ಪ್ರತಿಯೊಂದು ತುಕಡಿಯಲ್ಲಿ 50 ಸ್ವಯಂಸೇವಕರು ಇರುತ್ತಿದ್ದರು. ಮಹಿಳಾ ಸ್ವಯಂಸೇವಿಕೆಯರ ಪ್ರತ್ಯೇಕ ತುಕಡಿಗಳಿರುತ್ತಿದ್ದವು. ಎರಡು ಪುರುಷ ತುಕಡಿಗಳಿಗೆ, ಒಂದು ಮಹಿಳಾ ತುಕಡಿ ಇತ್ತು. ಸ್ವಯಂ ಸೇವಕರ ತುಕಡಿಗಳ ಹಿಂದೆ ಉತ್ಸಾಹಿ ಜನತೆ. ರ್‍ಯಾಲಿ ಬಂದ ಎರಡೂ ಹಾದಿಗಳಲ್ಲಿ ಜನ ಕಿಕ್ಕಿರಿದು ನೆರೆದು ಘೋಷಣೆಗಳನ್ನು ತೂಗಿದರು. ಹರ್ಷೋದ್ಗಾರ ಮಾಡಿದರು. ಆ ಹೆತ್ತಿಗೆ ಸಾಗರದಲ್ಲಿ ಕೆಂಬಾವುಟ ಹೊತ್ತ ದೋಣಿಗಳ ಮೆರವಣಿಗೆಯೂ ನಡೆಯಿತು. ಈ ಎರಡೂ ರ್‍ಯಾಲಿಗಳು ಸುಂದರಯ್ಯನಗರ ಸೇರುವಾಗ ಆಗಲೇ 6- 30 ಗಂಟೆ ಆಗಿತ್ತು. ಇದಕ್ಕಿಂತ ಮೊದಲೇ ಲಕ್ಷಗಟ್ಟಲೆ ಜನ ಕಿಕ್ಕಿರಿದು ನೆರೆದಿದ್ದರು. ಹಲವು ಪಾಲಿಟ್ ಬ್ಯೂರೋ ನಾಯಕರು, ಪ್ರತಿನಿಧಿಗಳು ವಿದೇಶಿ ಸೌಹಾರ್ದ ಪ್ರತಿನಿಧಿಗಳು ನೇರವಾಗಿ ಸುಂದರಯ್ಯ ನಗರಕ್ಕೆ ರ್‍ಯಾಲಿ ಸೇರುವ ಮೊದಲೇ ಹಲವಾರು ವಾಹನಗಳಲ್ಲಿ ಬಂದಿದ್ದರು.

ಸುಮಾರು 5ಗಂಟೆ ಹೊತ್ತಿಗೆ ವೇದಿಕೆಯಮೇಲೆ ಕಾರ್ಯಕ್ರಮ ಆರಂಭವಾಗಿತ್ತು. ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೊಡಲಾಯಿತು- ಕೇಂದ್ರ ಸರ್ಕಾರ ಮತ್ತು ಕಾಂಗ್ರೆಯನ್ನು ವ್ಯಂಗ್ಯ ಮಾಡುವ ತೆಯ್ಯಂ RED CMOIRದಿಂದ ಸಮ್ಮೇಳನದ ಕ್ರಾಂತಿಕಾರಿ ಹಾಡುಗಳು, ಸಮುದಾಯದಿಂದ 'ಪರ್ಜಂ' ಹಾಡುಗಳು.

ಸಾರ್ವಜನಿಕ ಸಭೆ

ಸುಮಾರು 7 ಗಂಟೆಯ ಹೊತ್ತಿಗೆ ಸಾರ್ವಜನಿಕ ಸಭೆ ಆರಂಭವಾಯಿತು. ಅಲಂಕೃತ ವೇದಿಕೆಯ ಮುಂಭಾಗದ ಸಾಲಿನಲ್ಲಿ ಪಾಲಿಟ್ ಬ್ಯೂರೋ ಸದಸ್ಯರು. ಹಿಂದಿನ ಎರಡು ಸಾಲುಗಳಲ್ಲಿ ವಿದೇಶೀ ಸೌಹಾರ್ದ ಪ್ರತಿನಿಧಿಗಳು ಕುಳಿತಿದ್ದರು. ಕೇಂದ್ರಸಮಿತಿ ಸದಸ್ಯರಿಗೆ ಮತ್ತು ಪ್ರತಿನಿಧಿಗಳಿಗೆ ಪ್ರತ್ಯೇಕ ಜಾಗದ ವ್ಯವಸ್ಥೆ ಮಾಡಲಾಗಿತ್ತು.

ಕಾ॥ಅಚ್ಯುತಾನಂದನ್ ಜನತೆಯನ್ನು ಅಭಿನಂದಿಸಿ ಸ್ವಾಗತ ಭಾಷಣ ಮಾಡಿದರು. ಕಾ॥ಸುರಜೀತ್ ಸಭೆಯ ಅಧ್ಯಕ್ಷತೆ ವಹಿಸಿದರು. ಕಾ॥ಸುರಜೀತ್ ಹದಿಮೂರನೇಯ ಮಹಾಧಿವೇಶನದ ಮಹತ್ವವನ್ನು ವಿವರಿಸಿದರು. ಆ ಮೇಲೆ ಕಾ॥ ಸುರಜೀತ್ ಮಹಾಧಿವೇಶನ ಚುನಾಯಿತ್ ಹೊಸ ಪಾಲಿಟ್ ಬ್ಯೂರೋ ಸದಸ್ಯರನ್ನು ಜನತೆಗೆ ಪರಿಚಯಿಸಿದರು.

ಪುಟ 10ಕ್ಕೆ

> **ಮರೆಯಲಾಗದ ಸುಂದರಯ್ಯ**
>
> ಕಾ॥ ಪಿ. ಸುಂದರಯ್ಯ ಹೆಸರು ಹೊತ್ತ ನಗರದಲ್ಲಿ ಅವರನ್ನು ಮರೆಯಲಾದೀತೇ. ಎಲ್ಲಾ ಪಾಲಿಟ್‌ಬ್ಯೂರೋ ಸದಸ್ಯರನ್ನು ಅವರು ಕುಳಿತ ಸಾಲಿನ ಪ್ರಕಾರ ಪರಿಚಯಿಸುತ್ತಿದ್ದ ಕಾ॥ ಮೋಹನನ್ . ಎಂ.ಪಿ., ಅವರಿಗೂ ಕಾ॥ ಸುಂದರಯ್ಯರನ್ನು ಮರೆಯಲಾಗಿಲ್ಲ. ಕಾ॥ ಬಸವಪುನ್ನಯ್ಯನವರನ್ನು ಪರಿಚಯಿಸುತ್ತಾ ಇವರು ತಲಂಗಾರಣಾ ವೀರ ಕಾ॥ ಸುಂದರಯ್ಯ ಎಂದರು.

ಇತಿಹಾಸ ಚಕ್ರ......

(12.ನೇ ಪುಟದಿಂದ)

ಸ್ವಾಗತಿಸಿದ ವಿವರಗಳನ್ನು 30ನೇ ತಾರೀಖು ಒಂದು ಅಂತರರಾಷ್ಟ್ರೀಯ ಸುದ್ದಿಯನ್ನಾಗಿ ತಾಸ್. ಕ್ಸಿನ್‌ಹುವ, ಎ.ಡಿ.ಎಲ್. (ಪೂರ್ವ ಜರ್ಮನಿಯ ಸುದ್ದಿ ಸಂಸ್ಥೆ) ಓ.ಡಿ.ಕೆ. (ಜೆಕೋಸ್ಲಾವಿಯಾದ ಸುದ್ದಿ ಸಂಸ್ಥೆ) ಮುಂತಾದ ಸಂಸ್ಥೆಗಳು ಪ್ರಮುಖ ಸುದ್ದಿಯನ್ನಾಗಿ ಪ್ರಕಟಿಸಿದವು. ಇದರಿಂದಾಗಿ ಜಗತ್ತಿನೆಲ್ಲೆಡೆ ಇರುವ ಸಮಾಜವಾದಿ ದೇಶಗಳಲ್ಲಿನ ಕೋಟ್ಯಾಂತರ ಜನರು ಅಧಿವೇಶನ ನಡೆಯುವ ದಿನಗಳಲ್ಲಿ ತಿರುವನಂತಪುರದ ಕೃಷ್ಣಪಿಳ್ಳೆ ನಗರದಲ್ಲಿ ನಡೆಯುತ್ತಿದ್ದ ವರ್ತಮಾನಗಳನ್ನು ಓದಲು ಮತ್ತು ಕೇಳಲು ಸಾಧ್ಯವಾಯಿತು.

ಭಾರತದ ಕಮ್ಯೂನಿಸ್ಟ್ ಚಳುವಳಿಯಲ್ಲಿ ಮೊಟ್ಟ ಮೊದಲನೆಯ ಬಾರಿ ಸೋವಿಯತ್ ದೂರದರ್ಶನ ಸಂಸ್ಥೆ ತಿರುವನಂತಪುರದ ಅಧಿವೇಶನವನ್ನು ಸಿನಿಮಾ ಮತ್ತು ವಿಡಿಯೋ ಕ್ಯಾಸೆಟ್ ರೂಪದಲ್ಲಿ ತಯಾರಿಸಿದೆ. ಈ ವಿಡಿಯೋ ಕ್ಯಾಸೆಟ್‌ಗಳು ಸೋವಿಯತ್ ಯೂನಿಯನ್‌ನಲ್ಲಿ ಮಾರಾಟ ಮಾಡಲಾಗುತ್ತದೆ. ಸೋವಿಯತ್ ನಿಯೋಗದ ಮುಖಂಡರಾದ ಗೋಬಿನ್ ಮಾಡಿದ ಭಾಷಣ, ಪತ್ರಿಕಾ ಸಮ್ಮೇಳನ, ಇ.ಎಂ.ಎಸ್. ಮತ್ತು ಅಧ್ಯಕ್ಷ ಮಂಡಲಿಯ ಕ್ಲೋಸ್‌ಅಫ್ ದೃಶ್ಯಗಳು ಶೀಘ್ರದಲ್ಲೇ ಯುರೋಪಿನ ಎಲ್ಲಾ ಸಿನಿಮಾ ಥಿಯೇಟರ್‌ಗಳಲ್ಲಿಯೂ ವಿಡಿಯೋ ಮಾರ್ಕೆಟ್‌ಗಳಲ್ಲಿಯೂ ಲಕ್ಷಾಂತರ ಡಾಲರುಗಳಿಗೆ ಮಾರಾಟವಾಗಲಿದೆ.

ಕಾ. ಕುಂಜನ್‌ನಂದನ್ ನಾಯರ್

(ದೇಶಾಭಿಮಾನಿಯಿಂದ)

ಅನುವಾದ ಇ.ಕೆ.ಎನ್.ರಾಜನ್

ಉದಯ



ಆರ್ಮೇನಿಯಾ ಭೂಕಂಪದ ಬಗ್ಗೆ

ಆರ್ಮೇನಿಯಾದಲ್ಲಿ ಸಾವಿರಾರು ಪ್ರಾಣಗಳನ್ನು ತೆಗೆದುಕೊಂಡ, ಇಡೀ ನಗರಗಳನ್ನೇ ನೆಲಸಮ ಮಾಡಿ ಕುಟುಂಬ-ಕುಟುಂಬಗಳನ್ನೇ ಅಳಿಸಿ ಹಾಕಿದ ಭೂಕಂಪ ಉಂಟು ಮಾಡಿರುವ ಅಪಾರ ವಿನಾಶದ ಬಗ್ಗೆ ತನ್ನ ತೀವ್ರ ದುಃಖವನ್ನು ವ್ಯಕ್ತಪಡಿಸುವ ಒಂದು ನಿರ್ಣಯವನ್ನು ೧೩ನೇ ಮಹಾಧಿವೇಶನ ಅಂಗೀಕರಿಸಿತು.

ಈ ವಿಪತ್ತಿನ ಸಮಯದಲ್ಲಿ ಸೋವಿಯತ್ ಸರ್ಕಾರ ತುರ್ತು ಕ್ರಮ ಕೈಗೊಂಡದ್ದಲ್ಲದೆ, ವಿಶ್ವದ ಜನತೆ, ಸರ್ಕಾರಗಳು ತಕ್ಷಣ ಪರಿಹಾರ ಒದಗಿಸಲು ಮುಂದೆ ಬಂದುದನ್ನು ತೃಪ್ತಿಯಿಂದ ಗಮನಿಸಿದ ಮಹಾಧಿವೇಶನ ದುಃಖತಪ್ತ ಕುಟುಂಬಗಳಿಗೆ ತನ್ನ ಹಾರ್ದಿಕ ಸಂತಾಪವನ್ನು ಹಾಗೂ ಈ ವಿಪತ್ತನ್ನು ಎದುರಿಸುವಲ್ಲಿ ಸೋವಿಯತ್ ಸರ್ಕಾರ ಮತ್ತು ಜನತೆಯೊಂದಿಗೆ ಸೌಹಾರ್ದತೆಯನ್ನು ವ್ಯಕ್ತಪಡಿಸಿದೆ.

ರಾಷ್ಟ್ರೀಯ ಐಕ್ಯತೆ-ಪ್ರಜಾಪ್ರಭುತ್ವ ರಕ್ಷಣೆಗೆ

ಕೇಂದ್ರ-ರಾಜ್ಯ ಸಂಬಂಧಗಳ ಪುನರ್ರಚನೆ

ಕೇಂದ್ರದಲ್ಲಿ ಆಳುವ ಪಕ್ಷದ ನೀತಿಗಳಿಂದಾಗಿ ಕೇಂದ್ರ-ರಾಜ್ಯ ಸಂಬಂಧಗಳು ಉಲ್ಬಣಗೊಳ್ಳುತ್ತಿದ್ದು, ಇದರಿಂದ ದೇಶದ ಐಕ್ಯತೆಗೆ ಸಂಬಂಧಪಟ್ಟಂತೆ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಪ್ರಜಾಪ್ರಭುತ್ವ ಬಲಗೊಳಿಸಲು, ಎಲ್ಲಾ ರಾಜ್ಯಗಳ ಸಮಾನ ಅಭಿವೃದ್ಧಿಗಾಗಿ ಕೇಂದ್ರ-ರಾಜ್ಯ ಸಂಬಂಧಗಳ ಪುನರ್ರಚನೆ ಈಗಿನ ತುರ್ತು ಅಗತ್ಯ ಎಂದು ೧೩ನೇ ಮಹಾಧಿವೇಶನ ಅಂಗೀಕರಿಸಿದ ಒಂದು ನಿರ್ಣಯ ಹೇಳಿದೆ. ಈ ನಿರ್ಣಯ ಪೂರ್ಣ ವಿವರ ಇಲ್ಲಿದೆ.

ಕಾಂಗ್ರೆಸ್(ಐ) ಕೇಂದ್ರ ಸರ್ಕಾರದ ಕೇಂದ್ರ-ರಾಜ್ಯ ಸಂಬಂಧಗಳನ್ನು ಕುರಿತಂತೆ ತಳೆಯುವ ಸರ್ವಾಧಿಕಾರಿ ಮತ್ತು ಪ್ರಜಾಪ್ರಭುತ್ವ-ವಿರೋಧಿ ನಿಲುವಿನ ಫಲಿತಾಂಶವಾಗಿ ದೇಶದಲ್ಲಿ ಕೇಂದ್ರ-ರಾಜ್ಯ ಸಂಬಂಧಗಳು ಹದಗೆಡುತ್ತಿರುವುದರ ಬಗ್ಗೆ ೧೩ನೇ ಮಹಾಧಿವೇಶನ ಅತ್ಯಂತ ಆತಂಕದಿಂದ ಗಮನಿಸುತ್ತದೆ.

ಎಲ್ಲಾ ಅಧಿಕಾರಗಳನ್ನು ಕೇಂದ್ರದ ಕೈಯಲ್ಲಿ ಕೇಂದ್ರೀಕರಿಸುವ ಪ್ರಯತ್ನಗಳ ಭಾಗವಾಗಿ ಕಾಂಗ್ರೆಸ್(ಐ) ಸರಕಾರ ರಾಜ್ಯಗಳಿಗೆ ಈಗ ಇರುವ ಅಧಿಕಾರಗಳು ಮತ್ತು ಹಕ್ಕುಗಳನ್ನು ಮೊಟಕುಗೊಳಿಸುತ್ತಾ ಸಾಗಿದೆ. ಈ ಸರ್ವಾಧಿಕಾರೀ ನಿಲುವು ತೀವ್ರಗೊಳ್ಳಲು ಬಿಟ್ಟರೆ ಅದು ಕೇಂದ್ರ ಹಾಗೂ ರಾಜ್ಯಗಳ ಸಂಬಂಧಗಳನ್ನು ಉಲ್ಬಣಗೊಳಿಸಿ ರಾಷ್ಟ್ರೀಯ ಐಕ್ಯತೆಗೆ ತೊಂದರೆಯುಂಟುಮಾಡುತ್ತದೆ.

ರಾಜ್ಯ ಸರಕಾರಗಳ ಅಧಿಕಾರ ವ್ಯಾಪ್ತಿಯಲ್ಲಿ ತೀವ್ರ ಸವೆತ ಹಲವಾರು ರಂಗಗಳಲ್ಲಿ ಇತ್ತೀಚೆಗೆ ವ್ಯಕ್ತಗೊಂಡಿದೆ. ವಿಶೇಷವಾಗಿ ತೆರಿಗೆ ಕಂದಾಯ ಮೂಲಗಳು ಮತ್ತು ಮಾರುಕಟ್ಟೆಯಿಂದ ಸಾಲ ಎತ್ತುವ ಸೌಲಭ್ಯಗಳನ್ನು ಹೆಚ್ಚು-ಹೆಚ್ಚಾಗಿ ರಾಜ್ಯ ಸರಕಾರಗಳಿಂದ ಕೇಂದ್ರ ಸರ್ಕಾರದ ಕೈಗಳಲ್ಲಿ ಕೇಂದ್ರಿಕರಿಸುತ್ತಾ ರಾಜ್ಯ ಸರ್ಕಾರಗಳ ಹಣಕಾಸಿನ ಸಂಪನ್ಮೂಲಗಳಲ್ಲಿ ವ್ಯವಸ್ಥಿತವಾಗಿ ಕಡಿತ ತರಲಾಗುತ್ತಿದೆ. ರಾಜ್ಯ ಸರಕಾರಗಳ ಯೋಜನಾ ಗಾತ್ರದ ಮೇಲೆ ವಿಪರೀತ ಮಿತಿ ಹೇರಲಾಗುತ್ತಿದೆ. ಕೇಂದ್ರ ಸರ್ಕಾರ ನಿಗಧಿಗೊಳಿಸುವ ಬೆಲೆಗಳಲ್ಲಿನ ಹೆಚ್ಚಳದ ಬಳಕೆಯಿಂದ ಬರುವ ಹೆಚ್ಚಿನ ತೆರಿಗೆ ಆದಾಯದಲ್ಲಿ ರಾಜ್ಯ ಸರಕಾರಗಳ ನ್ಯಾಯಬದ್ಧ ಪಾಲನ್ನು ನಿರಾಕರಿಸಲಾಗುತ್ತಿದೆ. ಕೇಂದ್ರದ ಹಣಕಾಸು ಹಾಗೂ ಆರ್ಥಿಕ ಧೋರಣೆಗಳಿಂದಾಗಿ ರಾಜ್ಯ ಸರಕಾರಗಳು ಸಂಪನ್ಮೂಲ ಸಂಗ್ರಹಿಸುವಲ್ಲಿ ಮತ್ತು ಹಣಕಾಸಿನ ಹೊಂದಾಣಿಕೆ ಮಾಡುವಲ್ಲಿ ಅಸಹಾಯಕತೆ ಎದುರಿಸುತ್ತಿವೆ.

ಅನುಷ್ಠಾನಕ್ಕೆ ತರಲು ಸಾಧ್ಯವಿರುವ ಕೈಗಾರಿಕಾ ಯೋಜನೆಗಳಿಗೂ ಮಂಜೂರಾತಿ ತಡೆಹಿಡಿಯುವುದು, ವಿಶೇಷ ಹಣಕಾಸು ತೊಂದರೆ ಸೃಷ್ಟಿಸುವುದು, ಓವರ್‌ಡ್ರಾಫ್ಟ್ ನಿರಾಕರಣೆ ತುರ್ತು ಸಮಯದಲ್ಲಿ ಆಹಾರ ಸರಬರಾಜು ಕಡಿತಗೊಳಿಸುವುದು ಮುಂತಾದವುಗಳ ಮೂಲಕ ಎಡ-ನೇತೃತ್ವದ ಸರಕಾರಗಳ ವಿರುದ್ಧ ಪಕ್ಷಪಾತ ನಡೆಸಲು ಉದ್ದೇಶಪೂರ್ವಕ ಪ್ರಯತ್ನ ನಡೆಸಲಾಗುತ್ತಿದೆ.

ಹೆಚ್ಚಿನ ಸಂದರ್ಭಗಳಲ್ಲಿ ಕೇಂದ್ರ ಸರಕಾರದ ಮತ್ತು ಆಳುವ ಪಕ್ಷದ ಏಜೆಂಟರಂತೆ ವರ್ತಿಸುವ ರಾಜ್ಯಪಾಲರುಗಳ ಪಾತ್ರ ಇತ್ತೀಚೆಗೆ ಸಾರ್ವಜನಿಕರ ತೀವ್ರ ಗಮನಕ್ಕೆ ಬಂದಿದೆ. ಕೇರಳ ಮತ್ತು ಆಂಧ್ರಪ್ರದೇಶಗಳ ಸದ್ಯದ ರಾಜ್ಯಪಾಲರುಗಳ ಸಂವಿಧಾನ-ವಿರೋಧೀ ನಗ್ನ ಕ್ರಮಗಳ ಹಾಗೂ ರಾಜ್ಯದ ಧೋರಣೆಗಳಲ್ಲಿ ಪಕ್ಷಪಾತ ಪೂರ್ಣ ಮಧ್ಯಪ್ರವೇಶದ ಮೂಲಕ ಕೇಂದ್ರದ ಆಳುವ ಪಕ್ಷ ರಾಜ್ಯಪಾಲರ ಹುದ್ದೆಯ ದುಷ್ಟ ದುರ್ಬಳಕೆಯನ್ನು ಹೇಗೆ ಮಾಡುತ್ತದೆ ಎಂಬುದು ಎಲ್ಲರ ಗಮನಕ್ಕೆ ಬಂದಿದೆ. ಮಿಝೋರಾಂ, ನಾಗಾಲ್ಯಾಂಡ್ ತಮಿಳುನಾಡು ಮುಂತಾದೆಡೆ ರಾಜ್ಯ ವಿಧಾನ ಮಂಡಲಗಳಲ್ಲಿನ ರಾಜಕೀಯ ಅನಿಶ್ಚಿತತೆಯ ಸಮಯದಲ್ಲಿ ರಾಜ್ಯಪಾಲರುಗಳ ಪಕ್ಷಪಾತ ಪೂರ್ಣ ಪಾತ್ರ ಕೇಂದ್ರ-ರಾಜ್ಯ ಸಂಬಂಧಗಳಲ್ಲಿನ ಒಂದು ಪ್ರಮುಖ ಪ್ರಶ್ನೆ ಯತ್ತ ಎಲ್ಲರ ಗಮನ ಸೆಳೆದಿದೆ.

ರಾಜ್ಯಸರಕಾರಗಳನ್ನು ಬದಿಗೊತ್ತಿ ಜಿಲ್ಲಾ ಮ್ಯಾಜಿಸ್ಟ್ರೇಟ್‌ಗಳನ್ನು, ಕಲೆಕ್ಟರುಗಳನ್ನು ಪ್ರಧಾನ ಮಂತ್ರಿ ಭೇಟಿಯಾಗುವ ಇನ್ನೊಂದು ಆತಂಕಕಾರೀ ಪ್ರವೃತ್ತಿ ತಲೆದೋರಿದೆ. ವಿಕೇಂದ್ರೀಕರಣದ ಹೆಸರಿನಲ್ಲಿ ಜಿಲ್ಲಾ ಯೋಜನೆಯ ನೆವದಲ್ಲಿ ರಾಜ್ಯಸರಕಾರಗಳನ್ನು ಬದಿಗೆ ತಳ್ಳುವ ಒಂದು ವ್ಯವಸ್ಥೆ ರೂಪಿಸುವ ಪ್ರಯತ್ನ ನಡೆದಿದೆ. ರಾಜ್ಯ ಸರಕಾರಗಳಿಗೆ ಅಧಿಕಾರದ ವಿಕೇಂದ್ರೀ ಕರಣ ಮಾಡುವ ಬದಲು ಕೇಂದ್ರ ಸರಕಾರ ಪಂಚಾಯಿತೀ ರಾಜ್ಯದ ಹೆಸರಿನಲ್ಲಿ ರಾಜ್ಯಗಳ ಹಕ್ಕುಗಳನ್ನು ಕುಂಠಿತಗೊಳಿಸಲು ಪ್ರಯತ್ನಿಸುತ್ತಿದೆ.


ಕೇಂದ್ರ-ರಾಜ್ಯ ಸಂಬಂಧಗಳನ್ನು ಪುನರ್ರಚಿಸಬೇಕೆಂಬ ಬೇಡಿಕೆಯಿಂದಾಗಿ ಸರ್ಕಾರಿಯಾ ಆಯೋಗ ನೇಮಿಸಲ್ಪಟ್ಟಿತು. ಸಮಸ್ಯೆಯ ಹಲವು ಅಂಶಗಳನ್ನು ಸರ್ಕಾರಿಯಾ ಆಯೋಗದ ವರದಿ ಗುರುತಿಸಿದರೂ ಕೇಂದ್ರ-ರಾಜ್ಯ ಸಂಬಂಧಗಳನ್ನು ಪ್ರಜಾಸತ್ತಾತ್ಮಕವಾಗಿ ಪುನರ್ರಚಿಸುವ ಮೂಲಭೂತ ಕ್ರಮಗಳನ್ನು ಸೂಚಿಸುವಲ್ಲಿ ಅದು ವಿಫಲಗೊಂಡಿದೆ. ಕೇಂದ್ರ - ರಾಜ್ಯ ಸಂಬಂಧಗಳಲ್ಲಿನ ಕೆಲವು ವಿಕೃತಿಗಳನ್ನು ನಿವಾರಿಸಲು ಸೂಚಿಸಿದ ಸೀಮಿತ ಕ್ರಮಗಳ ಬಗ್ಗೆಯೂ ಹೆಚ್ಚು ಹೇಳಿಲ್ಲ. ಕೇಂದ್ರ ಸರ್ಕಾರವೂ ಈ ಬಗ್ಗೆ ಯಾವುದೆ ಕ್ರಮ ಕೈಗೊಂಡಿಲ್ಲ.

ಜನಾಂಗ, ಭಾಷೆ ಮತ್ತು ಸಂಸ್ಕೃತಿಯಲ್ಲಿ ಇಷ್ಟೊಂದು ಭಿನ್ನತೆ ಇರುವ ಭಾರತದಂತಹ ಒಂದು ದೇಶದಲ್ಲಿ ರಾಷ್ಟ್ರೀಯ ಸಮಗ್ರತೆಯನ್ನು ಸಾಧಿಸುವುದು ಮತ್ತು ಐಕ್ಯತೆಯನ್ನು ಬಲಗೊಳಿಸುವುದು ಅಧಿಕಾರದ ವಿಕೇಂದ್ರೀಕರಣದಿಂದ ಮಾತ್ರ ಸಾಧ್ಯ ಎಂಬುದು ಮೊದಲಿಂದಲೂ ನಮ್ಮ ದೃಷ್ಟಿಕೋಣ. ವಿಭಿನ್ನ ರಾಜ್ಯಗಳ ಜನತೆಯ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳನ್ನು ಮತ್ತು ವಿಶಿಷ್ಟತೆಗಳನ್ನು ತುಚ್ಛೀಕರಿಸದೆ, ಅವನ್ನು ಮಾನ್ಯ ಮಾಡುವ ಭಾರತವಷ್ಟೇ ಒಂದು ಬಲಶಾಲಿ ಮತ್ತು ಏಕೀಕೃತ ಭಾರತವಾಗಲು ಸಾಧ್ಯ. ನಾವು ಬಲಶಾಲೀ ರಾಜ್ಯಗಳು ಇರಬೇಕೆಂದು ಪ್ರತಿಪಾದಿಸುತ್ತೇವೆ. ಆದರೆ ಯಾವುದೇ ಸಂದರ್ಭದಲ್ಲಿ ಒಂದು ದುರ್ಬಲ ಕೇಂದ್ರ ಬೇಕೆಂದು ಹೇಳುವುದಿಲ್ಲ. ಕೇಂದ್ರ ಮತ್ತು ರಾಜ್ಯಗಳ ಅಧಿಕಾರ ವಲಯಗಳನ್ನು ಸ್ಪಷ್ಟವಾಗಿ ಗುರುತಿಸಿದ ಮೇಲೆ ಬಲಶಾಲೀ ರಾಜ್ಯಗಳ ಪರಿಕಲ್ಪನೆ ಒಂದು ಬಲಶಾಲೀ ಕೇಂದ್ರದ ಪರಿಕಲ್ಪನೆಗೆ ವಿರುದ್ಧವಾಗಬೇಕಾಗಿ ಬರುವುದಿಲ್ಲ.

ರಾಷ್ಟ್ರೀಯ ಐಕ್ಯತೆಯನ್ನು ಬಲಗೊಳಿಸಲು, ಕೇಂದ್ರದ ನ್ಯಾಯಬದ್ಧ ಅಧಿಕಾರವನ್ನು ಕಾಪಾಡಿಕೊಳ್ಳಲು ರಾಜ್ಯಗಳಿಗೆ ಅವುಗಳ ಪಾಲಿನ ಅಧಿಕಾರಗಳನ್ನು ನೀಡುವುದು ಅಗತ್ಯ. ಕೇಂದ್ರದ ಈಗಿನ ಸರ್ವಾಧಿಕಾರೀ ಆಕ್ರಮಣಗಳು, ರಾಜ್ಯಪಾಲರ ಹುದ್ದೆಯ ನಗ್ನ ದುರುಪಯೋಗ, ಕಾಂಗ್ರೆಸ್ಸೇತರ ರಾಜ್ಯ ಸರಕಾರಗಳ ವಿರುದ್ಧ ಪಕ್ಷಪಾತದ ನಿಲುವು ಇದೆಲ್ಲಾ ಕೇಂದ್ರ-ರಾಜ್ಯ ಸಂಬಂಧಗಳನ್ನು ಉಲ್ಬಣಗೊಳಿಸುವ ಅಂಶಗಳು.

ಕೇಂದ್ರ-ರಾಜ್ಯ ಸಂಬಂಧಗಳನ್ನು ಹೀಗೆ ಉಲ್ಬಣಗೊಳ್ಳಲು ಬಿಟ್ಟರೆ ದೇಶ ಎದುರಿಸಬೇಕಾದ ಗಂಭೀರ ಪರಿಣಾಮಗಳ ಬಗ್ಗೆ ಸಿ.ಪಿ.ಐ(ಎಂ)ನ ಹದಿಮೂರನೇ ಮಹಾಧಿವೇಶನ ದೇಶವನ್ನು ಎಚ್ಚರಿಸುತ್ತದೆ. ಈಗಾಗಲೇ ಪಶ್ಚಿಮ ಬಂಗಾಳ, ಆಂಧ್ರ ಪ್ರದೇಶ ಮತ್ತು ಕೇರಳ ವಿಧಾನಸಭೆಗಳ ಚುನಾಯಿತ ಪ್ರತಿನಿಧಿಗಳು ತಮ್ಮ ರಾಜ್ಯಗಳ ವಿರುದ್ಧ ರಾಜಕೀಯ ದೃಷ್ಟಿಯಿಂದ ಕೇಂದ್ರವು ಪಕ್ಷಪಾತ ಪೂರ್ಣವಾಗಿ ವರ್ತಿಸುವುದಕ್ಕೆ ಪ್ರತಿಭಟನೆ ವ್ಯಕ್ತಪಡಿಸಲು ದೆಹಲಿಗೆ ಹೋಗಬೇಕಾಗಿ ಬಂದಿದೆ.

ಆದ್ದರಿಂದ ಪ್ರಜಾಪ್ರಭುತ್ವವನ್ನು ಬಲಗೊಳಿಸಲು, ನಮ್ಮ ದೇಶದ ಎಲ್ಲಾ ರಾಜ್ಯಗಳಿಗೆ, ಎಲ್ಲಾ ಜನಗಳಿಗೆ ಸಮಾನ ಅಭಿವೃದ್ಧಿಯ ಭರವಸೆ ನೀಡಲು ಮತ್ತು ರಾಷ್ಟ್ರೀಯ ಐಕ್ಯತೆಯನ್ನು ಬಲಗೊಳಿಸಲು ಕೇಂದ್ರ-ರಾಜ್ಯ ಸಂಬಂಧಗಳನ್ನು ಪುನರ್ರಚಿಸುವುದು ಒಂದು ತುರ್ತು ಅಗತ್ಯ ಎಂದು ಮಹಾಧಿವೇಶನ ಭಾವಿಸುತ್ತದೆ. ದೇಶದ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಕೇಂದ್ರೀಕರಣದ ರಭಸವನ್ನು ಪ್ರತಿರೋಧಿಸಬೇಕು, ರಾಜ್ಯಗಳ ಅಧಿಕಾರಗಳಲ್ಲಿ ಇನ್ನಷ್ಟು ಸವೆತ ಉಂಟಾಗದಂತೆ ತಡೆಯಬೇಕು ಮತ್ತು ಕೇಂದ್ರ-ರಾಜ್ಯ ಸಂಬಂಧಗಳ ಸಮಸ್ಯೆಯ ಒಂದು ನಿಜವಾದ ಪ್ರಜಾಸತ್ತಾತ್ಮಕ ಪರಿಹಾರಕ್ಕಾಗಿ ದುಡಿಯಬೇಕೆಂದು ಮಹಾಧಿವೇಶನ ಕರೆ ನೀಡುತ್ತದೆ.



ಮಹಾಧಿವೇಶನದ ಹುತಾತ್ಮ ಸ್ತಂಭ

ಕಾಂ. ಮುಜಾಫರ್ ಅಹ್ಮದ್ ಜನ್ಮ ಶತಾಬ್ದಿ

ಮಾರ್ಕ್ಸ್‌ವಾದೀ ಸಾಹಿತ್ಯದ ಪ್ರಕಟಣೆ, ವಿಚಾರ ಸಂಕಿರಣಗಳ ಮೂಲಕ ಆಚರಿಸಲು ಮಹಾಧಿವೇಶನದ ಕರಾವು

ನಮ್ಮ ಪಕ್ಷದ ಸ್ಥಾಪಕರಲ್ಲಿ ಒಬ್ಬರಾದ ಕಾಮ್ರೇಡ್ ಮುಜಫರ್ ಅಹಮದ್‌ರವರ ಜನ್ಮ ಶತಾಬ್ದಿ 1988-89ರಲ್ಲಿ ಬಂದಿದೆ ಎಂದು ಸಿ.ಪಿ.ಐ.(ಎಂ.)ನ ೧೩ನೇ ಮಹಾಧಿವೇಶನ ಅತೀವ ಸಂತೋಷದಿಂದ ಗಮನಿಸುತ್ತದೆ.



ಬಂಗಾಳ ಕೊಲ್ಲಿಯ ಒಂದು ಸಣ್ಣ ದ್ವೀಪ ಸಂದಿಪ್‌ನಲ್ಲಿ (ಈಗ ಅದು ಬಾಂಗ್ಲಾ ದೇಶದಲ್ಲಿದೆ) 1888ರ ಆಗಸ್ಟ್ ಐದರಂದು ಜನಿಸಿದ ಕಾಮ್ರೇಡ್ ಮುಜಫರ್ ಅಹಮದ್ ಯುವ ವಯಸ್ಸಿನಲ್ಲಿಯೇ ಕಲ್ಕತ್ತೆಗೆ ಬಂದು ನೇರವಾಗಿ ೧೯೧೫-೨೦ರ ಸ್ವಾತಂತ್ರ್ಯ ಹೋರಾಟ ಸೇರಿಕೊಂಡರು. ಕಾರ್ಮಿಕ ವರ್ಗದ ನಡುವೆ ದುಡಿಯಲು ಆರಂಭಿಸಿದರು.

ನವೆಂಬರ್ ೧೯೧೭ರ ಬೋಲ್ಶೆವಿಕ್ ಕ್ರಾಂತಿಯಿಂದ ಸ್ಫೂರ್ತಿ ಪಡೆದು ಕಾರ್ಮಿಕ ವರ್ಗದ ನೇತೃತ್ವದ ಸಮಾಜವಾದಿ ಕ್ರಾಂತಿಯ ಉದ್ದೇಶಕ್ಕೆ ಕಟ್ಟು ಬದ್ಧರಾದ ಅವರು ಭಾರತದಲ್ಲಿ ಕಮ್ಯೂನಿಸ್ಟರನ್ನು ಸಂಘಟಿಸುವ ಪ್ರಮುಖ ಪಾತ್ರ ವಹಿಸಿದರು. ಸಮರ್ಪಿತ ಮಾರ್ಕ್ಸ್‌ವಾದಿ, ಉತ್ಕೃಷ್ಟ ಸಂಘಟಕ ಮತ್ತು ಸ್ಫೂರ್ತಿ ನೀಡುವ ಮುಖಂಡರಾಗಿದ್ದ ಕಾಮ್ರೇಡ್ ಮುಜಫರ್ ಅಹಮದ್ ತಮ್ಮ ಧ್ಯೇಯಗಳಿಗಾಗಿ ಧೈರ್ಯದಿಂದ ಹೋರಾಡಿದರು. ದಮನ ಮತ್ತು ದೀರ್ಘ ಜೈಲುವಾಸವನ್ನು ಸಹಿಸಿದರು.

ಯಾವುದೇ ಅರ್ಥದಲ್ಲಿ ನೋಡಿದರೂ ನಿಜವಾದ ಕಮ್ಯೂನಿಸ್ಟರಾಗಿದ್ದ "ಕಾಕಬಾಬು" ಎಂದು ಪಕ್ಷದ ಸಂಗಾತಿಗಳು, ಹಿತಚಿಂತಕರು ಮತ್ತು ಇತರರು ಪ್ರೀತಿಯಿಂದ ಕರೆಯುತ್ತಿದ್ದ ಅವರ ಜೀವನ ಮತ್ತು ಕೆಲಸ ಇತರ ಕಮ್ಯೂನಿಸ್ಟರಿಗೊಂದು ಅನುಕರಣೀಯ ಮಾದರಿ. ಕಾರ್ಮಿಕ ವರ್ಗದ ಸಿದ್ಧಾಂತದ ಸ್ಫೂರ್ತಿ ತುಂಬಿದ ಅವರು ತೀವ್ರ ಹಣದ ತೊಂದರೆ, ಅರೆ ಹೊಟ್ಟೆಯ ಸ್ಥಿತಿ ಹಾಗೂ ಅಪಾರ ಕಷ್ಟ-ನಷ್ಟ ಎದುರಿಸಿಯೂ ದೇಶಾದ್ಯಂತ ಸಂಚರಿಸಿದರು. ಜನರ ನಡುವೆ ಅವರ ಪ್ರಭಾವ, ಚಟುವಟಿಕೆಗಳಿಂದ ಭಯಗೊಂಡ ಬ್ರಿಟಿಷ್ ಸಾಮ್ರಾಜ್ಯಶಾಹೀ ಸರ್ಕಾರ ಅವರನ್ನು ಜೈಲಿಗಟ್ಟಿತು, ಎರಡು ಚಾರಿತ್ರಿಕ ವಿಚಾರಣೆಗಳಿಗೆ ಗುರಿ ಮಾಡಿತು. ಕಾನ್‌ಪುರ ಬೋಲ್ಶೆವಿಕ್ ಪಿತೂರಿ ಮೊಕದ್ದಮೆ ಮತ್ತು ಮೀರತ್ ಕಮ್ಯೂನಿಸ್ಟ್ ಪಿತೂರಿ ಮೊಕದ್ದಮೆಗಳೆಂಬ ಈ ಎರಡು ವಿಚಾರಣೆಗಳು ಭಾರತದಲ್ಲಿ ಕಮ್ಯೂನಿಸ್ಟ್ ಆಂದೋಲನದ ಭವ್ಯ ಇತಿಹಾಸದ ಅಭಿನ್ನ ಅಂಗಗಳು. ಜೈಲಿನಲ್ಲಿದ್ದಾಗ ಕಾ. ಮುಜಫರ್ ಅಹಮದ್ ಒಂದು ತೀವ್ರ ಕಾಯಿಲೆಗೊಳಗಾದರು. ಬಿಡುಗಡೆಯಾಗುವ ಹೊತ್ತಿಗೆ ಸಾವಿನ ಅಂಚಿನಲ್ಲಿದ್ದರು.

ಕಮ್ಯೂನಿಸ್ಟ್ ಪಕ್ಷದ ಒಬ್ಬ ಸ್ಥಾಪಕರಾಗಿದ್ದ ಕಾಮ್ರೆಡ್ ಮುಜಫರ್ ಅಹಮದ್ ಮಾರ್ಕ್ಸ್‌ವಾದದ-ಲೆನಿನ್‌ವಾದದ ನೀತಿಗಳಿಗೆ ಬದ್ಧರಾಗುತ್ತಿದ್ದರು. ಪಕ್ಷದೊಳಗಿನ ಪ್ರತಿಗಾಮಿ ಮತ್ತು ಪಂಥವಾದೀ ಪ್ರವೃತ್ತಿಗಳ ವಿರುದ್ಧ ಅವರು ಹೋರಾಡಿದರು. ರಾಜಕೀಯ ಮತ್ತು ಸೈದ್ಧಾಂತಿಕ ಐಕ್ಯತೆ ಹೊಂದಿದ್ದ ಕಾರ್ಮಿಕ ವರ್ಗದ ಒಂದು ಪಕ್ಷ ಸ್ಥಾಪಿಸುವುದು ಅವರ ಧ್ಯೇಯವಾಗಿತ್ತು. ಮಾರ್ಕ್ಸ್‌ವಾದಿ ಸಾಹಿತ್ಯ ಮತ್ತು ಪಕ್ಷದ ಪತ್ರಿಕೆಗಳ ಪ್ರಕಟಣೆಯ ಮೇಲೆ, ಪಕ್ಷದ ತರಗತಿಗಳನ್ನು, ಶಾಲೆಗಳನ್ನು ನಡೆಸುವುದರ ಮೇಲೆ ಅವರು ವಿಶೇಷ ಒತ್ತು ನೀಡಿದರು.



ಕಾಮ್ರೇಡ್ ಮುಜಫರ್ ಅಹಮದ್‌ರವರ ಜನ್ಮ ಶತಾಬ್ದಿಯನ್ನು ಭಾರತದಲ್ಲಿ ಪಕ್ಷ ಕಟ್ಟುವಲ್ಲಿ ಅವರ ಕೊಡುಗೆಗೆ ಅನುರೂಪವಾದ ಯೋಗ್ಯವಾದ ರೀತಿಯಲ್ಲಿ ಆಚರಿಸಬೇಕೆಂದು ಪಕ್ಷದ ಎಲ್ಲ ಘಟಕಗಳಿಗೆ ಮಹಾಧಿವೇಶನ ಕರೆ ನೀಡುತ್ತದೆ. ಶತಾಬ್ದಿ ಪ್ರಚಾರ ಆಗಸ್ಟ್ ೫, ೧೯೮೯ರವರೆಗೆ ನಡೆಯುತ್ತದೆ. ಭಾರತೀಯ ಜನಸಮೂಹಗಳ ಈ ಮಹಾನ್ ನೇತಾರರ ಜನ್ಮ ಶತಾಬ್ದಿಯ ವಿಶೇಷ ಸ್ಮೃತಿಯಲ್ಲಿ ವಿಚಾರ ಸಂಕಿರಣಗಳನ್ನು ಪಾರ್ಟಿ ತರಗತಿಗಳನ್ನು ಸಂಘಟಿಸಬೇಕೆಂದು, ಮಾರ್ಕ್ಸ್‌ವಾದಿ ಸಾಹಿತ್ಯ ಪ್ರಕಟಿಸಬೇಕೆಂದು ಎಲ್ಲಾ ಪಕ್ಷದ ಘಟಕಗಳಿಗೆ ಮಹಾಧಿವೇಶನ ಕರೆ ನೀಡುತ್ತದೆ.




ಹೊಸ ಪಾಲಿಟ್‌ಬ್ಯೂರೋ ಸದಸ್ಯರು

1. ಕಾಮ್ರೇಡ್ ಎಲ್.ಬಿ.ಗಂಗಾಧರರಾವ್
2. ನಲ್ಲಶಿವನ್

ಕೇಂದ್ರ ಸಮಿತಿ ಕಾರ್ಯದರ್ಶಿ ಮಂಡಳಿ

1. ಸುನೀಲ್‌ಮೈತ್ರ
2. ಎಸ್.ರಾಮಚಂದ್ರನ್‌ಪಿಳ್ಳೆ
3. ಪಿ.ರಾಮಂದ್ರನ್
4. ಸೀತಾರಾಮ್‌ಯೆಚುರಿ
5. ಪ್ರಕಾಶ್‌ಕಾರಟ್



ಹೊಸದಾಗಿ ಚುನಾಯಿತ ಕೇಂದ್ರ ಸಮಿತಿ ಸಭೆ ಸೇರಿ ಕಾಮ್ರೇಡ್ ಇ.ಎಂ.ಎಸ್. ನಂಬೂದಿರಿಪ್ಪಾಡ್‌ರವರನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕೇಂದ್ರ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಆರಿಸಿತು. ಹಾಗೂ ಈ ಕೆಳಗಿನ 12 ಸದಸ್ಯರುಳ್ಳ ಪಾಲಿಟ್ ಬ್ಯೂರೋವನ್ನು ಆರಿಸಿತು.

1. ಇ.ಎಂ.ಎಸ್. ನಂಬೂದಿರಿಪ್ಪಾಡ್
2. ಬಿ.ಟಿ. ರಣದಿವೆ
3. ಎಂ. ಬಸವಪುನ್ನಯ್ಯ
4. ಹರ್ಕಿಶನ್ ಸಿಂಗ್ ಸುರ್ಜಿತ್
5. ಜ್ಯೋತಿ ಬಸು
6. ಸಮರ್ ಮುಖರ್ಜಿ
7. ಇ. ಬಾಲಾನಂದನ್
8. ನೃಪೇನ್ ಚಕ್ರವರ್ತಿ
9. ಸರೋಜ್ ಮುಖರ್ಜಿ
10. ವಿ.ಎಸ್. ಅಚ್ಯುತಾನಂದನ್
11. ಎಲ್.ಬಿ. ಗಂಗಾಧರರಾವ್
12. ಎ. ನಲ್ಲಶಿವನ್

ಕಾಂ. ಎಲ್.ಬಿ. ಗಂಗಾಧರರ್‌ವ್ ಮತ್ತು ಕಾಂ. ಎ.ನಲ್ಲಶಿವನ್ ಪಾಲಿಟ್ ಬ್ಯೂರೋದ ಹೊಸ ಸದಸ್ಯರು.

ಕೇಂದ್ರಸಮಿತಿ ಈ ಕೆಳಗಿನ ಐವರು ಸದಸ್ಯರುಳ್ಳ ಒಂದು ಕಾರ್ಯದರ್ಶಿಮಂಡಳಿಯನ್ನು ಆರಿಸಿತು.

1. ಸುನಿಲ್ ಮೈತ್ರ
2. ಎಸ್. ರಾಮಚಂದ್ರನ್ ಪಿಳ್ಳೆ
3. ಪಿ. ರಾಮಚಂದ್ರನ್
4. ಸೀತಾರಾಂ ಯೆಚೂರಿ
5. ಪ್ರಕಾಶ್. ಕಾರಟ್

ಹೊಸ ಕೇಂದ್ರ ಸಮಿತಿ

ಹದಿಮೂರನೇ ಮಹಾಧಿವೇಶನ ಅವಿರೋಧವಾಗಿ ಆಯ್ಕೆ ಮಾಡಿದ ಹೊಸ ಕೇಂದ್ರಸಮಿತಿಯ; ಸದಸ್ಯರ ಹೆಸರುಗಳು ಹೀಗಿವೆ

1. ಇ.ಎಂ.ಎಸ್ ನಂಬೂದಿರಿಪಾಡ್
2. ಬಿ.ಟಿ. ರಣದಿವೆ
3. ಎಂ. ಬಸವಪುನ್ನಯ್ಯ
4. ಹರ್ಕಿಶನ್ ಸಿಂಗ್ ಸುರ್ಜಿತ್
5. ಜ್ಯೋತಿ ಬಸು
6. ಸಮರ್ ಮುಖರ್ಜಿ
7. ಇ. ಬಾಲಾನಂದ
8. ನೃಪೇನ್ ಚಕ್ರವರ್ತಿ
9. ಸರೋಜ್ ಮುಖರ್ಜಿ
10. ವಿ.ಎಸ್. ಅಚ್ಯುತಾನಂದನ್
11. ಹನುಮಂತರಾವ್
12. ಎಲ್.ಬಿ. ಗಂಗಾಧರರಾವ್
13. ಎಲ್ .ಪ್ರಸಾದ ರಾವ್
14. ವಿ. ನರಸಿಂಹ ರೆಡ್ಡಿ
15. ಕೊರ್ಟಾಲ್ ಸತ್ಯನಾರಾಯಣ
16. ನಂದೇಶ್ವರ್ ತಾಲೂಕ್‌ದಾರ್
17. ಅಚಿಂತ್ಯ ಭಟ್ಟಾಚಾರ್ಯ
18. ಹೇಮನ್ ದಾಸ್
19. ನೂರುಲ್ ಹುದಾ
20. ಗಣೇಶ್ ಶಂಕರ್ ವಿದ್ಯಾರ್ಥಿ
21. ಸುಭೋದ್ ರಾಯ್
22. ರಘುಬೀರ್ ಸಿಂಗ್ ಹುದ
23. ಮಹಮ್ಮದ್ ಯೂಸುಫ್‌ತರಿಗಾಮಿ
24. ಪಿ. ರಾಮಚಂದ್ರ ರಾವ್
25. ಇ.ಕೆ. ನಾಯನಾರ್
26. ಟಿ.ಕೆ. ರಾಮಕೃಷ್ಣನ್
27. ಸುಶೀಲಾ ಗೋಪಾಲನ್
28. ಎಂ.ಎಂ.ಲಾರೆನ್ಸ್
29. ಕೆ.ಎನ್. ರವೀಂದ್ರನಾಥ್
30. ಎಸ್.ರಾಮಚಂದ್ರನ್ ಪಿಳ್ಳೆ
31. ಅಹಿಲ್ಯಾ ರಂಗ್‌ಣೇಕರ್
32. ಗೋದಾವರಿಪರುಳೇಕರ್
33. ಮೋತೀ ಲಾಲ್ ಶರ್ಮಾ
34. ಸತ್‌ವಂತ್ ಸಿಂಗ್
35. ಜಿ.ಎಸ್. ರಂಧಾವಾ
36. ಮಂಗತ್ ರಾಮ್
37. ಹರಿ ರಾಂ ಚೌಹಾಣ್
38. ಎ. ನಲ್ಲಶಿವನ್
39. ಆರ್. ಉಮಾನಾಥ್
40. ಪಿ. ಆರ್. ಪರಮೇಶ್ವರನ್
41. ಪಿ. ರಾಮಚಂದ್ರನ್
42. ಎನ್. ಶಂಕರಯ್ಯ
43. ದಶರಥ್ ದೇಬ್
44. ಮಾಣಿಕ್ ಸರ್ಕಾರ್
45. ಶಂಕರ್ ದಯಾಲ್ ತಿವಾರಿ
46. ರಾಂ. ಸುಮೇರ್ ಯಾದವ್
47. ಮನೋರಂಜನ್ ರಾಯ್
48. ಬಿನೊಯ್ ಚೌಧುರಿ
49. ಪ್ರಭಾಕರ್ ಸಾಂಝುಗಿರಿ
50. ಬಿಮಾನ್ ಬಸು
51. ಬುದ್ಧದೇವ್ ಭಟ್ಟಾಚಾರ್ಯ
52. ಮಹಮ್ಮದ್ ಅಮೀನ್
53. ಸುನಿಲ್ ಮೈತ್ರ
54. ಅನಿಲ್ ಬಿಸ್ವಾಸ್
55. ಪ್ರಕಾಶ್ ಕಾರಟ್
56. ಎಂ. ಕೆ. ಪಂಧೆ
57. ಸುಕೋಮಲ್‌ಸೆನ್
58. ಹನ್ನನ್ ಮೊಲ್ಲಾ
59. ಸೀತಾರಾಂ ಯೆಚುರಿ
60. ಬಿಪ್ಲಬ್ ದಾಸ್‌ಗುಪ್ತಾ
61. ವಿಮಲ ರಣದಿವೆ
62. ಕನಕ್ ಮುಖರ್ಜಿ
63. ಸೈಫುದ್ದೀನ್ ಚೌಧುರಿ
64. ಎಂ.ಎ. ಬೇಬಿ
65. ಪಿ.ಕೆ. ಕುಂಜಚನ್
66. ಜೋಗಿಂದರ್ ಶಮ

ತ್ರಿವೇಂದ್ರಮ್ ಮಹಾಧಿವೇಶನದ ಪ್ರಚಾರ ವೈಖರಿಗೆ ಇನ್ನೂ ಹಲವು ಮುಖಗಳಿದ್ದವು: 13ನೇ ಮಹಾಧಿವೇಶನದ ಸಂದರ್ಭಕ್ಕೆ ವಿಶೇಷವಾಗಿ ಬರೆಸಿದ, ಹಾಡಿದ, ಸಂಯೋಜಿಸಿದ ಹಾಡುಗಳ ಕ್ಯಾಸೆಟ್ ಒಂದನ್ನು ಬಿಡುಗಡೆ ಮಾಡಲಾಗಿತ್ತು. ನಗರದ ಮುಖ್ಯ ಬೀದಿಗಳಲ್ಲಿ ಸುಮಾರು 100 ಮೀಟರಿಗೊಂದು ಕಡೆ, ಭಾರಿ ಆಂಪ್ಲಿಫೈಯರ್‌ಗಳನ್ನು ಸ್ಪೀಕರ್‌ಗಳನ್ನಿಟ್ಟು ಸಾರ್ವಜನಿಕವಾಗಿ ಕ್ಯಾಸೆಟ್ ನುಡಿಸಲಾಗುತ್ತಿತ್ತು. ಇದಲ್ಲದೆ ಈ ಕ್ಯಾಸೆಟ್ ನುಡಿಸುವ ಸ್ಪೀಕರ್‌ಗಳನ್ನು ಹೊತ್ತ ನೂರಾರು ವಾಹನಗಳು ನಗರದ ತುಂಬೆಲ್ಲಾ ಓಡಾಡುತ್ತಿದ್ದವು. ಈ ಹಾಡುಗಳನ್ನು ಎಲ್ಲೆಂದರಲ್ಲಿ ಜನ ಗುಣಗುಣಿಸುವುದು ಕಂಡು ಬಂತು. ಈ ಹಾಡುಗಳನ್ನು ಕೇಳದ, ಗೊತ್ತಿಲ್ಲದ ಯಾವನೂ ತ್ರಿವೇಂದ್ರಮ್‌ನಲ್ಲಿರಲಾರ- ಆ ರೀತಿ ಇತ್ತು ಹಾಡುಗಳ ವ್ಯಾಪಕತೆ. ಇದೇ ರೀತಿ ಮಹಾಧಿವೇಶನದ Logoದ ಸ್ಟೀಕರ್‌ಗಳು ಪೋಸ್ಟರುಗಳನ್ನು ಸಾವಿರಾರು ವಾಹನಗಳ ಮೇಲೆ ಅಂಟಿಸಲಾಗಿತ್ತು. ಕನಿಷ್ಠಪಕ್ಷ, ಬೀದಿಯಲ್ಲಿ ಹೋಗುವ ಮೂವರಲ್ಲಿ ಒಬ್ಬರು ಮಹಾಧಿವೇಶನಕ್ಕೆ ಸಂಬಂಧಿಸಿದ ಬ್ಯಾಡ್ಜ್ ಒಂದನ್ನು ಹಾಕಿಕೊಂಡು ಓಡಾಡುತ್ತಿದ್ದರು. ಬ್ಯಾಡ್ಜ್‌ಗಳಲ್ಲಿ, ಜನಪ್ರಿಯವಾದವುಗಳು ಮಹಾನಾಯಕರವು. ಅವು ಬಿಟ್ಟರೆ CPI(M) ಮತ್ತು ಕೆಂಪು ಕತ್ತಿ-ಸುತ್ತಿಗೆ ಚಿಹ್ನೆಯ ಬ್ಯಾಡ್ಜ್‌ಗಳು. ಇದೇ ರೀತಿ ವೈವಿಧ್ಯಮಯ ಕೆಂಪು ಟೋಪಿಗಳು ನಗರದ ತುಂಬೆಲ್ಲಾ ಕಂಡು ಬಂದವು.

ಬೂರ್ಜ್ವಾ ಮತ್ತು ಧಾರ್ಮಿಕ ಸಂಸ್ಥೆಗಳು ತಮ್ಮ ಪ್ರಚಾರಕ್ಕೆ ಬಳಸುವ ಎಲ್ಲಾ ಆಕ್ರಮಿಕ ತಂತ್ರಗಳನ್ನು ಅವರಿಗೆ ಮಾರುತ್ತರವಾಗಿ ಬಳಸಲಾಗಿತ್ತು. ತ್ರಿವೇಂದ್ರಮ್‌ನ ಯಾವುದೇ ನಾಗರಿಕ ಅಥವಾ ಅಲ್ಲಿ ಭೇಟಿ ಇತ್ತ ಯಾರೊಬ್ಬರೂ ಮಹಾಧಿವೇಶನದ ಪ್ರಚಾರದ ಎಲ್ಲಾ ಅಥವಾ ಕನಿಷ್ಠ ಒಂದು ಮಾಧ್ಯಮದ ಅಳವಿಗೆ ನಿಲುಕದಿರುವುದು ಸಾಧ್ಯವಿರಲಿಲ್ಲ. ಪ್ರಚಾರತೆ ಪ್ರಖರತೆ, ವ್ಯಾಪಕತೆ ಬೂರ್ಜ್ವಾ ಮತ್ತು ಧಾರ್ಮಿಕ ಪ್ರಚಾರ, ಜಾಹೀರಾತಿ ಜತೆಗೆ ಪೈಪೋಟಿ ನಡೆಸುವಂತಿತ್ತು. ಜನತೆ ದೊಡ್ಡ ಸಂಖ್ಯೆಯಲ್ಲಿ ಇದರಲ್ಲಿ ಸ್ವಯಂಸ್ಫೂರ್ತವಾಗಿ ಪಾಲ್ಗೊಳ್ಳುವುದು. ಅದರ ವೈವಿಧ್ಯಮಯತೆ ಹೆಚ್ಚಿಸಿದ್ದು ಗಮನಾರ್ಹ ವ್ಯತ್ಯಾಸವಾಗಿತ್ತು.

ನಗರದ ಹಲವು ಮುಖ್ಯ ಆಕರ್ಷಣೆಗಳನ್ನು ಪಕ್ಷದ ಅದಕ್ಕಿಂದಲೂ ಹೆಚ್ಚಾಗಿ CITU, DYFI, SFI ಮತ್ತಿತರ ಸಾಮೂಹಿಕ ಸಂಘಟನೆಗಳ ಶಾಖೆಗಳು ಸ್ವಯಂಸ್ಫೂರ್ತವಾಗಿ ವಹಿಸಿಕೊಂಡಿದ್ದವು. ಇಂತಹ ಪ್ರತಿಯೊಂದು ಅಲಂಕಾರಿಕ ಆಕರ್ಷಣೆಯಲ್ಲಿ ಅವು ತಮ್ಮ ಹೆಸರುಗಳನ್ನು ಹೆಮ್ಮೆಯಿಂದ ಹಾಕಿಕೊಂಡದ್ದು ಕಂಡು ಬಂತು. ಆದರೆ ಈ ಶಾಖೆಗಳು ಆ ಭಾಗದ, ವಿಭಾಗಗಳ ಜನತೆಯನ್ನು ಈ ಕೆಲಸದಲ್ಲಿ ಸಂಪೂರ್ಣವಾಗಿ ಒಳಗೊಂಡಿದ್ದು ಸ್ಪಷ್ಟವಾಗಿ ಗೋಚರವಾಗುತ್ತಿತ್ತು. ಬೂರ್ಜ್ವಾ ಪ್ರಚಾರ ವ್ಯವಸ್ಥೆಯಂತೆ ಕೇಂದ್ರಿಯವಾಗಿ ಸಂಘಟಿಸಿದ್ದಲ್ಲ ಎಂಬುದು ಇದರ ವಿಶೇಷವಾಗಿತ್ತು.

ಸಾಂಸ್ಕೃತಿಕ ಕಾರ್ಯಕ್ರಮಗಳು

ಇದಲ್ಲದೆ ನಗರದ ಐದು ಕಡೆ ಈ ಆರುದಿನಗಳಲ್ಲಿ ಪ್ರತಿದಿನ ಭಾಷಣಗಳು ವಿಚಾರ ಸಂಕಿರಣಗಳು, ನಾಟಕ, ನೃತ್ಯ, ಜಾನಪದ ನೃತ್ಯ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಇಂತಹ ಪ್ರತಿಯೊಂದು ಕಡೆ (ಇದರಲ್ಲಿ ಒಂದಕ್ಕೆ ಎ.ಕೆ.ಜಿ. ನಗರ ಎಂದು ಹೆಸರಿಡಲಾಗಿತ್ತು) ಪ್ರತಿದಿನ ಹತ್ತುಸಾವಿರಕ್ಕೂ ಹೆಚ್ಚು ಜನರು ಸೇರುತ್ತಿದ್ದರು.

ಸ್ವಾಗತ ಸಮಿತಿ ಏರ್ಪಡಿಸಿದ್ದ ಪೋಸ್ಟರ್ ಸ್ಪರ್ಧೆಯಲ್ಲಿ ಬಹುಮಾನ ಗಳಿಸಿದ ಮತ್ತು ಇತರ ಮಹಾಧಿವೇಶನಕ್ಕೆ ಸಂಬಂಧಪಟ್ಟಂತೆ ಒಂದು ಪ್ರದರ್ಶನ ಏರ್ಪಡಿಸಲಾಗಿತ್ತು. ಇದರಲ್ಲಿ ಸಮುದಾಯ ತಂಡದವರು ನೂರಡಿ ಶಾಂತಿ ವರ್ಣ ಚಿತ್ರವನ್ನು ಪ್ರದರ್ಶಿಸಿದರು.

XIII

ಇನ್ನೂ ಮೂರು ಮಹಾಧಿವೇಶನವನ್ನು ನೋಡಲು ಇಚ್ಛಿಸುವ -ಕಾ. ಇ.ಎಂ.ಎಸ್.

"ಅವಿಭಾಜ್ಯ ಕಮ್ಯೂನಿಸ್ಟ್ ಪಕ್ಷದಲ್ಲಿದ್ದಾಗಿನಿಂದ ಹಿಡಿದು ಇಲ್ಲಿಯವರೆಗೆ ಹದಿಮೂರು ಮಹಾಧಿವೇಶನಗಳಲ್ಲಿಯೂ ನಾನು ಭಾಗವಹಿಸಿದ್ದೇನೆ. ನನ್ನ ಸಣ್ಣ ಪಾತ್ರವನ್ನು ವಹಿಸಿದ್ದೇನೆ. ಇನ್ನೂ ಮೂರು ಮಹಾಧಿವೇಶನಗಳಲ್ಲಾದರೂ ನೋಡುವ ಆಸೆ ಇದೆ" ಎಂದು ಕಾಮ್ರೇಡ್ ಇ.ಎಂ.ಎಸ್. ಮಲಯಾಳಂನಲ್ಲಿ ಮಾತನಾಡುತ್ತಾ ತಿಳಿಸಿದಾಗ ಅಲ್ಲಿ ನೆರೆದಿದ್ದ ಹತ್ತುಲಕ್ಷವನ್ನು ಮೀರಿದ ಜನಸ್ತೋಮ ನಗೆಗಡಲಿನಲ್ಲಿ ಮೂಡಿತು.

ಎಡ ಪ್ರಜಾಪ್ರಭುತ್ವ ರಂಗ ಕಟ್ಟುವತ್ತ....

ಹದಿಮೂರನೇ ಮಹಾಧಿವೇಶನದ ಕಲಾಪಗಳನ್ನು ಉದ್ಘಾಟಿಸುತ್ತಾ ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್ ನಂಬೂದಿರಿಪ್ಪಾಡ್‌ರವರು 12ನೇ ಮಹಾಧಿವೇಶನದಿಂದಿಗಿನ ಪ್ರಮುಖ ಬೆಳವಣಿಗೆಗಳ 13ನೇ ಮಹಾಧಿವೇಶನದ ಮುಂದಿರುವ ಕರ್ತವ್ಯಗಳ ಒಂದು ಪಕ್ಷಿನೋಟವನ್ನು ನೀಡಿದರು. ಉದ್ಘಾಟನಾ ಭಾಷಣದ ಅನುವಾದ ಇಲ್ಲಿದೆ.

ನಮ್ಮ ಪಕ್ಷದ ಚರಿತ್ರೆಯಲ್ಲಿ ಇದೊಂದು ವಿಶಿಷ್ಟ ಸಂದರ್ಭ 1964ರಲ್ಲಿ ನಾವು ಸಿ.ಪಿ.ಐ.(ಎಂ) ಎಂದು ಮರುಸಂಘಟನೆಗೊಂಡ ನಂತರ ಮೊದಲ ಬಾರಿಗೆ ನಮ್ಮ ಸೋದರ ಪಕ್ಷಗಳ ಪ್ರತಿನಿಧಿಗಳನ್ನು ಸ್ವಾಗತಿಸುವ ಅವಕಾಶ ನಮಗೆ ದೊರೆತಿದೆ. ನಮ್ಮ ಪಕ್ಷ ಮತ್ತು ವಿಶ್ವ ಕಮ್ಯುನಿಸ್ಟ್ ಆಂದೋಲನದಲ್ಲಿನ ಹೆಚ್ಚಿನ ಸೋದರ ಪಕ್ಷಗಳ ಸಂಗಾತಿಗಳ ನಡುವಿನ ಸಂಬಂಧಗಳಲ್ಲಿ ಒಂದು ಹೊಸ ಅವಧಿ ಆರಂಭವಾಗಿದೆ ಎಂಬುದನ್ನು ಇದು ತೋರಿಸುತ್ತದೆ.

ಅಲ್ಲದೆ ಅಂತರಾಷ್ಟ್ರೀಯ ಆಂದೋಲನದಲ್ಲಿ ಕಾಲು ಶತಮಾನದ ಕಾಲ ನಡೆಯುತ್ತಿದ್ದ ಘರ್ಷಣೆಗಳು ನಿಂತು ಶಾಂತಿ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾಜವಾದಕ್ಕಾಗಿ ಸಂಯುಕ್ತ ಕಾರ್ಯಾಚರಣೆ ನಡೆಸಲಾರಂಭಿಸಿದೆ. ಪ್ರಮುಖ ವಿಷಯಗಳ ಬಗ್ಗೆ ಅಂತರ್‍ರಾಷ್ಟ್ರೀಯ ಆಂದೋಲನದಲ್ಲಿನ ವಿವಿಧ ತುಕಡಿಗಳಲ್ಲಿ ಭಿನ್ನಾಭಿಪ್ರಾಯ ಇದ್ದರೂ ಇಂತಹ ಸಂಯುಕ್ತ ಕಾರ್ಯಾಚರಣೆಗಳು ಆರಂಭವಾಗಿವೆ. ನಮ್ಮ ಪಕ್ಷ ಇಂತಹ ಒಂದು ಸನ್ನಿವೇಶಕ್ಕಾಗಿ ಶ್ರಮಿಸುತ್ತಾ ಬಂದಿತ್ತು . ಈ ಅಧಿವೇಶನದಲ್ಲಿ ಸೋದರ ಪಕ್ಷಗಳ ನಮ್ಮ ಅತಿಥಿಗಳು ಭಾಗವಹಿಸಿರುವುದು ಮಾರ್ಕ್ಸ್‌ವಾದ-ಲೆನಿನ್‌ವಾದ ಮತ್ತು ಕಾರ್ಮಿಕವರ್ಗದ ಅಂತರ್‍ರಾಷ್ಟ್ರೀಯತೆಗೆ ಬದ್ಧತೆ, ಮತ್ತು ಅಂತರ್‍ರಾಷ್ಟ್ರೀಯ ಆಂದೋಲನದ ವಿಭಿನ್ನ ತುಕಡಿಗಳ ನಡುವೆ ಸಂಪೂರ್ಣ ಸಮಾನತೆಯ ಆಧಾರದ ಮೇಲೆ ಐಕ್ಯತೆ ಮತ್ತು ಸೌಹಾರ್ದತೆಯನ್ನು ಮತ್ತಷ್ಟು ಬಲಗೊಳಿಸುವಲ್ಲಿ ನೆರವಾಗುತ್ತದೆ ಎಂಬ ವಿಶ್ವಾಸ ನನಗಿದೆ.

ರಾಜ್ಯ ಸಮ್ಮೇಳನಗಳಲ್ಲಿ ಮತ್ತು ಕೇಂದ್ರ ಸಮಿತಿಯ ಅಡಿಯಲ್ಲಿ ನೇರವಾಗಿ ಕಾರ್ಯನಿರ್ವಹಿಸುತ್ತಿರುವ ಘಟಕಗಳ ಸಮ್ಮೇಳನಗಳಲ್ಲಿ ಚುನಾಯಿತರಾದ 648 ಪ್ರತಿನಿಧಿಗಳು ಮತ್ತು 50 ವೀಕ್ಷಕರು ಇಲ್ಲಿ ನೆರೆದಿದ್ದಾರೆ . ಕೇಂದ್ರ ಸಮಿತಿ 65 ಸದಸ್ಯರೂ ಇದರಲ್ಲಿ ಸೇರಿದ್ದಾರೆ. 12ನೇ ಮಹಾಧಿವೇಶನದಲ್ಲಿ ರೂಪಿಸಿದ ದಾರಿಯನ್ನು ಅನುಸರಿಸುವಲ್ಲಿ ಕಳೆದ ಮೂರು ವರ್ಷ ನಡೆಸಿದ ಸಾಮೂಹಿಕ ಮತ್ತು ರಾಜಕೀಯ ಹೋರಾಟಗಳ ಅಮೂಲ್ಯ ಅನುಭವಗಳನ್ನು ಇವರೆಲ್ಲಾ ಈ ಮಹಾಧಿವೇಶನಕ್ಕೆ ತಂದಿದ್ದಾರೆ. ಇಲ್ಲಿ ಅವರ ಕೊಡುಗೆಗಳು ಕೇದ್ರ ಸಮಿತಿಯ ಇಲ್ಲಿ ಮಂಡಿಸುವ ದಸ್ತಾವೇಜುಗಳನ್ನು ಶ್ರೀಮಂತಗೊಳಿಸುತ್ತದೆ ಎಂಬುದು ಕೇಂದ್ರ ಸಮಿತಿಯ ನಿರೀಕ್ಷೆ.

ಅಂತರ್‍ರಾಷ್ಟ್ರೀಯ ರಂಗದಲ್ಲಿ ಸಕಾರಾತ್ಮಕ ಬೆಳವಣಿಗೆಗಳು

12ನೇ ಮಹಾಧಿವೇಶನದ ನಂತರ ಅಂತರ್‍ರಾಷ್ಟ್ರೀಯ ರಾಜಕೀಯ ಸನ್ನಿವೇಶದಲ್ಲಿ ಗಹನವಾದ ಬದಲಾವಣೆಗಳು ಕಂಡು ಬಂದಿವೆ. ಸಂಘಟಿತ ಕಾರ್ಮಿಕ ವರ್ಗ, ಅದು ಸೃಷ್ಟಿಸಿದ ಸಮಾಜವಾದೀ ಸಮುದಾಯ ಮತ್ತು ಅಂತರ್‍ರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನ ದೊಡ್ಡ ಮುನ್ನಡೆ ಸಾಧಿಸಿವೆ. ಶಾಂತಿಯ ರಕ್ಷಣೆಗೆ, ಪರಮಾಣು ಅಸ್ತ್ರಗಳ ನಿರ್ಮೂಲನೆ ಮತ್ತು ನಾಶಕ್ಕೆ ಸಂಬಂಧಪಟ್ಟಂತೆ ಸಮಾಜವಾದಿ ದೇಶಗಳ ಮುಖಂಡ ಪ್ರಸ್ತಾಪಗಳಿಗೆ ವಿಶ್ವಾದ್ಯಂತ ದೊರೆತ ಅಗಾಧ ಪರಿಮಾಣದ ಸ್ಪಂದನ; ವಿಶ್ವದ ವಿಭಿನ್ನ ಭಾಗಗಳಲ್ಲಿ ಪ್ರಾದೇಶಿಕ ಸಂಘರ್ಷಗಳನ್ನು ಪರಿಹರಿಸಲು, ಅದರ ಮೂಲಕ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ಮುನ್ನಡೆಗಾಗಿ ಜನತೆಯ ಹೋರಾಟಗಳಿಗೆ ನೆರವಾಗಬಹುದಾದ ಸಕಾರಾತ್ಮಕ ಕ್ರಮಗಳು; ಸಮಾಜವಾದವನ್ನು ಆರ್ಥಿಕ ರಚನೆ ಮತ್ತು ನಿರ್ವಹಣೆಯಲ್ಲಿ ಇನ್ನಷ್ಟು ಪ್ರಜಾಸತ್ತಾತ್ಮಕಗೊಳಿಸುವಂತೆ ಸಮಾಜವಾದಿ ದೇಶಗಳಲ್ಲಿ ನಡೆಯುತ್ತಿರುವ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ, ಸಾಂಸ್ಕೃತಿಕ ವ್ಯವಸ್ಥೆಯ ಪುನರ್‍ರಚನೆ ಇವು ಸೃಷ್ಟಿ ನೀಡುವ ಸಕಾರಾತ್ಮಕ ಬೆಳವಣಿಗೆಗಳು. ಸಮಾಜವಾದದ ವಿರೋಧಿಗಳು ಆಪಾದಿಸುವಂತೆ ಅದು ಬಂಡವಾಳಶಾಹಿಯತ್ತ ವಾಪಾಸಾಗುತ್ತಿಲ್ಲ ಮಾತ್ರವಲ್ಲ, ಆಂತರಿಕವಾಗಿ ಆರ್ಥಿಕ ಮತ್ತು ರಾಜಕೀಯ ರಂಗದಲ್ಲಿ ಸುಧಾರಣೆಗಳನ್ನು ಸಾಧಿಸುತ್ತಾ ವಿಶ್ವಶಾಂತಿಯ ಉಚ್ಛಮಟ್ಟದ ಪ್ರತಿಪಾದಕನಾಗಿ ತನ್ನ ನ್ಯಾಯಬದ್ಧ ಪಾತ್ರ ನಿರ್ವಹಿಸುತ್ತಿದೆ. ಈ ಕ್ರಮಗಳಲ್ಲಿ ಸಮಾಜವಾದೀ ವ್ಯವಸ್ಥೆಯನ್ನು ಇನ್ನಷ್ಟು ಬಲಗೊಳಿಸಲಿ, ಬಂಡವಾಳಶಾಹೀ ಜಗತ್ತಿನ ಸಮಾಜವಾದದ ಗೆಳೆಯರಿಗೆ ಈ ವ್ಯವಸ್ಥೆಯನ್ನು ಇನ್ನಷ್ಟು ಸ್ವೀಕಾರಾರ್ಹಗೊಳಿಸಲಿ ಎಂದು ಈ ಸಂದರ್ಭದಲ್ಲಿ ನಾನು ಆಶಿಸುತ್ತೇನೆ.

ಲೆನಿನ್ ಭವಿಷ್ಯವಾಣಿ ನೆನಪಾಗುತ್ತಿದೆ

ಜಾಗತಿಕ ರಂಗದಲ್ಲಿನ ಬದಲಾವಣೆಗಳು ಮತ್ತು ಕಮ್ಯುನಿಸ್ಟರು ಹಾಗೂ ಇತರ ದೇಶಪ್ರೇಮಿ ಶಕ್ತಿಗಳ ಪ್ರಜ್ಞಾಪೂರ್ವಕ ಕೆಲಸಗಳಿಂದಾಗಿ ನಮ್ಮ ಸರಕಾರ ಮತ್ತು ಸಮಾಜವಾದೀ ದೇಶಗಳ-ಮುಖ್ಯವಾಗಿ ಸೋವಿಯೆತ್ ಒಕ್ಕೂಟ ಹಾಗೂ ಜನತಾ ಚೀಣದ - ಸರಕಾರಗಳ ನಡುವಿನ ಸಂಬಂಧಗಳನ್ನು ಹೆಚ್ಚೆಚ್ಚು ನಿಕಟ ಹಾಗೂ ಸಹಕಾರಯುತಗೊಳಿಸುವುದು ಸಾಧ್ಯವಾಗಿದೆ. ಸೋವಿಯೆತ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಗೊರ್ಬಚೆವ್‌ರ ಎರಡು ಭೇಟಿಗಳು, ಮೊದಲ ಭೇಟಿಕಾಲದಲ್ಲಿ ನಮ್ಮ ಪ್ರಧಾನ ಮಂತ್ರಿಯ ಜತೆಗೆ ಅವರು ಸಹಿ ಮಾಡಿದ ದೆಹಲಿ ಘೋಷಣೆ, ಎರಡನೇ ಭೇಟಿಕಾಲದಲ್ಲಿನ ಹೇಳಿಕೆಗಳು ಎರಡು ದೇಶಗಳ ನಡುವಿನ ಗೆಳೆತನದ ಮತ್ತು ಸಹಕಾರದ ಸಂಬಂಧಗಳನ್ನು ಮತ್ತಷ್ಟು ಬಲಗೊಳಿಸಿವೆ.

ನಮ್ಮ ಪ್ರಧಾನಮಂತ್ರಿಗಳ ಇತ್ತೀಚಿನ ಚೀಣಾಭೇಟಿ, ಭೇಟಿಯ ಕೊನೆಯಲ್ಲಿ ಹೊರಡಿಸಿದ ಜಂಟಿ ಹೇಳಿಕೆ, ಗಡಿವಿವಾದದ ಪರಿಹಾರ ರೂಪಿಸಲು ಜಂಟಿ ಸಮಿತಿಯ ರಚನೆ ಇವೆಲ್ಲಾ ಎರಡು ದೇಶಗಳ ಸಂಬಂಧಗಳನ್ನು ಪಂಚಶೀಲ ಹಾಗೂ ಹಿಂದೀ-ಚೀನೀ ಭಾಯಿ ಭಾಯಿಗಳತ್ತ ಮತ್ತೆ ಕೊಂಡೊಯ್ಯುವ ಮೊದಲ ಸಕಾರಾತ್ಮಕ ಕ್ರಮಗಳು. ಮಾತುಕತೆಗಳ ಮೂಲಕ ನಮ್ಮೆರಡುದೇಶಗಳ ನಡುವಿನ ವಿವಾದಗಳ ಶಾಂತಿಯುತ ಇತ್ಯರ್ಥಕ್ಕಾಗಿ ಅತ್ಯಂತ ದುರ್ದಿನಗಳಲ್ಲೂ ದುಡಿದ ನಮಗಂತೂ ಇದರಿಂದ ವಿಶೇಷ ಸಂತೋಷ ಹಾಗೂ ತೃಪ್ತಿ ದೊರೆತಿದೆ.


ಇವೆರಡೂ ನಮ್ಮ ಮೂರು ದೇಶಗಳನ್ನು ಮಾತ್ರವೇ ತಟ್ಟುವ ವಿಷಯಗಳಷ್ಟೇ ಅಲ್ಲ. ಅವು ಸಮಾಜವಾದಿ ಮತ್ತು ಅಲಿಪ್ತ ಜಗತ್ತುಗಳ ನಡುವಿನ ಸಹಕಾರವನ್ನು ಬಲಗೊಳಿಸಿ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದಲ್ಲಿ ಕ್ರಾಂತಿಕಾರಿ ಶಕ್ತಿಗಳು ಇನ್ನಷ್ಟು ವಿಜಯ ಸಾಧಿಸಲು ದಾರಿ ಮಾಡಿಕೊಟ್ಟಿದೆ. ರಷ್ಯಾ, ಚೀಣಾ ಮತ್ತು ಭಾರತದ ಸಹಕಾರ ವಿಶ್ವದಲ್ಲಿ ಶಾಂತಿ ಮತ್ತು ಪ್ರಗತಿಗೆ ಒಂದುಅನುಕೂಲಕರ ಅಂಶ ಎಂಬ ಲೆನಿನ್ನರ ಭವಿಷ್ಯವಾಣಿ ಈ ಸಂದರ್ಭದಲ್ಲಿ ನೆನಪಾಗುತ್ತದೆ.


ಅಲಿಪ್ತ ರಾಷ್ಟ್ರಗಳೊಂದಿಗೆ ನಮ್ಮ ಸಂಬಂಧಗಳು ಸದಾ ಸೌಹಾರ್ದಯುತವಾಗಿದ್ದವು. ಈಗಲೂ ಅ[illegible] ರೀತಿ ಮುಂದುವರಿಯುತ್ತಿದೆ. ಅಲಿಪ್ತ ದೇಶ[illegible] ಸರಕಾರಗಳು ಮತ್ತು ನಮ್ಮ ದೇಶದ ಸರಕಾ[illegible] ನಡುವೆ ಮುಂದುವರಿಯುತ್ತಿರುವ ಸಹ[illegible] ಸಾಮ್ರಾಜ್ಯಶಾಹಿಯ ವಿರುದ್ಧ, ಯುದ್ಧದತ್ತ ಅ[illegible] ರಭಸದ ತಯ್ಯಾರಿಯ ವಿರುದ್ಧ ಹೋರಾಟದ[illegible] ಮತ್ತಷ್ಟು ಪ್ರಗತಿ ಸಾಧಿಸುವ ಭರ[illegible] ಮೂಡಿಸುತ್ತಿದೆ.

ನಿರ್ಣಾಯಕ ರಾಜಕೀಯ ಸಮರ

ದೇಶದ ರಾಜೀಯ ರಂಗಕ್ಕೆ ಬರೋ[illegible] ಹನ್ನೆರಡನೇ ಮಹಾಧಿವೇಶನದ ನಂತರದ ಮೂ[illegible] ವರ್ಷಗಳು ಕಾಂಗ್ರೆಸ್ (ಐ) ಸರಕಾರದ ವಿರು[illegible] ಸಾಮೂಹಿಕ ಚಟುವಟಿಕೆಗಳ, ಹೋರಾಟಗಳ ಅಭೂ[illegible] ಪೂರ್ವ ಹಚ್ಚಳದ ಒಂದು ಅವಧಿ. ಈ ಹೋರಾ[illegible]ಗಳಲ್ಲಿ ಹಲವು ನಮ್ಮ ಪಕ್ಷಗಳ ನೇತೃತ್ವದಲ್ಲ, ನ[illegible] ಎಡಮಿತ್ರರ ನೇತೃತ್ವದಲ್ಲಿ ಅಥವಾ ನಡೆದವು, ಇ[illegible] ಕೆಲವು ನಮ್ಮ ಎಡ ಅಥವಾ ಪ್ರಜಾಪ್ರಭುತ್ವವಾ[illegible] ಮಿತ್ರ ಪಕ್ಷಗಳ ನೇತೃತ್ವದಲ್ಲಿ ನಡೆದವು. ಇ[illegible] ಕೆಲವು ಸ್ವಯಂಸ್ಫೂರ್ತಿಯಿಂದ ಸಿಡಿದವು ಅಥ[illegible] ಪಕ್ಷೇತರ ವ್ಯಕ್ತಿಗಳ ನೇತೃತ್ವದಲ್ಲಿ ನಡೆದವು. ನೇತೃತ್ವ[illegible] ಸ್ವರೂಪ ಏನೇ ಇರಲಿ, ಕಾರ್ಮಿಕರು, ರೈತರು[illegible] ಕೃಷಿಕೂಲಿಗಾರರು ಅಥವಾ ಇತರ ದುಡಿಯು[illegible] ಜನವಿಭಾಗಗಳು, ವಿದ್ಯಾರ್ಥಿಗಳು, ಯುವಜನ[illegible] ಮತ್ತು ಮಹಿಳೆಯರು ರಾಜಕೀಯ ಭೇದ[illegible]ಭಾವವಿಲ್ಲದೆ ಇವುಗಳಲ್ಲಿ ಸಕ್ರಿಯವಾ[illegible] ಭಾಗವಹಿಸುತ್ತಿದ್ದಾರೆ. ಇವುಗಳಲ್ಲಿ ಬಹಳಷ್ಟು ಕ್ಷಣಿ[illegible] ಕೆಲವೇ ಬೇಡಿಕೆಗಳ ಈಡೇರಿಕೆಗಾಗಿಯಷ್ಟೇ ನಡೆದವು[illegible] ಆದರೂ ಅವು ಪ್ರಜಾಪ್ರಭುತ್ವ ಆಂದೋಲನ[illegible] ಮುನ್ನಡೆಗೆ ಅಪಾರ ನೆರವು ನೀಡಿವೆ. ಕೋಮುವಾ[illegible] ಮತ್ತು ವಿಚ್ಛಿದ್ರಕಾರೀ ಶಕ್ತಿಗಳಿಂದ ಈ ಅವಧಿಯ[illegible] ಒಂದು ದೊಡ್ಡ ಸವಾಲು ಕಂಡು ಬಂದಿದೆ. ಅದ[illegible] ನಮ್ಮ ದೇಶದ ಐಕ್ಯತೆಗೇ ಬೆದರಿಕೆ ಒಡ್ಡಿದೆ. ನ[illegible] ಪಕ್ಷ ಒಂದೆಡೆ ಕಾಂಗ್ರೆಸ್(ಐ) ನ್ನು ಅಧಿಕಾ[illegible]ದಿಂದಿಳಿಸಲು ಪ್ರಯತ್ನಿಸುತ್ತಾ ಈ ಪ್ರತಿಗಾ[illegible] ಶಕ್ತಿಗಳ ವಿರುದ್ಧ ಹೋರಾಡಲು, ಅವರನ್ನು [illegible]ರಿಂದ ದೂರ ಸರಿಸಲು ಎಡ ಮತ್ತು ಪ್ರಜಾಪ್ರಭು[illegible]ವಾದೀ ಪಕ್ಷಗಳ ಐಕ್ಯತೆಗೆ ಶ್ರಮಿಸುತ್ತದೆ.

ಪುಟ 8





ಈಗಿನ ತುರ್ತು ಅವಶ್ಯಕತೆ

ಮಹಾಧಿವೇಶನದ ಉದ್ಘಾಟನೆಯ ನಂತರ ಮಹಾಧಿವೇಶನದ ಕರಡು ರಾಜಕೀಯ ವರದಿಯನ್ನು ಕಾ.ಬಿ.ಟಿ.ರಣದಿವೆಯವರು ಚರ್ಚೆಗೆ ಮಂಡಿಸಿದರು. ಮಂಡಿಸುತ್ತಾ ಅವರು ಹೇಳಿದ ಮಾತುಗಳು ರಾಜಕೀಯ ವರದಿಯ ಸಾರಸಂಗ್ರವಾಗಿತ್ತು ಮಾತ್ರವಲ್ಲದೆ, ಇನ್ನಷ್ಟು ವಿಶದಪಡಿಸುವ ಅಂಶಗಳಿದ್ದವು. ಅವರ ಈ ಭಾಷಣದ ಸಂಗ್ರಹಾನುವಾದವನ್ನು ನಮ್ಮ ಓದುಗರಿಗೆ ಇಲ್ಲಿ ಕೊಡುತ್ತಿದ್ದೇವೆ.

ಪೊಲಿಟ್‌ಬ್ಯೂರೋ ಸದಸ್ಯರಾದ ಬಿ.ಟಿ.ರಣಧಿವೆಯವರು ಕರಡು ರಾಜಕೀಯ ನಿರ್ಣಯವನ್ನು ಮಹಾಧಿವೇಶನದಲ್ಲಿ ಚರ್ಚೆಗೆ ಮಂಡಿಸುತ್ತಾ "ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ರಂಗದಲ್ಲಿ ಹಲವು ಪ್ರಮುಖ ಬೆಳವಣಿಗೆಗಳು ನಡೆದಿವೆ, ಅವನ್ನು ಈ ನಿರ್ಣಯದಲ್ಲಿ ವಿಶ್ಲೇಷಿಸಲಾಗಿದೆ. ಈ ವಿಶ್ಲೇಷಣೆ ಸರಿಯೇ ಎಂದು ನೀವೀಗ ಹೇಳಬೇಕಾಗಿದೆ" ಎಂದು ೨೪ ಪುಟಗಳ ಭಾಷಣವನ್ನು ಆರಂಭಿಸಿದರು.

ಕಳೆದ ೭ ವರ್ಷಗಳ ಅತಿ ಪ್ರಮುಖ ಬೆಳವಣಿಗೆ ಎಂದರೆ ಶಾಂತಿಯ ಹೋರಾಟ ಒಂದು ನಿರ್ಣಾಯಕ ಘಟ್ಟ ತಲುಪಿದೆ. ಸಿ.ಪಿ.ಎಸ್.ಯು.ನ ೨೭ನೇ ಮಹಾಧಿವೇಶನದ ನಂತರ ಸೋವಿಯತ್ ಒಕ್ಕೂಟ ಪರಮಾಣು ನಿಶ್ಶಸ್ತ್ರೀಕರಣ, ಸಂಘರ್ಷದ ಕೇಂದ್ರಗಳನ್ನು ಇಲ್ಲವಾಗಿಸುವುದು ಮತ್ತು ಪಾರಂಪರಿಕ ಶಸ್ತ್ರಾಸ್ತ್ರಗಳಲ್ಲೂ ಕಡಿತ ಮುಂತಾದ ಕ್ರಮಗಳ ಮೂಲಕ ನಡೆಸಿದ ನಿರಂತರ ಹೋರಾಟಗಳಿಂದಾಗಿ ವಿಶ್ವದಾದ್ಯಂತ ಶಾಂತಿ ಆಂದೋಲನ ಬಲಯುತವಾಗಿ ಬೆಳೆಯುತ್ತಿದೆ. ಸಾಮ್ರಾಜ್ಯಶಾಹಿ ಹದ್ದುಗಳು ದಿನೇ-ದಿನೇ ಜನರಿಂದ ದೂರಗೊಳ್ಳುತ್ತಿದ್ದಾರೆ.

ಆದರೂ ಬಂಡವಾಳಶಾಹಿ ವ್ಯವಸ್ಥೆಯ ವಾಸ್ತವತೆಗಳನ್ನು ಮರೆಸುವುದಾಗಲಿ, ಅದನ್ನು ಮೀರುವುದಾಗಲಿ ಸಾಧ್ಯವಿಲ್ಲ. ಆದ್ದರಿಂದಲೇ ರಾಜಕೀಯ ನಿರ್ಣಯ ಮುಂದುವರಿಯುತ್ತಿರುವ ಬಂಡವಾಳಶಾಹಿ ಬಿಕ್ಕಟ್ಟಿನ ಬಗ್ಗೆ ಹೇಳುತ್ತದೆ ಎಂದ ಬಿ.ಟಿ.ಆರ್. ರಾಜಕೀಯ ನಿರ್ಣಯದಲ್ಲಿ ಅಂತರರಾಷ್ಟ್ರೀಯ ಬೆಳವಣಿಗೆಗಳ ಕುರಿತಾದ ವಿಭಾಗದ ಕೊನೆಯ ಪರಿಚ್ಛೇದದತ್ತ ಗಮನ ಸೆಳೆಯುತ್ತಾ ಬಂಡವಾಳಶಾಹಿ ವ್ಯವಸ್ಥೆ ತನ್ನ ಬಿಕ್ಕಟ್ಟಿನ ಹೊರೆಯನ್ನು ಮೂರನೇ ಜಗತ್ತಿನ ದೇಶಗಳ ಮೇಲೆ ಹೇಗೆ ವರ್ಗಾಯಿಸುತ್ತವೆ ಎಂಬುದಕ್ಕೆ ಇನ್ನಷ್ಟು ಪುರಾವೆ ಇದೆ ಎಂದು ಹೇಳಿ ವಿಶ್ವ ಬ್ಯಾಂಕಿನ ಇತ್ತೀಚಿನ ಅಂಕಿ ಸಂಖ್ಯೆಗಳನ್ನು ಉದ್ಧರಿಸಿದರು.

ಸಾಲ, ವ್ಯಾಪಾರದಲ್ಲಿ ಕೊಳ್ಳೆ, ಸಾಮಗ್ರಿಗಳ ಬೆಲೆಗಳನ್ನು ಬಲಾತ್ಕಾರದಿಂದ ತಗ್ಗಿಸುವುದು ಮುಂತಾದ ಕ್ರಮಗಳ ಮೂಲಕ ಬಂಡವಾಳಶಾಹಿ ತನ್ನ ಬಿಕ್ಕಟ್ಟಿನ ಹೊರೆಯನ್ನು ಮೂರನೇ ಜಗತ್ತಿನ ದೇಶಗಳ ಮೇಲೆ ವರ್ಗಾಯಿಸುತ್ತದೆ. ಆದರೆ ಈ ಶೋಷಣಾ ವ್ಯವಸ್ಥೆಯ ಮೇಲೆ ಅವಲಂಬಿಸಿರದ ಸಮಾಜವಾದಿ ದೇಶಗಳು ಇದಕ್ಕೆ ತದ್ವಿರುದ್ಧವಾಗಿ ಪರಸ್ಪರ ಪ್ರಯೋಜನದ ಆಧಾರದ ಮೇಲೆ ಸಂಬಂಧಗಳನ್ನು ಬೆಳೆಸುತ್ತವೆಯೇ ಹೊರತು ವಾಣಿಜ್ಯ ಕೊಳ್ಳೆಯ ಮೂಲಕವಲ್ಲ. ಇಲ್ಲೇ ಸಮಾಜವಾದಿ ವ್ಯವಸ್ಥೆಯ ಉತ್ತಮಿಕೆಯ ಅರಿವಾಗುವುದು.

ಸಮಾಜವಾದಿ ದೇಶಗಳಲ್ಲಿ ಪುನರ್‌ರಚನೆಯ ಅಗತ್ಯ ಬಂದಿರುವುದರ ಬಗ್ಗೆ, ಅವರೂ ಕಷ್ಟ ಎದುರಿಸಬೇಕಾಗಿ ಬಂದಿದೆ ಎಂಬ ವರದಿಗಳ ಬಗ್ಗೆ ನಮ್ಮ ಹಲವು ಸಂಗಾತಿಗಳು ಗಲಿಬಿಲಿಗೊಂಡಿದ್ದಾರೆ ಎಂಬುದನ್ನು ಗಮನಿಸಿದ ಬಿ.ಟಿ.ಆರ್. ಇದಕ್ಕೆ ಸಮಾಜವಾದಿ ಕ್ರಾಂತಿ ಯಶಸ್ವಿಯಾದ ಮೇಲೆ ಯಾವ ಸಮಸ್ಯೆಗಳೂ ಇರಲು ಸಾಧ್ಯವಿಲ್ಲ ಎಂಬ ಭಾವನಾವಾದಿ ನಂಬಿಕೆ ಒಂದು ಕಾರಣವೆಂದರು. ತ್ವರಿತವಾಗಿ ಬೆಳೆಯುತ್ತಿರುವ ಒಂದು ಸಮಾಜವಾದಿ ಸಮಾಜದಲ್ಲಿ ಅದಕ್ಕನುಗುಣವಾಗಿ ಆರ್ಥಿಕ ಮತ್ತು ರಾಜಕೀಯದ ನಿರ್ಣಯದಲ್ಲೂ ತ್ವರಿತ ಬದಲಾವಣೆ ಅಗತ್ಯ. ಇದರಲ್ಲಿ ಹಿಂದೆ ಬಿದ್ದರೆ ವಿಕೃತಿ, ಸ್ಥಗಿತತೆ, ಅಧಿಕಾರ ಶಾಹಿಯ ಬೆಳವಣಿಗೆ ಮತ್ತು ಸಮಾಜವಾದಿ ಪ್ರಜ್ಞೆಯಲ್ಲಿ ಸವೆತ ಕಾಣುತ್ತದೆ. ಸೋವಿಯತ್ ಪಕ್ಷ ಮತ್ತು ಚೀನಾ ಪಕ್ಷ ಇತ್ತೀಚೆಗೆ ಇದನ್ನು ಅರಿತುಕೊಂಡು ಅವನ್ನು ಸರಿಪಡಿಸಲು ಕ್ರಮ ಕೈಗೊಳ್ಳುತ್ತಿದ್ದಾರೆ. ನಮ್ಮ ಕೇಂದ್ರ ಸಮಿತಿ ಹೇಳಿದ್ದಂತೆ ಇವೆಲ್ಲಾ ಕ್ರಮಗಳನ್ನು ಮಾರ್ಕ್ಸ್‌ವಾದಿ-ಲೆನಿನ್‌ವಾದದ ಆಧಾರದ ಮೇಲೆ ಪರೀಕ್ಷಿಸಬೇಕು. ಆದರೆ ಕಾರ್ಮಿಕ ವರ್ಗದ ಪ್ರಭುತ್ವದಲ್ಲಿ, ಮಾರ್ಕ್ಸ್‌ವಾದ-ಲೆನಿನ್‌ವಾದದ ಮಾರ್ಗದರ್ಶಕ ಪಾತ್ರವಿರುವಲ್ಲಿ, ಉತ್ಪಾದನಾ ಸಾಧನಗಳ ಸಮಾಜೀಕರಣವಾಗಿರುವಲ್ಲಿ ಸರಿಯಾದ ಪರಿಹಾರ ಕಂಡುಕೊಳ್ಳಲು ಖಂಡಿತಾ ಸಾಧ್ಯ. ಇದು ಸಮಾಜವಾದಿ ವ್ಯವಸ್ಥೆಯ ಉತ್ತಮಿಕೆಯ ನಿಜವಾದ ಆಧಾರ ಎಂದು ಬಿ.ಟಿ.ಆರ್. ನುಡಿದರು.

ವರ್ಗ ಸಮತೋಲನ ಬದಲಾಗುತ್ತಿದೆ

ಎರಡು ವ್ಯವಸ್ಥೆಗಳ ನಡುವೆ ವೈರುಧ್ಯ ತೀವ್ರಗೊಳ್ಳುತ್ತಿದೆ ಎಂಬ ಕೇಂದ್ರ ಸಮಿತಿಯ ಸೈದ್ಧಾಂತಿಕ ಪ್ರಶ್ನೆಗಳ ಕುರಿತಾದ ಹಾಗೂ ರಾಜಕೀಯ ನಿರ್ಣಯದ ಹೇಳಿಕೆಯನ್ನು ಬಿ.ಟಿ.ಆರ್. ಇನ್ನಷ್ಟು ವಿಶದಪಡಿಸಿದರು. ತೃತೀಯ ಜಗತ್ತಿನೊಡನೆ ಸಾಮ್ರಾಜ್ಯಶಾಹಿಯ ವೈರುಧ್ಯಗಳು ತೀವ್ರಗೊಂಡಿವೆ ಎಂಬ ಬಗ್ಗೆ ಯಾರಿಗೂ ಸಂಶಯ ಉಳಿದಿಲ್ಲ. ಆದರೂ ಅಂತರರಾಷ್ಟ್ರೀಯ ವಾತಾವರಣದಲ್ಲಿ ಒಂದು ದೊಡ್ಡ ಬದಲಾವಣೆ ಕಂಡು ಬರುತ್ತಿದೆ. ಜನ ಹೋರಾಡಿದ್ದಾರೆ. ಕಾರ್ಮಿಕ ವರ್ಗ ಹೋರಾಡಿದೆ, ಸ್ವಾತಂತ್ರ್ಯ ರಕ್ಷಣೆಗೆ, ಆಕ್ರಮಣ ಎದುರಿಸಲು ತನ್ನ ರಕ್ತ ಬಸಿದಿದೆ. ಸಮಾಜವಾದಿ ದೇಶಗಳ ಶಾಂತಿ ಪ್ರಸ್ತಾಪಗಳಿಗೆ ವ್ಯಾಪಕ ಬೆಂಬಲ ದೊರೆತಿದೆ. ಮಾನವ ಕುಲವನ್ನು ಯುದ್ಧದಿಂದ ರಕ್ಷಿಸುವ ಜಾಗತಿಕ ಹೋರಾಟಕ್ಕೆ ನೀಡಿದ ಈ ಮುಖಂಡತ್ವದಿಂದಾಗಿ ವರ್ಗ ಶಕ್ತಿಗಳ ಸಮತೋಲನ ಇನ್ನಷ್ಟು ಸ್ವಾತಂತ್ರ್ಯ, ಶಾಂತಿ ಹಾಗೂ ಪ್ರಜಾಪ್ರಭುತ್ವದತ್ತ ಸರಿದಿದೆ ಎಂದರು ಬಿ.ಟಿ.ಆರ್. ಭಾರತದಲ್ಲಿ ಈ ಅಂತರರಾಷ್ಟ್ರೀಯ ಬೆಳವಣಿಗೆಗಳ ಬಗ್ಗೆ ಇರುವ ನಿರ್ಲಕ್ಷ್ಯದಿಂದಾಗಿ ಶಾಂತಿ ಆಂದೋಲನ ಜನ ಸಾಮಾನ್ಯರೊಡನೆ ಯಾವುದೇ ಸಂಬಂಧ ಹೊಂದದ ಸಂಕುಚಿತ ಹಾದಿಯಲ್ಲಿದೆ. ಈ ದೌರ್ಬಲ್ಯವನ್ನು ನೀಗಬೇಕಾಗಿದೆ ಎಂದರು.

ನಮ್ಮ ದೇಶದ ಅಲಿಪ್ತ ವಿದೇಶಾಂಗ ಧೋರಣೆ ಬಗ್ಗೆ ಮಾತನಾಡುತ್ತಾ ಅವರು ಕಲ್ಕತ್ತಾ ಮಹಾಧಿವೇಶನ ಈ ಬಗ್ಗೆ ನೀಡಿದ ಎಚ್ಚರವನ್ನು ನೆನಪಿಸಿಕೊಡುತ್ತಾ ಅದು ನೀಡಿದ ನಿರ್ದೇಶನ ನಾವು ಪಾಲಿಸಿದಂತಿಲ್ಲ. ಇದು ನಮ್ಮ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹಿತಾಸಕ್ತಿಗೆ ವಂಚನೆ ಬಗೆದಂತೆ ಎಂದರು. ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ರಕ್ಷಣೆಯ ಮತ್ತು ಪ್ರಜಾಪ್ರಭುತ್ವದ ಮುನ್ನಡೆಯ ಹೋರಾಟದ ಒಂದು ಭಾಗವಾಗಿ ಅಲಿಪ್ತ ನೀತಿಯನ್ನು ರಕ್ಷಿಸುವುದು, ಬಲಗೊಳಿಸುವುದು ಏಕೆ ಅಗತ್ಯ ಎಂದು ವಿವರಿಸಿದರು. ಕಳೆದ ಮೂರು ವರ್ಷಗಳಲ್ಲಿ ಹಲವಾರು ಒತ್ತಡ, ಚಂಚಲತೆಗಳಿದ್ದರೂ ಅಲಿಪ್ತ ನೀತಿ ಮುಂದುವರೆದಿದೆ. ಅಮೆರಿಕ ಪಾಕಿಸ್ತಾನಕ್ಕೆ ಶಸ್ತ್ರ ತಂದು ಸುರಿಯುತ್ತಿದ್ದುದರಿಂದ ನಮ್ಮ ಆಳು ವರ್ಗಗಳು ಕಂಡ ಬೆದರಿಕೆ ಇದಕ್ಕೊಂದು ಪ್ರಮು ಕಾರಣ. ಆದರೂ ಪಾಶ್ಚಿಮಾತ್ಯ ನಾವಿಕ ಪಡೆ ಕೊ ಪ್ರದೇಶ ಪ್ರವೇಶಿಸಿದಾಗ ಪ್ರತಿಭಟಿಸದೆ ಇದ್ದುದರಿ ಹಿಡಿದು ಮಾಲ್ದೀವ್ಸ್‌ನಲ್ಲಿ ಭಾರತದ ಕಾರ್ಯಾಚರಣ ಅಮೆರಿಕದ ಪೂರ್ವಾನುಮತಿ ಇದ್ದ ಸಂಗತಿವ ನಮ್ಮ ಆಳರಸರ ಚಂಚಲತೆಯ ಉದಾಹರಣೆಗಳ ನೀಡಿದ ಬಿ.ಟಿ.ಆರ್. ಕೂಡ ಭಾರತವನ್ನು ಉಬ್ ಇನ್ನೊಂದೆಡೆ ಭಾರತದೊಡನೆ ಅಷ್ಟೇನೂ ಮಿತ್ರತ್ವವಿ ದೇಶಗಳೊಡನೆ ಮಿತ್ರಕೂಟ ರಚಿಸುವಂತೆ ಮಾಡಿ ಕೂಡ ಅಲಿಪ್ತ ನೀತಿಯನ್ನು ಸಡಿಲಗೊಳಿಸ ಅಮೆರಿಕನ್ ಆಳುವ ವಲಯಗಳ ಪ್ರಯ ಒಂದು ಅಂಗ ಎಂದರು.


ನಮ್ಮ ಕಾರ್ಯಕರ್ತರು ಮತ್ತು ಘಟಕಗಳು ಇ ಬಗ್ಗೆ ನಿರ್ಲಕ್ಷ್ಯ ತೋರಿಸುವುದು ಅಪಾಯಕಾ ಮಾರ್ಗಚ್ಯುತಿ ಹಾಗೂ ಬೂರ್ಜ್ವಾ ವಿರೋಧ ಪಕ್ಷ ಧೋರಣೆಗಳಿಗೆ ಶರಣಾದುದರ ಉದಾಹರಣೆ ಎ ಅವರು ಈ ಪ್ರಶ್ನೆಯನ್ನು ನಾವೆಲ್ಲಾ ಗಂಭೀರವ ಎತ್ತಿಕೊಳ್ಳಬೇಕೆಂದು ಕರೆ ನೀಡಿದರು.

ಮೂಲಭೂತವಾದಿಗಳು ಏಕೆ ತಲೆ ಎತ್ತುತ್ತಿದ್ದಾರೆ?

ರಾಷ್ಟ್ರೀಯ ಸನ್ನಿವೇಶದ ಬಗ್ಗೆ ಮಾತನಾಡ ಕಳೆದ ಮೂರು ವರ್ಷಗಳಲ್ಲಿನ ಬೆಳವಣಿಗೆ ಗಮನದಲ್ಲಿಟ್ಟುಕೊಂಡು ಜನತಾ ಪ್ರಜಾಪ್ರಭುತ್ವ ನಮ್ಮ ಮೂಲಭೂತ ಹೋರಾಟದ ಧ್ಯೇಯ ಗುಣವಾಗಿ ಸದ್ಯದ ರಾಜಕೀಯ ನಿಲು ರೂಪಿಸಲು ಕರಡು ರಾಜಕೀಯ ನಿರ್ ಪ್ರಯತ್ನಿಸಿದೆ ಎಂದರು ಬಿ.ಟಿ.ಆರ್. ಕಾಂಗ್ರೆಸ್

ಪುಟ







ಈಗಿನ ತುರ್ತು ಅವಶ್ಯಕತೆ

(ಪುಟ 7ರಿಂದ)

ಜನತೆಯಿಂದ ತ್ವರಿತ ಗತಿಯಲ್ಲಿ ಜನತೆಯಿಂದ [illegible]ಗಿದೆ. ಕಲ್ಕತ್ತಾ ಮಹಾಧಿವೇಶನ, ಕಾಂಗ್ರೆಸ್(ಐ)ನ್ನು ಅಧಿಕಾರದಿಂದಿಳಿಸುವ ಕರೆ ನೀಡಿದರಲ್ಲ, ಆದರೆ ಈಗ ಅದು ತುರ್ತು ಅವಶ್ಯಕತೆ. ವಿವಿಧ ರಂಗಗಳಲ್ಲಿ ಕಾಂಗ್ರೆಸ್(ಐ) ಧೋರಣೆಗಳ ವಿಫಲತೆ, ಭ್ರಷ್ಟಾಚಾರ, ಜನತೆಯ ಮೇಲೆ ಹೊರಿಸಿದ ಸಂಕಷ್ಟಗಳನ್ನು ವಿವರವಾಗಿ ವಿಶ್ಲೇಷಿಸುತ್ತಾ ರಾಜೀವ್‌ಗಾಂಧಿ ಸರ್ಕಾರದ ಕ್ರಿಮಿನಲ್ ವಿಫಲತೆಯೆಂದರೆ ವಿಚ್ಛಿದ್ರಕಾರಿ ಶಕ್ತಿಗಳನ್ನು ಎದುರಿಸುವಲ್ಲಿ ಅದರ ಅಸಮರ್ಥತೆ ಮತ್ತು ಅಧಿಕಾರಕ್ಕೆ ಕಚ್ಚಿಕೊಂಡಿರಲು ಈ ಶಕ್ತಿಗಳೊಡನೆ ರಾಜಿ ಮಾಡಿಕೊಂಡದ್ದು ಎಂದರು.

ಆದರೆ ಕಾಂಗ್ರೆಸ್(ಐ)ನ್ನು ಅಧಿಕಾರದಿಂದ ಇಳಿಸುವ ಹೋರಾಟ ರಂಗದಲ್ಲಿರುವ ಎಲ್ಲಾ ಹಿತಾಸಕ್ತಿಗಳನ್ನು ಮತ್ತು ವರ್ಗಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಯಾಕೆಂದರೆ, ತನ್ನ ನಿಲುವನ್ನು ರೂಪಿಸುವಾಗ ವರ್ಗ ವಾಸ್ತವತೆಯ ವರ್ಗತಿಕ್ಕಾಟಗಳ ಸಂಪೂರ್ಣ ವ್ಯಾಪ್ತಿಯನ್ನು ಗಮನಕ್ಕೆ ತೆಗೊಳ್ಳದ ಒಂದು ಕಮ್ಯೂನಿಸ್ಟ್ ಪಕ್ಷ ತಕ್ಷಣವೇ ಮಾರ್ಗಕ್ಕೆ ಮತ್ತು ಅಂತಿಮ ಉದ್ದೇಶಕ್ಕೆ ಸಂಬಂಧಪಟ್ಟಂತೆ ತಪ್ಪುಗಳನ್ನು ಮಾಡುತ್ತದೆ. ಈಗ ನಮ್ಮ ದೇಶದಲ್ಲಿ ವಿವಿಧ – ವರ್ಗಹಿತಾಸಕ್ತಿಗಳು ಅಧಿಕಾರ ಸ್ಥಾನ ಪಡೆಯಲು ಪ್ರಯತ್ನಿಸುತ್ತಿವೆ. ಇವುಗಳಲ್ಲಿ ಒಂದು ಪುನರುತ್ಥಾನವಾದಿ ಮತ್ತು ಮೂಲಭೂತವಾದಿ ಶಕ್ತಿಗಳು. ಅವು ಒಂದು ಪ್ರಜಾಸತ್ತಾತ್ಮಕ ಮತ್ತು ರಾಷ್ಟ್ರೀಯ ಹಣೆಪಟ್ಟಿ ಪಡೆದು ವಿರೋಧ ಪಕ್ಷಗಳ ಬೆಂಬಲ ಗಳಿಸಿ ಜನತೆಯನ್ನು ಮರುಳುಗೊಳಿಸಲು ಪ್ರಯತ್ನಿಸುತ್ತಿವೆ. ಇವೀಗ ಸಾಮೂಹಿಕ ನೆಲೆ ಬೆಳೆಸಿಕೊಳ್ಳುತ್ತಿರುವುದರಿಂದ ಈಗ ಕಾಂಗ್ರೆಸ್(ಐ)ಯನ್ನು ಅಧಿಕಾರದಿಂದಿಳಿಸುವ ಜತೆಗೆ ಈ ಶಕ್ತಿಗಳ ವಿರುದ್ಧ ನೇರ ಸಾಮೂಹಿಕ ಮಧ್ಯಪ್ರವೇಶದ ಅಗತ್ಯವನ್ನು ನಮ್ಮ ರಾಜಕೀಯ ನಿರ್ಣಯ ಒತ್ತಿಹೇಳಿದೆ ಎಂದ ಬಿ.ಟಿ.ಆರ್. ಈ ಶಕ್ತಿಗಳು ತಲೆ ಎತ್ತುತ್ತಿರುವ ಹಿನ್ನೆಲೆಯನ್ನು ವಿವರಿಸಿದರು. ಭಾರತದ ಪ್ರಜಾಸತ್ತಾತ್ಮಕ ಕ್ರಾಂತಿಯ ಎರಡನೇ ಘಟ್ಟದಲ್ಲಿ, ಊಳಿಗಮಾನ್ಯ ವಿರೋಧಿ ಘಟ್ಟದ ಆರಂಭದಲ್ಲಿ ಬೂರ್ಜ್ವಾ ವರ್ಗ ಊಳಿಗಮಾನ್ಯ ವ್ಯವಸ್ಥೆಯೊಡನೆ ರಾಜೀ ಮಾಡಿಕೊಂಡರೂ ಜಾತಿ, ಕೋಮುವಾದಿ ತತ್ವಗಳ ಬಲ ಬಹಳ ಕಡಿಮೆಯಿತ್ತು ಎಂದರು. ಆದರೆ ಸಮಯ ಕಳೆದಂತೆ ಈ ಸಮೀಕರಣ ಬದಲಾಗುತ್ತಾ ಸ್ವಾತಂತ್ರ್ಯದ ಆರಂಭದ ದಿನಗಳಲ್ಲಿ ಹಿನ್ನೆಲೆಗೆ ಸರಿಯಬೇಕಾಗಿ ಬಂದಿದ್ದ ಊಳಿಗಮಾನ್ಯ ಹಾಗೂ ಮೂಲಭೂತವಾದಿ ಶಕ್ತಿಗಳು ದೇಶದ ರಾಜಕೀಯದಲ್ಲಿ ಮಧ್ಯ ಪ್ರವೇಶ ನಡೆಸುತ್ತಾ, ಸಾಮ್ರಾಜ್ಯಶಾಹಿ ಶಕ್ತಿಗಳ ಏಜೆನ್ಸಿಯಂತೆ ವರ್ತಿಸುತ್ತಾ ಪ್ರಜಾಪ್ರಭುತ್ವ ಚಳುವಳಿಯನ್ನು ಛಿದ್ರಗೊಳಿಸಲು ಪ್ರಯತ್ನಿಸುತ್ತಿವೆ.

ಬ್ರಿಟೀಷ್ ದಿನಗಳ ಪ್ರಮುಖ ಪ್ರತಿಗಾಮಿ ಶಕ್ತಿಯನ್ನು, ಭಾರತೀಯ ಸಮಾಜದ ಅತ್ಯಂತ ಪ್ರತಿಗಾಮಿ ವಿಚಾರಗಳನ್ನು ನಾವೀಗ ಮತ್ತೆ ಎದುರಿಸುತ್ತಿದ್ದೇವೆ ಎಂಬುದರ ಪೂರ್ಣ ಅರಿವು ಹಲವರಿಗೆ ಇನ್ನೂ ಬಂದಿಲ್ಲ ಎಂದ ಬಿ.ಟಿ.ಆರ್. ಮೂಲಭೂತವಾದಿಗಳು, ಗುರುಗಳು, ಸ್ವಾಮಿಗಳು, ಶಂಕರಾಚಾರ್ಯರುಗಳು ಇವರುಗಳು ಹೇಗೆ ಯಾವ ಲಜ್ಜೆಯೂ ಇಲ್ಲದೆ ದೇಶದ ಪ್ರಜಾಪ್ರಭುತ್ವ ಸ್ವರೂಪವನ್ನು, ಕಾನೂನುಗಳನ್ನು ಮುರಿಯುತ್ತಿದ್ದಾರೆ, ಹೇಗೆ ಸರ್ಕಾರ ತಲೆ ಬಾಗುವಂತೆ ಮಾಡುತ್ತಿದ್ದಾರೆ ಎಂದು ವಿವರಿಸಿದರು.

ಕಾಂಗ್ರೆಸ್(ಐ)ನ್ನು ಸೋಲಿಸುವ ನಮ್ಮ ಹೋರಾಟಕ್ಕೂ ರಾಷ್ಟ್ರೀಯ ಐಕ್ಯತೆಗಾಗಿ ನಮ್ಮ ಹೋರಾಟಕ್ಕೂ ಪರಸ್ಪರ ಸಂಬಂಧವಿದೆ. ಆದ್ದರಿಂದಲೇ ಕಾಂಗ್ರೆಸ್(ಐ)ನ್ನು ಸೋಲಿಸಲು ಜಾತ್ಯಾತೀತ ಬೂರ್ಜ್ವಾ ವಿರೋಧ ಪಕ್ಷಗಳೊಡನೆ ಐಕ್ಯತೆ ಬೆಸೆಯುವುದರ ಜೊತೆಗೆ ಈ ಮೂಲಭೂತವಾದಿ ಶಕ್ತಿಗಳನ್ನು ದೂರ ಸರಿಸಲು ನಾವು ಪ್ರಯತ್ನಿಸುತ್ತಿದ್ದೇವೆ ಎಂದು ಬಿ.ಟಿ.ಆರ್. ವಿವರಿಸಿದರು. ಈ ಹೋರಾಟದಲ್ಲಿ ನಮ್ಮ ರಾಜಕೀಯ ನಿರ್ಣಯ ಮುಸ್ಲಿಂ ಅಲ್ಪಸಂಖ್ಯಾತರ ವಿರುದ್ಧ ಅತ್ಯಾಚಾರಕ್ಕೆ ವಿಶೇಷ ಗಮನ ಸೆಳೆದಿದೆ.

ರಾಷ್ಟ್ರೀಯ ಐಕ್ಯತೆಗೆ ಸಾಮ್ರಾಜ್ಯಶಾಹಿಗಳ [illegible]ದಿಂದ ದೊಡ್ಡ ಕುತ್ತು ತಂದಿರುವ [illegible] ಶಕ್ತಿ ಎಂದರೆ ಪ್ರತ್ಯೇಕತಾವಾದಿ ಶಕ್ತಿಗಳು. ಈ ಬಗ್ಗೆ ನಮ್ಮ ಹೋರಾಟವನ್ನು ವಿವರಿಸುತ್ತಾ ಬಿ.ಟಿ.ಆರ್. ಈ ಸಮಸ್ಯೆಯ ಹಿನ್ನೆಲೆಯನ್ನು [illegible] ಕೋಮು ಅಥವಾ ಊಳಿಗಮಾನ್ಯ [illegible] ಹೋರಾಟದ [illegible] ಬಲಗಳಲ್ಲ, ಬದಲಾಗಿ ಬುಡಕಟ್ಟು ಜನಾಂಗಗಳ ಸ್ಥಿತಿಯ ಬಗ್ಗೆ ಒಂದು ಹೊಸ [illegible] ಉಂಟಾಗಿರುವ ಹಿನ್ನೆಲೆಯಲ್ಲಿ, ಭಾರತದ ದೇಸಿ ಜನಾಂಗಗಳ ಪ್ರಶ್ನೆಯ ಒಂದು ಭಾಗವಾಗಿ ಇದನ್ನು ಕಾಣಬೇಕು. ಇದಕ್ಕೆ ಎರಡು ಆಯಾಮಗಳಿವೆ. ಮುಖಂಡತ್ವದ ಒಂದು ವಿಭಾಗ ಸಮಾನತೆ, ಸ್ವಂತಿಕೆಯ ರಕ್ಷಣೆ, ಸ್ವಯಮಾಡಳಿತ ಮತ್ತು ಆಧುನೀಕರಣದ ತುರ್ತು ಬೇಡಿಕೆಗಳನ್ನು ಪ್ರತಿಪಾದಿಸುವಂತೆ ಮೇಲ್ನೋಟಕ್ಕೆ ಕಂಡರೂ ವಾಸ್ತವವಾಗಿ ಈ ಜಾಗೃತಿಯನ್ನು ವಿಚ್ಛಿದ್ರಕಾರಿ ಮಾರ್ಗದತ್ತ ತಿರುಗಿಸುತ್ತದೆ. ಈ ಆಂದೋಲನಗಳು ಎತ್ತುವ ತುರ್ತು ಬೇಡಿಕೆಗಳಿಂದಾಗಿ ಇವಕ್ಕೆ ಸಾಮೂಹಿಕ ನೆಲೆ ಸಿಗುತ್ತದೆ. ಈಶಾನ್ಯ ಭಾರತದ ಈ ಬುಡಕಟ್ಟು ರಾಜ್ಯಗಳು ಬ್ರಿಟಿಷರ ವಿರುದ್ಧ ಹೋರಾಡಿದರೂ ಅಖಿಲ ಭಾರತ ಸ್ವಾತಂತ್ರ್ಯ ಹೋರಾಟದ ಭಾಗವಾಗಿರಲಿಲ್ಲವಾದ್ದರಿಂದ ಪ್ರತ್ಯೇಕವಾದಿ ಭಾವನೆಗಳನ್ನು ಎಬ್ಬಿಸುವುದು ಇಲ್ಲಿ ಸುಲಭವಾಗುತ್ತದೆ. ಇದು ಸ್ವತಂತ್ರ ಭಾರತದ ಸಮಸ್ಯೆ. ಮುಂದುವರಿದ ಪ್ರಜಾಪ್ರಭುತ್ವ ಆಂದೋಲನ ಈ ಜನ ವಿಭಾಗಗಳಿಗೆ ಸಮಾನತೆಯ, ಆರ್ಥಿಕ ಹಿಂದುಳಿಕೆ ನಿವಾರಿಸುವ ಭರವಸೆ ನೀಡಬೇಕಾಗುತ್ತದೆ. ಆದರೆ ಬಂಡವಾಳಶಾಹಿ ಮಾರ್ಗದಲ್ಲಿ ಇದು ಪೂರ್ಣವಾಗಿ ಸಾಧ್ಯವಾಗುವುದಿಲ್ಲ ಎಂದರು ಬಿ.ಟಿ.ಆರ್. ಐಕ್ಯತೆ ಕೆಳಮಟ್ಟದಿಂದ ಮಾತ್ರವೇ ಸಾಧ್ಯ. ಆದ್ದರಿಂದ ಭಾರತದ ಕಾರ್ಮಿಕ ಆಂದೋಲನ, ಪ್ರಜಾಪ್ರಭುತ್ವ ಆಂದೋಲನ ಒಂದೆಡೆ ಪ್ರತ್ಯೇಕವಾದಿ ಭಾವನೆಗಳ ವಿರುದ್ಧ ಹೋರಾಡುತ್ತಲೇ ಈ ಜನ ವಿಭಾಗಗಳ ಸಮಾನತೆಯ, ಪ್ರಜಾಪ್ರಭುತ್ವದ ಬೇಡಿಕೆಗಳನ್ನು ಪ್ರತಿಪಾದಿಸಬೇಕು ಎಂದು ಅವರು ಸಲಹೆ ಮಾಡಿದರು.

ಇನ್ನೆರಡು ಮಿತ್ರ ಶಕ್ತಿಗಳು

ಪ್ರಜಾಪ್ರಭುತ್ವ ಕ್ರಾಂತಿ ಯಶಸ್ವಿಗೊಳ್ಳಲು ಅತ್ಯಾವಶ್ಯಕವಾದ ಇನ್ನೂ ಎರಡು ವರ್ಗ ಶಕ್ತಿಗಳ ಉದಯವನ್ನು ರಾಜಕೀಯ ನಿರ್ಣಯ ಗಮನಿಸಿದೆ. ಆದಿವಾಸಿಗಳಲ್ಲಿ ಹೊಸ ಜಾಗೃತಿ ಮೂಡಿ ಬರುತ್ತಿದೆ ಮತ್ತು ಹರಿಜನರು ಊಳಿಗಮಾನ್ಯ ಸ್ಥಿತಿಯ ವಿರುದ್ಧ ಬಂಡೇಳುತ್ತಿದ್ದಾರೆ. ಕಾರ್ಮಿಕ ವರ್ಗ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳು ಈ ಎರಡು ಜನವಿಭಾಗಗಳೊಂದಿಗೆ ಮಿತ್ರತ್ವ ಬೆಳೆಸಬೇಕಾದುದರ ಮಹತ್ವವನ್ನು ಬಿ.ಟಿ.ಆರ್. ವಿವರಿಸಿದರು. ಆದಿವಾಸಿ ಆಂದೋಲನದ ಸಮಯಸಾಧಕ ಮುಖಂಡರು ಎಬ್ಬಿಸಿದ ಅಡೆ-ತಡೆಗಳನ್ನು ತ್ವರಿತವಾಗಿ ಮುರಿದು ಈ ಆಂದೋಲನದೊಂದಿಗೆ ಪ್ರಜಾಪ್ರಭುತ್ವ ಮತ್ತು ವರ್ಗಶಕ್ತಿಗಳ ಮಿತ್ರತ್ವ ಸಾಧ್ಯವಾಗುವಂತೆ ಮಾಡುವ ಹೊಸ ನಿಲುವಿನ ಬಗ್ಗೆ ಪರೀಕ್ಷಿಸಬೇಕಾಗಿದೆ. ಅದೇ ರೀತಿ ಹರಿಜನರ ಸಂಘಟನೆಗಳನ್ನು ಕೇವಲ ಜಾತಿ ಸಂಘಟನೆಗಳೆಂದು ಕಾಣುವ ನಿಲುವನ್ನು, ಸಮಯ ಸಾಧಕ ಮುಖಂಡತ್ವದ ಹಿಂದಿರುವ ಜನ ಸಮೂಹವನ್ನು ನಿರ್ಲಕ್ಷಿಸಿ ಕೇವಲ ಮುಖಂಡತ್ವದ ಆಧಾರದ ಮೇಲೆ ಈ ಆಂದೋಲನವನ್ನು ಪರಿಶೀಲಿಸುವ ನಿಲುವನ್ನು ಬಿಟ್ಟು ಬಿಡಬೇಕೆಂದು ಬಿ.ಟಿ.ಆರ್. ಸೂಚಿಸಿದರು.

ಹೆಚ್ಚುತ್ತಿರುವ ಅಸಂತೃಪ್ತಿಯ ಇನ್ನೊಂದು ಮೂಲವೆಂದರೆ ಕೇಂದ್ರ-ರಾಜ್ಯ ಸಂಬಂಧಗಳು ಎನ್ನುತ್ತಾ ಈ ಸಮಸ್ಯೆಯನ್ನು ಬಿ.ಟಿ.ಆರ್. ತಮ್ಮ ಭಾಷಣದಲ್ಲಿ ಪರಿಶೀಲಿಸಿದರು. ಈ ಸಮಸ್ಯೆ ಭಾಷಾ-ರಾಷ್ಟ್ರೀಯ ಪ್ರದೇಶಗಳು ಮತ್ತು ಸರ್ವ ಸಾಮಾನ್ಯ ಕೇಂದ್ರವೊಂದರ ನಡುವಿನ ಸಂಬಂಧಗಳ ಒಂದು ಸೂಕ್ಷ್ಮ ಪ್ರಶ್ನೆ. ಕಾಂಗ್ರೆಸ್(ಐ) ಕೇಂದ್ರದ ಪ್ರಾಬಲ್ಯ ಹೊರಿಸುವ ನೀತಿ ಮುಂದುವರೆಸುತ್ತಾ ದೇಶದ ವಿಘಟನೆಯ ಬೀಜ ಬಿತ್ತಲು ಸ್ಥಳೀಯ ಪಟ್ಟಭದ್ರ ಹಿತಾಸಕ್ತಿಗಳಿಗೆ ಅವಕಾಶ ಒದಗಿಸುತ್ತಿದೆ. ಈ ಪ್ರಶ್ನೆ ಬಂಡವಾಳ ಶಾಹಿ ಮಾರ್ಗ ಹಾಗೂ ವರ್ಗ ಆಳ್ವಿಕೆಯ ವಿರುದ್ಧ ಹೋರಾಟಕ್ಕೆ ನೇರವಾಗಿ ಸಂಬಂಧಪಟ್ಟ ಪ್ರಶ್ನೆಯನ್ನು ಸಿ.ಪಿ.ಐ.(ಎಂ.) ಪರಿಗಣಿಸುತ್ತದೆ. ಆದ್ದರಿಂದ ಒಂದು ರಾಜ್ಯದ ಮುನ್ನಡೆಯನ್ನು ಇನ್ನೊಂದರ ವಿರುದ್ಧ ಇಟ್ಟು ನೋಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಈಗಿನ ಸಾಮಾಜಿಕ ವ್ಯವಸ್ಥೆಯನ್ನು ಬದಲಿಸಲು ಎಲ್ಲಾ ರಾಜ್ಯಗಳ ಪ್ರಜಾಪ್ರಭುತ್ವ ಮತ್ತು ವರ್ಗ ಐಕ್ಯತೆಯಿಂದ ಮಾತ್ರವೇ ಇದು ಸಾಧ್ಯ.

ಎಡಶಕ್ತಿಗಳ ಸ್ಥಾನ

ಈಗಿನ ಸನ್ನಿವೇಶ ಹಾಗೂ ಪಕ್ಷದ ಮತ್ತು ಎಡ ಶಕ್ತಿಗಳ ಮೇಲಿರುವ ಜವಾಬ್ದಾರಿಯ ಬಗ್ಗೆ ಹೇಳುತ್ತಾ ಎಡಶಕ್ತಿಗಳ ಈಗ ರಾಷ್ಟ್ರದ ರಾಜಕೀಯದ ಮೇಲೆ ಪ್ರಭಾವ ಬೀರುವ ಸ್ಥಿತಿಯಲ್ಲಿದ್ದಾರೆ ಎಂದು ರಾಜಕೀಯ ನಿರ್ಣಯ ಹೇಳುವುದರತ್ತ ಗಮನ ಸೆಳೆದರು. ಇದರರ್ಥ ಎಡಶಕ್ತಿಗಳು ರಾಷ್ಟ್ರೀಯ ಘಟನೆಗಳನ್ನು ಈಗ ರೂಪಿಸಲು ಸಾಧ್ಯ ಎಂದಲ್ಲ. ಆದರೆ ಬೂರ್ಜ್ವಾ ವಿರೋಧ ಪಕ್ಷಗಳ ಮೇಲೆ ಮೊದಲಿಗಿಂತ ಹೆಚ್ಚು ಪ್ರಭಾವ ಬೀರಿ ಅವರು ಸಂಕುಚಿತ ನಿಲುವುಗಳನ್ನು ತಳೆಯದಂತೆ, ಪ್ರತಿಗಾಮಿ ಶಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳದಂತೆ ತಡೆಯುವುದು ಸಾಧ್ಯವಾಗಬಹುದು. ನಮ್ಮ ನೇತೃತ್ವದಲ್ಲಿ ಎಡಶಕ್ತಿಗಳು ಈ ಸ್ಥಾನ ಪಡೆಯಲು ಸಾಧ್ಯವಾದುದು ನಮ್ಮ ನೇತೃತ್ವದ ತ್ರಿಪುರಾ, ಪಶ್ಚಿಮ ಬಂಗಾಳ ಹಾಗೂ ಈಗ ಕೇರಳ ಸರ್ಕಾರಗಳ ಕಾರ್ಯ ನಿರ್ವಹಣೆ ಎಂದು ಬಿ.ಟಿ.ಆರ್. ನೆನೆಪಿಸಿದರು. ಇಷ್ಟೇ ಅಲ್ಲ, ದೇಶದ ಐಕ್ಯತೆ ಎತ್ತಿ ಹಿಡಿಯಲು ನಾವು ಮತ್ತು ಇತರ ಎಡಶಕ್ತಿಗಳು ನಡೆಸಿದ ಪ್ರಾಮಾಣಿಕ ಪ್ರಯತ್ನ ಮಾಡಿದ ತ್ಯಾಗ ಜನರ ನಡುವೆ ನಮಗೆ ಈ ಸ್ಥಾನ ದೊರಕಿಸಿಕೊಟ್ಟಿದೆ.

ಇವೆಲ್ಲಾ ಜನತಾ ಪ್ರಜಾಪ್ರಭುತ್ವಕ್ಕಾಗಿ ಹೋರಾಟದಲ್ಲಿ ಜನಗಳ ನೇತೃತ್ವ ವಹಿಸುವ ನಮ್ಮ ಧ್ಯೇಯಕ್ಕೆ ಹೇಗೆ ನೇರವಾಗಿ ಸಂಬಂಧಪಟ್ಟಿದೆ ಎಂಬುದನ್ನು ಗಮನಿಸಬೇಕು ಎಂದು ಬಿ.ಟಿ.ಆರ್. ಹೇಳಿದರು. ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ನಾವೀಗ ಅಣಿ ನೆರೆಸುತ್ತಿರುವ ಈ ಜನ ವಿಭಾಗಗಳೇ ನಮ್ಮ ಎಡ ಮತ್ತು ಪ್ರಜಾಪ್ರಭುತ್ವ ಕಾರ್ಯಕ್ರಮದಲ್ಲಿ ಜೀವಂತ ಆಸಕ್ತಿ ಹೊಂದಿರುವ ಜನಸಮೂಹಗಳು. ಜನತಾ ಪ್ರಜಾಪ್ರಭುತ್ವದ ಹೋರಾಟಕ್ಕೆ ರೈತ ಸಮೂಹಗಳ, ಕೃಷಿ ಕಾರ್ಮಿಕರ, ಎಲ್ಲ ದುಡಿಯುವ ಜನಗಳ ಮತ್ತು ಕಾರ್ಮಿಕರ ಮೈತ್ರಿ ಅಗತ್ಯ. ಈ ಹೊಸ ಅಸಂತೃಪ್ತಿಯಲ್ಲಿ ಜಾಗೃತರಾಗಿರುವ ಜನವಿಭಾಗಗಳು ಹಾಗೂ ನಮ್ಮ ಸಂಘಟನೆಗಳು ಕೂಡ ಅಣಿ ನೆರೆಸುತ್ತಿರುವುದು ಇದೇ ವರ್ಗಗಳನ್ನು.

ಈ ಸಂದರ್ಭದಲ್ಲಿ ಎಡ ಐಕ್ಯತೆ ಬಲಗೊಳ್ಳಬೇಕಾದುದರ ಅಗತ್ಯವನ್ನು ವಿವರಿಸುತ್ತಾ ಕೆಲವು ಎಡಪಕ್ಷಗಳು ಮುಂದೆಯೂ ಉದ್ರೇಕಕಾರಿ ತಂತ್ರ ಹೂಡುವ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ಒಂದೆಡೆ ಎಲ್ಲಾ ಛಿದ್ರಕಾರಿ ಚಟುವಟಿಕೆಗಳ ವಿರುದ್ಧ ಹೋರಾಡುತ್ತಾ ಎಡ ಐಕ್ಯತೆಯ ರಕ್ಷಣೆಗೆ ನೀತಿಬದ್ಧ ನಿಲುವನ್ನು ಸಿ.ಪಿ.ಐ.(ಎಂ.) ತಳೆಯಬೇಕೆಂದು ಅವರು ನುಡಿದರು.

ಮುಂಬರುವ ಚುನಾವಣೆಗಳ ಬಗ್ಗೆ ಮಾತನಾಡುತ್ತ ಕಾಂಗ್ರೆಸ್(ಐ) ಈಗಾಗಲೇ ಚುನಾವಣಾ ಕಣಕ್ಕೆ ಧುಮುಕಿದೆ. ಎಲ್ಲಾ ಜನ ವಿಭಾಗಗಳನ್ನು ತೃಪ್ತಿಗೊಳಿಸುವ ಪ್ರಯತ್ನಗಳನ್ನು ಆರಂಭಿಸಿಯೇ ಬಿಟ್ಟಿದೆ ಎಂದು. ಆದರೆ ಅತ್ತ ಜನತೆಯ ಅಸಂತೃಪ್ತಿ ಬೆಳೆಯುತ್ತಿದ್ದರೂ ಕಾಂಗ್ರೆಸ್(ಐ)ಗೆ ಸವಾಲೆಸೆಯಲು ಸಾಧ್ಯವಿರುವ ಶಕ್ತಿಗಳು ಇನ್ನೂ ರಂಗಕ್ಕೆ ಬಂದಿಲ್ಲ ಎಂದು ಖೇದ ವ್ಯಕ್ತಪಡಿಸಿದರು. ವಿ.ಪಿ.ಸಿಂಗ್‌ರ ಚುನಾವಣಾ ವಿಜಯದ ಆಧಾರದ ಮೇಲೆ ಜನತೆಯ ಅಸಂತೃಪ್ತಿಯನ್ನು ಸಂಘಟಿಸಲು ಆರಂಭಿಸುವ ಬದಲು ಅವರೆಲ್ಲಾ ಮುಖಂಡತ್ವದ ಬಗ್ಗೆ ಜಗ್ಗಾಟದಲ್ಲಿ ಮುಳುಗಿದ್ದಾರೆ. ಅಲ್ಲದೆ ಕೇವಲ ಭ್ರಷ್ಟಾಚಾರದ ಪ್ರಶ್ನೆಯ ಮೇಲಷ್ಟೇ ಜನರ ಭರವಸೆ ಗೆಲ್ಲುವುದು ಸಾಧ್ಯ ಎಂಬ ಭ್ರಮೆ ಅವರಿಗಿದ್ದಂತಿದೆ. ಇದು ಜನತೆಯ ಬೇಡಿಕೆಗಳನ್ನು ಕುರಿತಂತೆ ಅದರ ಕುರುಡುತನವಲ್ಲದೆ ಬೇರೇನಲ್ಲ. ಅವರು ತಮ್ಮ ಆಂತರಿಕ ಕಿತ್ತಾಟಗಳನ್ನು ಮೀರಿ ಮುಂದಿನ ಚುನಾವಣೆಗಳಿಗೆ ಜನಾಭಿಪ್ರಾಯ ಸಂಘಟನೆಗೆ ತಕ್ಷಣ ಧುಮುಕುವಂತೆ ಮಾಡಲು ನಮ್ಮ ಪಕ್ಷ ಪ್ರಯತ್ನಿಸುತ್ತದೆ ಎಂದು ಬಿ.ಟಿ.ಆರ್. ಹೇಳಿದರು. ಈ ಪಕ್ಷಗಳು ಅಲಿಪ್ತ ನೀತಿ, ಸಾರ್ವಜನಿಕ ವಲಯ ಮುಂತಾದ ವಿಷಯಗಳಲ್ಲಿ ಎಡಬಿಡಂಗಿ ನೀತಿಯನ್ನು ಅನುಸರಿಸುತ್ತಿವೆ. ಕೋಮುವಾದಿ ಪಕ್ಷಗಳು, ಸಂಘಟನೆಗಳು ದೇಶವನ್ನು ಶಾಶ್ವತವಾಗಿ ವಿಭಜಿಸುವ ಸಂಘಟನೆಗಳು ಎಂಬ ಅರಿವು ಅವರಿಗಿಲ್ಲ. ಆದರೆ ಕೇಂದ್ರ-ರಾಜ್ಯ ಸಂಬಂಧಗಳು, ನಾಗರೀಕ ಹಕ್ಕುಗಳು ಮುಂತಾದ ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ಅವು ಪ್ರಜಾಪ್ರಭುತ್ವ ಶಕ್ತಿಗಳ ಜೊತೆಗೆ ನಿಲ್ಲುತ್ತವೆ. ಈ ಕ್ಲಿಷ್ಟ ಸನ್ನಿವೇಶದಲ್ಲಿ ನಾವು ಚುನಾವಣಾ ಹೋರಾಟ ನಡೆಸಬೇಕಾಗಿದೆ. ಎಡಪಕ್ಷಗಳು ಈ ಪಕ್ಷಗಳನ್ನು ಬೆಂಬಲಿಸಬೇಕಾಗಿದೆ. ಆಗ ಎಡ ಮತ್ತು ಜಾತ್ಯಾತೀತ ಶಕ್ತಿಗಳಿಂದ ಕಾಂಗ್ರೆಸ್(ಐ)ನ ಸೋಲು ಸಾಧ್ಯವಾಗುತ್ತದೆ. ಆದರೆ ಇದರಲ್ಲಿ ಚಂಚಲತೆ ತೋರಿದರೆ ಈ ಪಕ್ಷಗಳು ಮತ್ತು ಕೋಮು ಪಕ್ಷಗಳ ಕೂಟ ಉಂಟಾಗಿ ಹೋರಾಟದ ಸೂತ್ರ ಜನತೆಯ ಕೈಯಿಂದ, ಎಡ ಶಕ್ತಿಗಳ ಕೈಯಿಂದ ತಪ್ಪಿ ಹೋದಂತಾಗುತ್ತದೆ ಎಂದು ಬಿ.ಟಿ.ಆರ್. ಎಚ್ಚರಿಸಿದರು.

ಎಡ ಪ್ರಜಾಪ್ರಭುತ್ವ ರಂಗದತ್ತ

(ಪುಟ 6 ರಿಂದ)

ಪಶ್ಚಿಮಬಂಗಾಳ ಮತ್ತು ಕೇರಳ ವಿಧಾನ ಸಭಾ ಚುನಾವಣೆಗಳಲ್ಲಿ ನಮ್ಮ ಪಕ್ಷ ಮತ್ತು ನಮ್ಮ ಎಡಮಿತ್ರರ ಗೆಲುವುಗಳು ಮತ್ತು ರಾಷ್ಟ್ರೀಯ ಐಕ್ಯತೆಗಾಗಿ ನಮ್ಮ ಅವಿರತ ಹೋರಾಟಗಳಿಂದಾಗಿ ನಮ್ಮ ಪಕ್ಷದ ಹಾಗೂ ಅದರ ಎಡಮಿತ್ರರ ಶಕ್ತಿ ಇನ್ನಷ್ಟು ಹೆಚ್ಚಿದೆ. ದೇಶದ ರಾಜಕೀಯ ಬೆಳವಣಿಗೆಗಳ ಮೇಲೆ ಪ್ರಭಾವ ಬೀರಲು ಸಾಧ್ಯವಾಗಿದೆ.

ಇನ್ನೊಂದು ವರ್ಷದೊಳಗೆ ನಮ್ಮ ದೇಶ ಒಂದು ನಿರ್ಣಾಯಕ ರಾಜಕೀಯ ಸಮರವನ್ನು ಕಾಣಲಿದೆ. ಅದೆಂದರೆ ಒಂಭತ್ತನೇ ಲೋಕಸಭೆಯ ಚುನಾವಣೆ. ಈ ಸಮರದಲ್ಲಿ ಮುಖಾಮುಖಿಯಾಗಿ ನಿಲ್ಲುವ ಶಕ್ತಿಗಳೆಂದರೆ ಒಂದೆಡೆ ಮತ್ತೆ ಅಧಿಕಾರಕ್ಕೆ ಆರಿಸಿ ಬರಬೇಕೆಂದು ಪ್ರಯತ್ನಿಸುವ ಕಾಂಗ್ರೆಸ್(ಐ). ಇನ್ನೊಂದೆಡೆ ಎಡ ಮತ್ತು ಜಾತ್ಯತೀತ ಪಕ್ಷಗಳ ಮಿತ್ರಕೂಟ. ಈ ಮಿತ್ರಕೂಟದಲ್ಲಿ ನಮ್ಮ ಪಕ್ಷ ಮತ್ತು ನಮ್ಮ ಎಡ ಮಿತ್ರರು ಮಹತ್ವದ ಪಾತ್ರ ವಹಿಸುವರು. ಬಿ.ಜೆ.ಪಿ. ಮತ್ತಿತರ ಕೋಮುಶಕ್ತಿಗಳು ಕೂಡಾ ಚುನಾವಣೆಗಳಲ್ಲಿ ಮಧ್ಯ ಪ್ರವೇಶಿಸಲು ಪ್ರಯತ್ನಿಸುತ್ತವೆ. ಎಡ ಮತ್ತು ಜಾತ್ಯಾತೀತ ಶಕ್ತಿಗಳ ಮಿತ್ರಕೂಟ ಕಾಂಗ್ರೆಸ್(ಐ)ನ್ನು ಅಧಿಕಾರದಿಂದ ಓಡಿಸಲು ಮತ್ತು ಕೋಮುವಾದಿ ಹಾಗೂ ವಿಚ್ಛಿದ್ರಕಾರೀ ಶಕ್ತಿಗಳನ್ನು ದೂರ ತಳ್ಳಲು ಗಂಭೀರ ಪ್ರಯತ್ನ ನಡೆಸುತ್ತವೆ. ಈ ಮಹಾಧಿವೇಶನ ಸ್ವಾಭಾವಿಕವಾಗಿಯೇ ರಾಷ್ಟ್ರೀಯ ರಾಜಕೀಯದ ಈ ಮಹತ್ವಪೂರ್ಣ ಅಂಶಕ್ಕೆ ಸಂಬಂಧಪಟ್ಟ ರಾಜಕೀಯ ಮತ್ತು ಸಂಘಟನಾತ್ಮಕ ಸಮಸ್ಯೆಗಳನ್ನು ಪರಿಶೀಲಿಸುತ್ತದೆ.

ಸಾಮೂಹಿಕ ಕ್ರಾಂತಿಕಾರಿ ಪಕ್ಷದ ಬೆಳವಣಿಗೆಯಲ್ಲಿ

ನಮ್ಮ ಪಕ್ಷ ತನ್ನ ಹತ್ತನೇ ಮಹಾಧಿವೇಶನದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯನ್ನು ಬೆಳೆಯುವ ಜತೆಗೇ ಪ್ರಜಾಪ್ರಭುತ್ವದ ರಕ್ಷಣೆಗಾಗಿ ಸರ್ವಾಧಿಕಾರದ ವಿರುದ್ಧ ಹೋರಾಟಗಳ ಒಂದು ವಿಶಾಲರಂಗ ಬೆಳೆಸುವ ರಾಜಕೀಯ ಮಾರ್ಗ ರೂಪಿಸಿ ಈಗ ಒಂದು ದಶಕ ದಾಟಿದೆ. ಈ ರಾಜಕೀಯ ಮಾರ್ಗವನ್ನು ಅನುಷ್ಠಾನಕ್ಕೆ ತರಲು ನಮ್ಮ ಪಕ್ಷ ಕಾರ್ಮಿಕ ವರ್ಗದ ಒಂದು ಸಾಮೂಹಿಕ ಕಾಂತಿಕಾರೀ ಪಕ್ಷವಾಗಿ ಬೆಳೆಯಬೇಕೆಂಬ ಅರಿವಿನಿಂದ 1978ರ ಅಂತ್ಯದಲ್ಲಿ ಜರುಗಿದ ಒಂದು ವಿಶೇಷ ಪ್ಲೀನಂ ಇಂತಹದೊಂದು ಕ್ರಾಂತಿಕಾರೀ ಪಕ್ಷ ಬೆಳೆಸುವಲ್ಲಿ ನಿರ್ವಹಿಸಬೇಕಾದ ಸೈದ್ಧಾಂತಿಕ ಹಾಗೂ ಸಂಘಟನಾತ್ಮಕ ಕರ್ತವ್ಯಗಳ ರೂಪ-ರೇಷೆಗಳನ್ನು ನಿರ್ಧರಿಸಿತು. ಒಂದು ದಶಕದ ಹಿಂದೆ ಹಾಕಿಕೊಟ್ಟ ಈ ರಾಜಕೀಯ ಮತ್ತು ಸೈದ್ಧಾಂತಿಕ ಕರ್ತವ್ಯಗಳನ್ನು ಎಷ್ಟರ ಮಟ್ಟಿಗೆ ಪೂರೈಸಲಾಗಿದೆ ಎಂದು ಈ ಮಹಾಧಿವೇಶನ ಪರೀಕ್ಷಿಸಲಿದೆ.

ಈ ನಡುವೆ, 10ನೇ ಮಹಾಧಿವೇಶನದ ನಂತರದ ರಾಜಕೀಯ ಹೋರಾಟಗಳು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಜನರೆದುರಿಗೆ ತರುವಲ್ಲಿ, ಜಾತ್ಯತೀತ ವಿರೋಧ ಪಕ್ಷಗಳೊಂದಿಗೆ ಸಹಕಾರದ ಸಂಬಂಧಗಳನ್ನು ಬೆಳೆಸುವಲ್ಲಿ ನೆರವಾಗಿದೆ; ಹೊಸ ಕ್ಷೇತ್ರಗಳಿಗೆ ನಮ್ಮ ಸಂಘಟನೆಯನ್ನು ವಿಸ್ತರಿಸುವ ಮತ್ತು ನಮ್ಮ ಹಳೆಯ ನೆಲೆಗಳನ್ನು ಕ್ರೋಢೀಕರಿಸುವ ನಮ್ಮ ಕೆಲಸ ಒಂದು ದಶಕದ ಹಿಂದೆ ರೂಪಿಸಿಕೊಂಡ ಈ ಪ್ರತಿಕ್ರಿಯೆಗೆ ನೆರವಾಗಿದೆ ಎಂದು ಹೇಳಲಂತೂ ಅಡ್ಡಿಯಿಲ್ಲ. ಈ ಕೆಲಸ ನಿರ್ವಹಿಸುವಾಗ ಎದ್ದ ಸಮಸ್ಯೆಗಳನ್ನು ಪರಿಹರಿಸಲು ಈ ಮಹಾಧಿವೇಶನದ ಚರ್ಚೆಗಳು ನೆರವಾಗುತ್ತವೆ ಎಂಬ ಭರವಸೆ ನನಗಿದೆ.

ಈ ಮಹಾಧಿವೇಶನದ ಕಲಾಪಗಳು ನಮ್ಮ ತಿಳುವಳಿಕೆಯನ್ನು ಮತ್ತಷ್ಟು ಶ್ರೀಮಂತಗೊಳಿಸುತ್ತವೆ. ಭಾರತದಲ್ಲಿ ನಮ್ಮ ಆಂದೋಲನವನ್ನು ಗಟ್ಟಿಗೊಳಿಸುತ್ತದೆ ಹಾಗೂ ಸೋದರ ಪಕ್ಷಗಳ ಜತೆಗಿನ ನಮ್ಮ ಸಂಬಂಧಗಳನ್ನು ಇನ್ನಷ್ಟು ನಿಕಟಗೊಳಿಸುತ್ತವೆ ಎಂದು ಇನ್ನೊಮ್ಮೆ ಆಶಿಸುತ್ತೇನೆ.



ರ್‍ಯಾಲಿಯಲ್ಲಿ ಮಹಾಧಿವೇಶನದ ಪ್ರತಿನಿಧಿಗಳು

ನೇಪಾಳಿ ಭಾಷೇ ಆನೇ ಶೆಡ್ಯೂಲ್ಡಿನಲ್ಲಿ ಸೇರಿಸಬೇಕು

ಭಾರತದ ಎಲ್ಲಾ ಭಾಷೆಗಳಿಗೂ ಸಮಾನತೆ ಹಾಗೂ ಈ ಎಲ್ಲಾ ರಾಷ್ಟ್ರ ಭಾಷೆಗಳ ಬೆಳವಣಿಗೆಗೆ ಸೂಕ್ತ ಕ್ರಮ್ಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತ ಬಂದಿರುವ ಸಿ.ಪಿ.ಐ.(ಎಂ.) ತನ್ನ ೧೩ನೇ ಮಹಾಧಿವೇಶನದಲ್ಲಿ ಇನ್ನೊಂದು ಠರಾವು ಅಂಗೀಕರಿಸಿ ನೇಪಾಳಿ ಭಾಷೆಯನ್ನು ಸಂವಿಧಾನದ ಆನೇ ಶೆಡ್ಯೂಲಿನಲ್ಲಿ ಸೇರಿಸಿ ಲಕ್ಷಗಟ್ಟಲೆ ನೇಪಾಳಿ ಭಾಷಿಕರ ಆಶೋತ್ತರಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿದೆ. ಇನ್ನೂ ಈ ಬೇಡಿಕೆಯನ್ನು ನಿರಾಕರಿಸುತ್ತಿರುವ ಕೇಂದ್ರ ಸರ್ಕಾರದ ನಿಲುವನ್ನು ಖಂಡಿಸಿದೆ.

ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ರಾಜ್ಯದಲ್ಲಿ ನೇಪಾಳಿ ಭಾಷೆಗೆ ಅಧಿಕೃತ ಭಾಷೆ ಎಂಬ ಸ್ಥಾನ ನೀಡಿ ಅದರ ಬೆಳವಣಿಗೆಗೆ ಸಕಲ ಸೌಲಭ್ಯ ಒದಗಿಸಿರುವ ಬಗ್ಗ ತನ್ನ ಮೆಚ್ಚಿಗೆ ವ್ಯಕ್ತಪಡಿಸಿರುವ ಮಹಾಧಿವೇಶನ ನೇಪಾಳಿ ಭಾಷೆಯನ್ನು ಆನೇ ಶೆಡ್ಯೂಲಿಗೆ ಸೇರಿಸಿ ಅದು ಭಾರತದ ಒಂದು ರಾಷ್ಟ್ರ ಬಾಷೆ ಎಂದು ಮಾನ್ಯ ಮಾಡಬೇಕೆಂಬ ನ್ಯಾಯಬದ್ಧ ಬೇಡಿಕೆಯನ್ನು ಬೆಂಬಲಿಸಬೇಕೆಂದು ದೇಶದ ಪ್ರಜಾಪ್ರಭುತ್ವ ಶಕ್ತಿಗಳಿಗೆ ಕರೆ ನೀಡಿದೆ.

ಮುಸ್ಲಿಂ ಅಲ್ಪಸಂಖ್ಯಾತರ ಹಿತಾಸಕ್ತಿಗಳ ರಕ್ಷಣೆಯ ಆಶ್ವಾಸನೆ ನೀಡಿದ, ಅವರ ಹಕ್ಕುಗಳ ರಕ್ಷಣೆಗೆ, ಕೋಮು ಶಕ್ತಿಗಳ ದುಷ್ಟ ಆಕ್ರಮಣದಿಂದ ಕಾಪಾಡಲು ಮುಂದೆ ಬರಬೇಕೆಂದು ದೇಶದ ಜಾತ್ಯತೀತ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳಿಗೆ ಮನವಿ ಮಾಡಿಕೊಂಡಿರುವ ತಿರುವನಂತಪುರ ಮಹಾಧಿವೇಶನದ ನಿರ್ಣಯ.

ಮುಸ್ಲಿಂ ಅಲ್ಪಸಂಖ್ಯಾತರ ರಕ್ಷಣೆಗೆ ನಿಲ್ಲಬೇಕು

ಇತ್ತೀಚೆಗೆ ಪಶ್ಚಿಮ ಯು.ಪಿ., ಗುಜರಾತ, ಮಹಾರಾಷ್ಟ್ರ ಕರ್ನಾಟಕ, ಮಧ್ಯಪ್ರದೇಶ, ಬಿಹಾರ ಮತ್ತು ಇತರ ರಾಜ್ಯಗಳಲ್ಲಿ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ಹಿಂದೂ ಕೋಮುವಾದಿಗಳು ಹಲ್ಲೆ ನಡೆಸಿರುವುದನ್ನು ಸಿ.ಪಿ.ಐ(ಎಂ)ನ ಹದಿಮೂರನೇ ಮಹಾಧಿವೇಶನ ಬಲವಾಗಿ ಖಂಡಿಸಿದೆ. ಬಹಳಷ್ಟು ಮುಸ್ಲಿಮರ ಹತ್ಯೆ ನಡೆಸಲಾಗಿದೆ. ಅವರು ಕೇರಿ ಬಿಟ್ಟು ಹೋಗುವಂತೆ ಮಾಡಲಾಗಿದೆ. ಪೋಲೀಸರು ಸಾಮಾನ್ಯವಾಗಿ ಮೂಕ- ಪ್ರೇಕ್ಷಕರಾಗಿರುತ್ತಾರೆ. ಪೋಲೀಸರು ಕೂಡಾ ಕೋಮು ವಿಷಜಂತುವಿನ ಪ್ರಭಾವಕ್ಕೊಳಗಾಗಿ ಮುಸ್ಲಿಮರ ವಿರುದ್ಧ ಪಕ್ಷಪಾತದಿಂದ ನಡೆದುಕೊಳ್ಳುತ್ತಿರುವದೂ ಸರ್ವವಿದಿತ.

ಮುಸ್ಲಿಮರಿಗೆ ಕಾನೂನಿನ ರಕ್ಷಣೆ ಕೊಡುವಲ್ಲಿ ಕಾಂಗ್ರೆಸ್(ಐ) ಆಳ್ವಿಕೆಯ ರಾಜ್ಯ ಸರಕಾರಗಳ ವಿಫಲತೆ ಕೂಡಾ ಮತ್ತೆ ಮತ್ತೆ ಕಂಡು ಬಂದಿದೆ. ಹಾಡುಹಗಲೇ ಕೋಮು ಹಲ್ಲೆ ನಡೆಸುವ ಸಮಾಜ-ವಿರೋಧಿ ಶಕ್ತಿಗಳಿಗೆ ಎಂದೂ ಶಿಕ್ಷೆಯಾಗಿಲ್ಲ. ಇದರಿಂದ ಭಾರತದ ಮುಸ್ಲಿಂ ಅಲ್ಪಸಂಖ್ಯಾತರಲ್ಲಿ ತಮ್ಮ ಭವಿಷ್ಯದ ಬಗ್ಗೆ ಭಯ ಉಂಟಾಗಿದ. ಉದ್ಯೋಗ ನೀಡುವಲ್ಲಿ ವ್ಯಾಪಕವಾಗಿರುವ ಪಕ್ಷಪಾತ ಇದನ್ನು ಇನ್ನಷ್ಟು ಉಲ್ಬಣಗೊಳಿಸಿದೆ ಎಂದು ಹೇಳಿರುವ 13ನೇ ಮಹಾಧಿವೇಶನ ಪಶ್ಚಿಮಬಂಗಾಳ ಮತ್ತು ಕೇರಳದಲ್ಲಿ ಕೋಮು ಸೌಹಾರ್ದ ಕಾಪಾಡಲು ಸಾಧ್ಯವಾಗಿರುವ ಬಗ್ಗೆ ಅಲ್ಲಿನ ಸರಕಾರಗಳನ್ನು ಅಭಿನಂದಿಸುತ್ತಾ ರಾಜ್ಯಸರಕಾರಗಳು ಕೋಮು ಶಕ್ತಿಗಳ ವಿರುದ್ಧ ದೃಢ ಹೋರಾಟ ನಡೆಸಲು ಸಿದ್ಧವಿದ್ದರೆ ಕೋಮು ಸೌಹಾರ್ದ ಕಾಪಾಡಲು ಸಾಧ್ಯ ಎಂಬುದನ್ನು ಇದು ತೋರಿಸಿಕೊಡುತ್ತದೆ ಎಂದು ಅಭಿಪ್ರಾಯಪಟ್ಟಿದೆ.

ಆರ್. ಎಸ್.ಎಸ್. ಬಿ.ಜೆ.ಪಿ. ವಿಶ್ವ ಹಿಂದೂ ಪರಿಷತ್ತು, ಶಿವಸೇನೆ ಮುಂತಾದ ಹಿಂದ್ಯ ಮೂಲಭೂತವಾದಿಗಳು ಭಾರತ ಒಂದು ಹಿಂದೂ ಪ್ರಭುತ್ವ ಎಂದು ನಿರಂತರವಾಗಿ ಪ್ರಚಾರಮಾಡುತ್ತಾ ಮುಸ್ಲಿಂ ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಹರಡಿಸುತ್ತಿದ್ದಾರೆ. ಕಾಂಗ್ರೆಸ್(ಐ) ಜಾತ್ಯತೀತ ಮೌಲ್ಯಗಳಿಗೆ ವಂಚನೆ ಬಗೆದು ಹಲವಾರು ಸಂದರ್ಭಗಳಲ್ಲಿ ಹಿಂದೂ ಮೂಲಭೂತವಾದಿ ಶಕ್ತಿಗಳೊಂದಿಗೆ ಸೇರಿಕೊಂಡಿದೆ ಎಂದು ಖಂಡಿಸಲಾಗಿದೆ.

ಉರ್ದು ಬಗ್ಗೆ ಕಾಂಗ್ರೆಸ್(ಐ) ನ ನಿರ್ಲಕ್ಷ್ಯ ಹಾಗೂ ಅದು ಮುಸ್ಲಿಮರ ಭಾಷೆಯೆಂಬ ಹಿಂದೂ ಸಂಕುಚಿತವಾದಿಗಳ ವಾದದಿಂದಾಗಿ ಈ ಭಾಷೆ ತೀವ್ರ ಪಕ್ಷಪಾತ ಎದುರಿಸಬೇಕಾಗಿ ಬಂದಿದೆ.

ಹಿಂದೂ ಕೋಮುವಾದಿಗಳ ಈ ಎಲ್ಲಾ ಅಪಪ್ರಚಾರಗಳ ದುರ್ಲಾಭ ಪಡೆಯುವ ಮುಸ್ಲಿಂ ಮೂಲಭೂತವಾದೀ ಘೋಷಣೆಗಳನ್ನೆತ್ತಿ ಅವರನ್ನು ದೇಶದ ಎಡ ಮತ್ತು ಪ್ರಜಾಪ್ರಭುತ್ವ ಆಂದೋಲನದಿಂದ ದೂರವಿಡಲು ಪ್ರಯತ್ನಿಸುತ್ತಿದಾರೆ. ಕಾಂಗ್ರೆಸ್(ಐ) ಚುನಾವಣೆ ಲಾಭ ಪಡೆಯಲು ಈ ಶಕ್ತಿಗಳೊಂಧಿಗೂ ಸಮಯಸಾಧಕ ರಾಜಿ ಮಾಡಿಕೊಳ್ಳುತ್ತಿದೆ ಎಂದು ಆಪಾದಿಸಿರುವ ಮಹಾಧಿವೇಶನ ಮುಸ್ಲಿಂ ಅಲ್ಪಸಂಖ್ಯಾತರಗೆ ನಿಜವಾದ ಹಿತಾಸಕ್ತಿಗಳ ರಕ್ಷಣೆಗೆ ಸಿ.ಪಿ.ಐ.(ಎಂ) ಸರ್ವಪ್ರಯತ್ನ ನಡೆಸುವುದಾಗಿ ಆಶ್ವಾಸನೆ ನೀಡಿದೆ.

ಕೋಮು ದಂಗೆ ನಡೆಯದಂತೆ ನೋಡಿಕೊಳ್ಳಲು ಜನತೆ ನೇರವಾಗಿ ಮಧ್ಯ ಪ್ರವೇಶಿಸುವಂತೆ, ಮುಸ್ಲಿಂ ಸಮುದಾಯವನ್ನು ಹಲ್ಲೆಗಳಿಂದ ರಕ್ಷಿಸುವಂತೆ ಮಾಡಲು ಜನತೆಯನ್ನು ಸಕ್ರಿಯವಾಗಿ ಅಣಿನೆರೆಸಬೇಕೆಂದು ಸಮಸ್ತ ಪಕ್ಷಕ್ಕೆ 13ನೇ ಮಹಾಧಿವೇಶನದ ಈ ಠರಾವು ಕರೆ ನೀಡಿದೆ.

ಮುಸ್ಲಿಂ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗೆ, ಕೋಮುಶಕ್ತಿಗಳ ದುಷ್ಟ ಆಕ್ರಮಣಗಳಿಂದ ಅವರನ್ನು ಕಾಪಾಡಲು ಮುಂದೆ ಬರಬೇಕೆಂದು ಹದಿಮೂರನೇ ಮಹಾಧಿವೇಶನ ದೇಶದ ಎಲ್ಲಾ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಮನವಿ ಮಾಡಿಕೊಂಡಿದೆ. ಪ್ರಜಾಪ್ರಭುತ್ವ ಬೇಡಿಕೆಗಳಿಗಾಗಿ ಅವರನ್ನು ಎಲ್ಲ ಜನಗಳ ಆಂದೋಲನದತ್ತ ಸೆಳೆದು ದೇಶದ ಐಕ್ಯತೆ ಮತ್ತು ಸಮಗ್ರತೆ ರಕ್ಷಿಸಬೇಕೆಂದು ಅದು ಕೇಳಿಕೊಂಡಿದೆ.

ತ್ರಿಪುರಾದ ಹೋರಾಟ ನಿರತ ಜನತೆಗೆ ಬೆಂಬಲ

ತ್ರಿಪುರಾದಲ್ಲಿನ ಪರಿಸ್ಥಿತಿಯ ಬಗ್ಗೆ ೧೩ನೇ ಮಹಾಧಿವೇಶನ ಒಂದು ನಿರ್ಣಯವನ್ನು ಅಂಗೀಕರಿಸಿ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆಯ ವಿರುದ್ಧ ಹೋರಾಡುತ್ತಿರುವ ತ್ರಿಪುರಾದ ಜನತೆಯನ್ನು ಅಭಿನಂದಿಸಿದೆ. ದೇಶದ ಪ್ರತಿ ಮೂಲೆಯಿಂದಲೂ ಅವರ ಹೋರಾಟಗಳಿಗೆ ಬೆಂಬಲ ನೀಡಬೇಕೆಂದು ಕರೆ ನೀಡಿದೆ.

ಕಾಂಗ್ರೆಸ್(ಐ)- ಟಿ.ಯು.ಜೆ.ಎಸ್. ಸರಕಾರ ಹರಿಯಬಿಟ್ಟ ಅಮಾನುಷ ಭಯೋತ್ಪಾದನೆಯ ಸ್ಥೂಲ ಸ್ವರೂಪವನ್ನು ನೀಡಿರುವ ಈ ನಿರ್ಣಯ ಈ ಮಂತ್ರಿಮಂಡಲದ ಇತರ ಪ್ರಜಾಪ್ರಭುತ್ವ-ವಿರೋಧಿ ಕ್ರಮಗಳ ಒಂದು ಚಿತ್ರವನ್ನು ನೀಡಿದೆ.

೪೫ ಸಿ.ಪಿ.ಐ.(ಎಂ.) ಕಾರ್ಯಕರ್ತರನ್ನು ಕೊಲೆ ಮಾಡಲಾಗಿದೆ. ಇದರಲ್ಲಿ ಸ್ವಾಯತ್ತ ಜಿಲ್ಲಾ ಮಂಡಳಿಯ ಒಬ್ಬ ಸದಸ್ಯರು ಇದ್ದಾರೆ. ಪೋಲೀಸ್, ಅರೆ ಸೈನಿಕ ಪಡೆಗಳು ಮಾತ್ರವಲ್ಲ, ನ್ಯಾಯಾಂಗದ ಒಂದು ವಿಭಾಗವನ್ನು ತಮ್ಮ ಹೀನ ಕೃತ್ಯಗಳಿಗೆ ಆಳುವ ಪಕ್ಷಗಳು ಬಳಸಿಕೊಂಡಿವೆ. ಕಾಂ. ನೃಪೇನ್ ಚಕ್ರವರ್ತಿಯವರ ಮೇಲೆ ಹಲ್ಲೆ, ಕಾಂ. ದಶರಥ ದೇಬ್ ಕೊಲೆ ಪ್ರಯತ್ನ, ಹಲವಾರು ಬುಡಕಟ್ಟು ಮಹಿಳೆಯರ ಮೇಲೆ ಅತ್ಯಾಚಾರ, ಸಿ.ಪಿ.ಐ.(ಎಂ.)ನ ಕಾರ್ಯಕರ್ತರ ಹಾಗೂ ಬೆಂಬಲಿಗರ ಮನೆ ಲೂಟಿ, ನಾಶ ನಡೆಯುತ್ತಿದೆ.

ಕಮ್ಯೂನಿಸ್ಟ್ ವಿರೋಧದ ಹೆಸರಿನಲ್ಲಿ ಎಲ್ಲಾ ಚುನಾಯಿತ ಸಂಸ್ಥೆಗಳನ್ನು ಧ್ವಂಸ ಮಾಡುತ್ತಿದೆ. ಇದರಿಂದ ಲೇವಾದೇವಿಗಾರರು, ಅಪ್ರಾಮಾಣಿಕ ವರ್ತಕರು, ಗ್ರಾಮೀಣ ಪ್ರದೇಶದ ಮಧ್ಯವರ್ತಿಗಳು, ಏಜೆಂಟರ ಶೋಷಣೆಗೆ ಯಾವ ಲಂಗು-ಲಗಾಮೂ ಇಲ್ಲದಂತಾಗಿದೆ. ಸಂವಿಧಾನದ ೬ನೇ ಷೆಡ್ಯೂಲ್‌ನ ಪ್ರಕಾರ ರಚಿಸಿದ ಸ್ವಾಯತ್ತ ಜಿಲ್ಲಾ ಮಂಡಲಿಗಳನ್ನು ವಿಸರ್ಜಿಸುವ, ಆ ಮೂಲಕ ಹಿಂದುಳಿದ ಬುಡಕಟ್ಟು ಅಲ್ಪಸಂಖ್ಯಾತರ ಹಿತಾಸಕ್ತಿಗಳ ಮೇಲೆ ಕೊಡಲಿ ಏಟು ಹಾಕುವ ಪಿತೂರಿ ಸಾಗಿದೆ. ಇದರಿಂದ ರಾಜ್ಯದ ಎರಡು ಪ್ರಮುಖ ಜನ ವಿಭಾಗಗಳಾದ ಬುಡಕಟ್ಟು ಜನರು ಮತ್ತು ಬಂಗಾಳಿಗಳ ನಡುವೆ ಐಕ್ಯತೆಗೆ ಧಕ್ಕೆ ತರಲಾಗುತ್ತಿದೆ. ಬಂಗಾಳಿ ಸಂಕುಚಿತವಾದಿಗಳ ಪ್ರಭಾವದಿಂದ ಲಾಸ್ಕರ್ ಎಂಬ ಗಿರಿಜನರಲ್ಲದ ಒಂದು ಜನವಿಭಾಗಕ್ಕೆ ಗಿರಿಜನರೆಂಬ ಮಾನ್ಯತೆ ಕೊಡಲಾಗಿದೆ.

ಇದರಿಂದ ಆಡಳಿತ ರಂಗದಲ್ಲೂ ವ್ಯಾಪಕ ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಟ್ಟಂತಾಗಿದೆ. ಆದರೂ ಧೃತಿಗೆಡದೆ ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ, ರಾಜ್ಯದ ಎಲ್ಲಾ ಹಂತಗಳಲ್ಲಿ ಕಾರ್ಯಾಚರಣೆಗಳು ಆರಂಭವಾಗಿರುವ ಬಗ್ಗೆ ಮಹಾಧಿವೇಶನ ಸಂತಸ ವ್ಯಕ್ತಪಡಿಸಿ ತ್ರಿಪುರಾದ ಜನತೆಗೆ ಸೌಹಾರ್ದ ವ್ಯಕ್ತಪಡಿಸಿದೆ.





ಆರು ದಿನಗಳ ಕೆಂಪು ಹಬ್ಬ

ತ್ರಿವೇಂದ್ರಮ್‌ನಲ್ಲಿ ಡಿಸೆಂಬರ್ 27ರಿಂದ ಜನವರಿ 1ರವರೆಗೆ ನಡೆದ 13ನೇ ಮಹಾಧಿವೇಶನದ ಉತ್ಸಾಹಭರಿತ 6 ದಿನಗಳ ಉತ್ಸವವನ್ನು ಕಣ್ಣಾರೆ ನೋಡಿಯೇ ಅನುಭವಿಸಬೇಕು. ಕೆಲವು ಶಬ್ದಗಳಲ್ಲಿ, ಫೋಟೋಗಳಲ್ಲಿ ಹಿಡಿಯಲಾರದಷ್ಟು, ಈ ಉತ್ಸವಕ್ಕೆ ಮುಖಗಳಿದ್ದವು. . ಆಯಾಮಗಳಿದ್ದವು. ಈ ಉತ್ಸವವನ್ನು ಎಂದೂ ತ್ರಿವೇಂದ್ರಮ್ ಜನತೆ ಮರೆಯಲಾರರು. ಆ ದಿನಗಳಲ್ಲಿ ತ್ರಿವೇಂದ್ರಮ್‌ನಲ್ಲಿದ್ದ ಯಾರಿಗಾದರೂ ಅದು ಜೀವನವಿಡಿ ಮರೆಯಲಾಗದ ಅನುಭವ. ಸಿ.ಪಿ.ಐ (ಎಂ) ನ ಸದಸ್ಯರಿಗೆ, ಬೆಂಬಲಿಗರಿಗಂತೂ ಮತ್ತು ಬರಿಸುವ ಜೀವನವಿಡಿ ಪಕ್ಷಕ್ಕಾಗಿ ದುಡಿಯಲು ಬೇಕಾದಷ್ಟು ಉತ್ಸಾಹ ತುಂಬಿಸುವ ದಿನಗಳು.

ತ್ರಿವೇಂದ್ರಮ್‌ನ ಜನತೆ 13ನೇ ಮಹಾಧಿವೇಶನದಲ್ಲಿ ಪಾಲ್ಗೊಂಡ ರೀತಿ, ಪಕ್ಷ ಜನತೆಯನ್ನೊಳಗೊಂಡ ರೀತಿ -ಜನತೆ ಉತ್ಸಾಹದಿಂದ ಆಚರಿಸುವ ಸಾಮಾಜಿಕ-ಧಾರ್ಮಿಕ ಹಬ್ಬಗಳಂತೆ ಇತ್ತು. ಅದರಲ್ಲೂ ಜನತೆ ಸ್ವಯಂಸ್ಫೂರ್ತವಾಗಿ ನಗರವನ್ನು ಮಹಾಧಿವೇಶನದ ಸಲುವಾಗಿ ಅಲಂಕರಿಸಿದ್ದು ಗಮನ ಸೆಳೆಯುವಂತಹದಾಗಿತ್ತು.

ಸಾಂಪ್ರದಾಯಿಕವಾಗಿ ಎಡ ಸಾಮೂಹಿಕ ಸಂಘಟನೆಗಳು ಮತ್ತು ಪಕ್ಷಗಳ ಸಮ್ಮೇಳನಗಳಿಗೆ, ಅಧಿವೇಶನಗಳಿಗೆ ಮಡುವ ಅಲಂಕಾರ ಕೆಂಪು ತೋರಣಗಳು, ಬ್ಯಾನರುಗಳು, ಗೋಡೆ ಬರಹಗಳು- ತ್ರಿವೇಂದ್ರಮ್‌ನ ನಗರಾಲಂಕಾರದ ಸಾಮಾನ್ಯ ಭಾಗವಾಗಿತ್ತಷ್ಟೇ. ಆದರೆ ಅದರಲ್ಲೂ ಸಾಧಿಸಿದ ವ್ಯಾಪಕತೆ ದಂಗು ಬಡಿಸುವಂತಹದು. ಮೂರುದಿನ ನಗರದ ಮೂಲೆಮೂಲೆ ಸುತ್ತಾಡಿದರೂ, ಬ್ಯಾನರುಗಳಿಲ್ಲದ ಕೆಂಪು ತೋರಣಗಳಿಲ್ಲದ ಒಂದೇ ಒಂದು ಸಣ್ಣ ಬೀದಿ ಸಹ ಕಂಡು ಬರಲಿಲ್ಲ. ಹಾಗೇನೇ ಬಣ್ಣಬಣ್ಣದ ಸುಂದರ ಕಲಾತ್ಮಕ ಗೋಡೆಬರಹಗಳಿಲ್ಲದ ಗೋಡೆಯ ಒಂದು ಖಾಲಿ ತುಣುಕೂ ಸಹ ಸಿಗಲಿಲ್ಲ. ಇದಲ್ಲದೆ ಹಲವು ಕಡೆಗಳಲ್ಲಿ, ಮುಖ್ಯ ಹಬ್ಬಗಳಲ್ಲಿ ಮಾಡುವಂತೆ ತಮ್ಮ ಮನೆಗಳಲ್ಲಿ, ಅಂಗಡಿಗಳಲ್ಲಿ, ತಾವು ಕೆಲಸ ಮಾಡುವ ಕಡೆ ಅಲಂಕಾರಗಳನ್ನು ಮಾಡಿದ್ದರು. ಇದರಲ್ಲಿ ಪೈಪೋಟಿ ಕಾಣುತ್ತಿತ್ತು. ಅದೇ ರೀತಿ ಕಲಾತ್ಮಕ ವೈವಿಧ್ಯತೆ ಸಹ ಇಂತಹ ವ್ಯಾಪಕತೆ ಜನತೆಯ ಎಲ್ಲಾ ವಿಭಾಗಗಳು ಸ್ವಯಂಸ್ಫೂರ್ತವಾಗಿ ಇದರಲ್ಲಿ ತೊಡಗದ ಸಾಧ್ಯವಿರಲಿಲ್ಲ.

ಇಡೀ ನಗರವೇ ಕಲಾ ಪ್ರದರ್ಶನ

ಇಂತಹ ಸಾಂಪ್ರದಾಯಿಕ ಅಲಂಕಾರಗಳ ವ್ಯಾಪಕತೆ ಒಂದೆಡೆಯಾದರೆ, ಇಡೀ ನಗರವೇ ಒಂದು ದೊಡ್ಡ ಕಲಾ ಪ್ರದರ್ಶನವೇನೋ ಎನ್ನಿಸುವ ವಿವಿಧ ಕಲಾಪ್ರಕಾರಗಳ ವೈವಿಧ್ಯಮಯ ಆಕರ್ಷಣೆಗಳು ಇನ್ನೊಂದೆಡೆ ಇಂತಹ ವಿಶೇಷ ಆಕರ್ಷಣೆಗಳ ಭರಾಟೆ ಬಹುಶಃ ಈ ಮಹಾಧಿವೇಶನದಲ್ಲಿ, ಮೊದಲ ಬಾರಿಗೆ ಕಾಣಸಿಕ್ಕಿತು.

ಗೋಡೆ ಪೈಂಟಿಂಗ್‌ಗಳು ಇಂತಹ ಒಂದು ವಿಶೇಷ ಆಕರ್ಷಣೆ. ಸುಮಾರು 2-3 ಫರ್ಲಾಂಗುಗಳ ಉದ್ದದ ಗೋಡೆಯೊಂದರಲ್ಲಿ ಚೀನಿ ಊಳಿಗಮಾನ್ಯ ಪದ್ಧತಿಯ ವಿರುದ್ಧ ಹೋರಾಟದ ಪ್ರಖ್ಯಾತ ಚಿತ್ರಗಳ ಪ್ರತಿಕೃತಿಗಳನ್ನು ಬರೆಯಲಾಗಿತ್ತು. ಇದರ ಹಿನ್ನೆಲೆಯಲ್ಲಿ ಜಾನ್‌ರೀಡ್‌ರ "Ten days that Shook the World"ನ ಪುಸ್ತ... ಮುಖಪುಟದ ಚಿತ್ರ ಬರೆಯಲಾಗಿತ್ತು . ಇನ್ನೂ

ಪುಟ 10ಕ್ಕೆ

ಬೀದಿ ಬೀದಿಗಳಿಂದ ಮರೆಯಾದ ಸಫ್ದರ್

ಜನವರಿ 1

ತ್ರಿವೇಂದ್ರಮ್‌ನಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ 13ನೇ ರಾಷ್ಟ್ರ ಸಮ್ಮೇಳನ ಸರ್ವಾಧಿಕಾರಿ ಕಾಂಗ್ರೆ ಸರ್ಕಾರದ ವಿರುದ್ಧ ಹೋರಾಡಲು ಕರೆ ನೀಡಿ ಉತ್ಸಾಹವನ್ನು ಹುಟ್ಟು ಹಾಕುತ್ತಿದ್ದಂತೆಯೇ ಉತ್ತರ ಪ್ರದೇಶದ ಸಾಹಿಬಾಬಾದ್‌ನಲ್ಲಿ ಕಾಂಗ್ರೆ ಗೂಂಡಾಗಳು ಸಫ್ದರ್‌ಹಷ್ಮಿಯ ಮೇಲೆ ಮಿಂಚಿನಂತೆ ಎರಗಿದರು.

ಬೀದಿ ಬೀದಿಯಲ್ಲಿ ಹಾಡುಗಳನ್ನು, ಸಿಟ್ಟು ಸಿಡುವುಗಳನ್ನು ಹುಟ್ಟು ಹಾಕಿದ ಸಫ್ದರ್ ಹಷ್ಮಿಯವರನ್ನು ಕಾಂಗ್ರೆ ಗೂಂಡಾಗಳು ಲಾಠಿ, ದೊಣ್ಣೆ ಇತರ ಮಾರಕಾಸ್ತ್ರಗಳಿಂದ ಬಡಿದು ಕೊಂದು ಹಾಕಿದರು. ತ್ರಿವೇಂದ್ರಮ್‌ನಿಂದ ಹೊಸ ಉತ್ಸಾಹ ಹೊತ್ತು ದೆಹಲಿಗೆ ವಾಪಸ್ಸಾಗುವ ಪ್ರತಿನಿಧಿಗಳನ್ನು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಬೇಕಾಗಿದ್ದ ಹಷ್ಮಿ ಉಸಿರು ತೊರೆದು ಮಲಗಿದ್ದರು. ಸದಾ ಹೋರಾಟದ ಪ್ರತೀಕವಾದ ಕೆಂಬಾವುಟವನ್ನು ಅವರಿಗೆ ಹೊದಿಸಲಾಗಿತ್ತು.

ಸಫ್ದರ್ ಕೊನೆಯುಸಿರೆಳೆದ ಸುದ್ದಿ ಕೇಳುತ್ತಲೇ ನೆರೆದಿದ್ದ ಸಾವಿರಾರು ಕಾಮ್ರೇಡ್‌ಗಳ ಕಣ್ಣಲ್ಲಿ ನೀರಾಡಿತು. 'ಸಫ್ದರ್ ಹಷ್ಮಿ ಅಮರ್‌ರಹೆ, ಲಾಲ್ ಜಂಡ ಜಿಂದಾಬಾದ್, ಗೋಲಿ ಲಾಠಿ ಖಾಯೆಂಗ, ಮಿಟ್ಟಿಮೆ ಮಿಲ್‌ಜಾಯೆಂಗ್' ಘೋಷಣೆಗಳು ಎದ್ದವು.

ಸಫ್ದರ್‌ಹಷ್ಮಿ ಬೀದಿ ಬೀದಿಗಳ ಅಸಂಖ್ಯಾತ ಗೆಳೆಯರನ್ನು ಅಗಲಿದರು. ಹತ್ತು ಸಹಸ್ರಕ್ಕೂ ಮಿಕ್ಕ ಜನರು ಬೀದಿಯಲ್ಲಿ, ಗಲ್ಲಿಯಲ್ಲಿ, 'ಸಫ್ದರ್ ಅಮರ್‌ರಹೆ' ಘೋಷಣೆ ಕೂಗಿದರು.

ದೆಹಲಿಯ ಕನಾಟ್‌ಪ್ಲೇಸ್ ಸಫ್ದರ್ ಹಷ್ಮಿಯವರ ಹೃದಯಕೇಂದ್ರ ಪ್ರತಿ ಶನಿವಾರ ಹೊಸ ನಾಟಕಗಳನ್ನು ಪ್ರದರ್ಶಿಸುವುದರ ಮೂಲಕ ಹಷ್ಮಿ ಸುದ್ದಿ ಮಾಡಿದ್ದರು. ಕನಾಟ್‌ಪ್ಲೇಸ್ ಪ್ರತಿ ಶನಿವಾರ ಕಲಾವಿದರ, ಪತ್ರಕರ್ತರ, ಬುದ್ಧಿಜೀವಿಗಳ ಸಂತೆಯಾಗಿ ಮಾರ್ಪಡುತ್ತಿತ್ತು. ದೆಹಲಿಯಲ್ಲಿ ನಡೆಸುವ ಪ್ರತಿಭಟನಾ ಸಭೆಗಳಿಗೆ ರೂಪು ದೊರೆಯುತ್ತಿದ್ದುದು ಇಲ್ಲಿಂದಲೇ.

ಕಾಂಗ್ರೆ ಸರ್ಕಾರಕ್ಕೆ ಇದನ್ನು ಸಹಿಸಲಾಗಲಿಲ್ಲ. ತಕ್ಷಣವೇ ಆ ಸ್ಥಳದ ಮೇಲೆ 144ನೇ ಸೆಕ್ಷನ್ ಜಾರಿ ಮಾಡಿದರು. ಸಭೆ ನಡೆಸಲು ಅಸ್ಪದವಿರಲಿಲ್ಲ. ಸಫ್ದರ್ ಅಂತಿಮಯಾತ್ರೆ ಯಾವುದನ್ನೂ ಲೆಕ್ಕಿಸದೆ ಕನಾಟ್‌ಪ್ಲೇಸ್‌ಗೆ ಬಂದಿತು. ಕಾನೂನು ಮೌನವಾಯಿತು. ಸಫ್ದರ್ ಕನಾಟ್‌ಪ್ಲೇಸ್‌ನ ಅಗಲಲಾರದ ಗೆಳೆಯ.

ಮೆರವಣಿಗೆ ಮಂಡಿಹೌಸ್‌ನ ಮುಂಭಾಗಕ್ಕೆ ಬಂದಾಗ ಮಾಲಾ ಬಿಕ್ಕಿಬಿಕ್ಕಿ ಅಳಲಾರಂಭಿಸಿದರು, ಮಂಡಿಹೌಸ್ ಹಾಗೂ ಸಫ್ದರ್ ಒಂದೇ ನಾಣ್ಯದ ಎರಡು ಮುಖಗಳು. ಸಫ್ದರ್‌ರವರು ನಾಟಕದ ರಿಹರ್ಸಲ್ ನಡೆಸುತ್ತಿದ್ದ ಜಾಗ ಅದು. ನಾಟಕಗಳಿಗೆ ಪ್ರತಿಭಟನೆಯನ್ನು ಧಾರೆ ಎರೆಯುತ್ತಿದ್ದ ಜಾಗ. ಅದುವರೆಗೂ ಅದುಮಿಟ್ಟ ನೋವನ್ನು ಮಂಡಿಹೌಸ್ ತಡೆಯಲಿಲ್ಲ. ಮಾಲಾ ಬಿಕ್ಕಿಬಿಕ್ಕಿ ಅಳಲಾರಂಭಿಸಿದರು. ಅಂತೆಯೇ 'ಜನಂ'ನ ಹಲವಾರು ಜನ ಮೆರವಣಿಗೆಯ ಅಂತ್ಯದಲ್ಲಿ ಕಾಂ. ಬಿ.ಟಿ.ಆರ್. ಹಾಗೂ ಹರಿಕಿಶನ್‌ಸಿಂಗ್ ಸುರ್ಜಿತ್ ಸಭೆಯನ್ನು ಉದ್ದೇಶಿಸಿ ಮಾತನಾಡಿ ಹಷ್ಮಿಯವರ ಹತ್ಯೆಯನ್ನು ಖಂಡಿಸಿ ಪಾಲಿಟ್‌ಬ್ಯೂರೋ ಕೈಗೊಂಡ ನಿರ್ಣಯವನ್ನು ಓದಿ ಹೇಳಿದರು. ಹಷ್ಮಿಯವರ ದೇಹಕ್ಕೆ ಪಿ.ಎಲ್.ಓ., ಎ.ಎನ್.ಸಿ. ನಿಯೋಗಗಳು ಪುಷ್ಪಗುಚ್ಛ ಅರ್ಪಿಸಿದವು.

ಸಾಹಿಬಾಬಾದ್ ಉತ್ತರಪ್ರದೇಶ ಹಾಗೂ ದೆಹಲಿಯ ಗಡಿಯಲ್ಲಿರುವ ಪುಟ್ಟ ಊರು. ಸಾಹಿಬಾಬಾದ್‌ನಲ್ಲಿ ನಡೆಯುತ್ತಿದ್ದ ಮುನಿಸಿಪಲ್ ಚುನಾವಣೆಗೆ ಸ್ಪರ್ಧಿಸಿದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿಗಳ ಪರ 'ಜನನಾಟ್ಯಮಂಚ್' ನಾಟಕ, ಹಾಡುಗಳ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ನಾಟಕ ಪ್ರಾರಂಭವಾದ ಸ್ವಲ್ಪ ಹೊತ್ತಿಗೆ ಕೆಲವರು ಅದನ್ನು ತಡೆಯಲು ಪ್ರಯತ್ನಿಸಿದರು. 'ಜನನಾಟ್ಯಮಂಚ್' ಅದಕ್ಕೆ ಜಗ್ಗಲಿಲ್ಲ. ನಾಟಕ ಮುಂದುವರೆಯಿತು. ಇನ್ನೂ ಕೆಲ ನಿಮಿಷಗಳಲ್ಲಿಯೇ ಕಾಂಗ್ರೆಗೆ ಸೇರಿದ ಗಣಿಂಕ್ಕೂ ಹೆಚ್ಚು ಜನ ದೊಣ್ಣೆ, ಲಾಠಿ ಮಾರಕಾಸ್ತ್ರಗಳನ್ನು ಹೊತ್ತು ಬಂದರು. ನಾಟಕದ ಗುಂಪಿನ ಮೇಲೆ ಪ್ರಹಾರ ಪ್ರಾರಂಭವಾಯಿತು. ಸಫ್ದರ್ ಹಷ್ಮಿ ಎಲ್ಲರಿಗೂ ಸಿ.ಐ.ಟಿ.ಯು. ಕಛೇರಿಗೆ ಓಡಿ ಹೋಗಲು ಹೇಳಿದರು. ಸುಮಾರು ಐವರು ಮಹಿಳೆಯರು ಸೇರಿದ 'ಜನನಾಟ್ಯಮಂಚ್' ರಕ್ಷಣೆ ಪಡೆಯಲು ಸಿ.ಐ.ಟಿ.ಯು. ಕಛೇರಿಗೆ ಧಾವಿಸಿತು. ಗೂಂಡಾಗಳೂ ಅಲ್ಲಿಗೂ ಬಂದರು. ಸಫ್ದರ್ ಹಷ್ಮಿ ಬಾಗಿಲಿನಲ್ಲಿಯೇ ಅವರನ್ನು ತಡೆಯಲು ಪ್ರಯತ್ನಿಸಿದರು. ಒಳ ಸೇರಿದ ನಾಟಕದವರೆಲ್ಲರೂ ಹಿಂಬಾಗಿಲಿನಿಂದ ವಾಪಸ್ಸಾಗುವವರೆಗೂ ಸಫ್ದರ್ ನೂರೈವತ್ತು ಜನರ ಹೊಡೆತ ತಿನ್ನುತ್ತಾ ಬಾಗಿಲಲ್ಲಿ ನಿಂತಿದ್ದರು.

ತಕ್ಷಣವೇ ಸುದ್ದಿ ತಿಳಿದ ಅಸಂಖ್ಯಾತ ಪತ್ರಕರ್ತರು, ಕಲಾಕಾರರು, ಬುದ್ಧಿಜೀವಿಗಳು ಬೂಟಾಸಿಂಗ್‌ರವರ ಮನೆಯ ಮುಂದೆ ಪ್ರತಿಭಟನೆ ನಡೆಸಿದರು. ಬೂಟಾಸಿಂಗ್ ಆಸ್ಪತ್ರೆಗೆ ಧಾವಿಸಿದರು. ಅಲ್ಲಿಂದ 'ಜನನಾಟ್ಯಮಂಚ್'ದ ಕಲಾವಿದರು ಬೂಟಾಸಿಂಗ್‌ರಿಗೆ ಮರಳಿ ಹೋಗುವಂತೆ ಘೋಷಣೆ ಕೂಗಿದರು. ನಾಟಕೀಯ ಭೇಟಿಗಾಗಿ ಬಂದಿದ್ದ ಬೂಟಾ ವಾಪಸ್ಸಾಗಬೇಕಾಯಿತು.

ಸಫ್ದರ್ ಹಷ್ಮಿ 'ಜನನಾಟ್ಯಮಂಚ್'ದೊಂದಿಗೆ ಸೇರಿ ಹೋದ ಹೆಸರು. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಸಂಪೂರ್ಣ ಕಾಲ ಕಾರ್ಯಕರ್ತರಾಗಿದ್ದ ಹಷ್ಮಿ ಉತ್ತರ ಭಾರತದಲ್ಲಿ ಬೀದಿನಾಟಕ ಚಳುವಳಿ ಹುಟ್ಟು ಹಾಕಲು ಕಾರಣರಾದವರು. ಎಲ್ಲಿ ಯಾವುದೇ ಬಂದ್ ಇರಲಿ, ಮುಷ್ಕರವಿರಲಿ, ನೋವು ದುಗುಡ ದುಮ್ಮಾನಗಳಿರಲಿ ಅಲ್ಲಿ ಸಫ್ದರ್ ಇರುತ್ತಿದ್ದರು. ಇಲ್ಲವೇ ಅವರು ಬರೆದ ನಾಟಕವಿರುತ್ತಿತ್ತು.


'ಇಫ್ಟಾ' ನಾಟಕ ತಂಡದಿಂದ ಹೊರಬಂದು 1978ರಲ್ಲಿ 'ಜನನಾಟ್ಯಮಂಚ್' ಹುಟ್ಟು ಹಾಕಿದ ಸಫ್ದರ್ ಕವಿ, ನಾಟಕಕಾರ ಹಾಗೂ ಪತ್ರಕರ್ತ ಕೂಡ. ಕಾಶ್ಮೀರದಲ್ಲಿ ಪ್ರಾಧ್ಯಾಪಕರಾಗಿದ್ದ ನಂತರ ಪಶ್ಚಿಮ ಬಂಗಾಳ ಸರ್ಕಾರದ ದೆಹಲಿ ಕಛೇರಿಯಲ್ಲಿ ಸುದ್ದಿ ವಿಭಾಗ ಮುಖ್ಯಸ್ಥರಾಗಿದ್ದ ಹಷ್ಮಿ ಪಕ್ಷದ ಪೂರ್ಣ ಕಾಲ ಕಾರ್ಯಕರ್ತರಾದರು.

ಜನವರಿ 3, ದೆಹಲಿಯ ಬೀದಿಬೀದಿಗಳಲ್ಲಿ ಮೆರವಣಿಗೆ ಸಾಗತೊಡಗಿತು. ಹಷ್ಮಿಯನ್ನು ಕೊಂದ ಕಾಂಗ್ರೆ ವಿರುದ್ಧ ಪ್ರತಿಭಟನೆ. ಬೀದಿಬೀದಿಗಳಲ್ಲಿ ಸಾಗಿ ಕೊನೆಗೆ ಸಾಹಿಬಾಬಾದ್‌ನಲ್ಲಿ ಸಫ್ದರ್ ಹಷ್ಮಿಯನ್ನು ಕೊಂದ ಸಿ.ಐ.ಟಿ.ಯು. ಕಛೇರಿ ಬಳಿ ಮೆರವಣಿಗೆ ನಿಂತು ಮೌನ ಆಚರಿಸಿತು. ಪುನಃ 'ಜನನಾಟ್ಯಮಂಚ್' ನಾಟಕ ನಿಲ್ಲಿಸಿದೆಡೆಗೆ ಸಾಗಿದ ಮೆರವಣಿಗೆ ಅದೇ ಸ್ಥಳದಲ್ಲಿ ಅದೇ ಸರ್ವಾಧಿಕಾರಿ ಕಾಂಗ್ರೆ ವಿರುದ್ಧ ನಾಟಕ ಅಭಿನಯಿಸಿತು. ನೋಡುವವರ ಕಣ್ಣುಗಳು ಒದ್ದೆಯಾಗಿದ್ದವು. ಮೈನಲ್ಲಿ ಸಿಟ್ಟಿನ ಸಂಚಾರ ನಾಟಕದಲ್ಲಿ ಸಫ್ದರ್ ಹಷ್ಮಿಯ ಒಡನಾಡಿ ಮಾಲಾ ಸಹ ಸೇರಿದ್ದರು.

ನಾಟಕ ಮುಗಿದ ನಂತರ ಮಾಲಾ 'ಸಫ್ದರ್ ತಮ್ಮ ನಾಟಕಗಳ ಮೂಲಕ ನೋವಿನ ವಿರುದ್ಧ ಸೆಡು ಹೊಡೆದು ನಿಂತರು. ಅಂತೆಯೇ ನಾನೂ ಅವರೊಂದಿಗಿದ್ದೇನೆ. ಸಫ್ದರ್ ನಮ್ಮ ನಡುವೆ ಇಲ್ಲವಾಗಿರಬಹುದು ಆದರೆ ನಾವು ಈ ದಿನ ಪುನಃ ಈ ನಾಟಕ ಅಭಿನಯಿಸುವುದರ ಮೂಲಕ ಅವರು ಹುಟ್ಟು ಹಾಕಿದ ಚಳುವಳಿಯ ಬಾವುಟ ನಮ್ಮ ಕೈಗೆತ್ತಿಕೊಂಡಿದ್ದೇವೆ' ಎಂದರು.

ಪ್ರೀತಿಯ ಸಫ್ದರ್ ಸಾವಿಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ, 'ಐಕ್ಯರಂಗ' ಸಂತಾಪ ವ್ಯಕ್ತಪಡಿಸುತ್ತಾ ಮಾಲಾರವರ ದುಃಖದಲ್ಲಿ ಸಹಭಾಗಿಯಾಗಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕರೆಯಾದ ಸರ್ವಾಧಿಕಾರಿ ಸರ್ಕಾರವನ್ನು ಉರುಳಿಸಲು ಕರೆ ಕೊಡುತ್ತದೆ.

ಸಫ್ದರ್ ಹಷ್ಮಿ ಅಮರ್‌ರಹೇ.



ಹದಿಮೂರನೇ ಮಹಾಧಿವೇಶನದ ಪ್ರತಿನಿಧಿಗಳು

ಹದಿಮೂರನೇ ಮಹಾಧಿವೇಶನದಲ್ಲಿ ಪ್ರತಿನಿಧಿಗಳು ಮತ್ತು ವೀಕ್ಷಕರ ಸಂಖ್ಯೆ ಅನುಕ್ರಮವಾಗಿ 648 ಮತ್ತು 5 0 ಎಂದು ಕೇಂದ್ರ ಸಮಿತಿ ನಿರ್ಧರಿಸಿತ್ತು. ಇವರಲ್ಲಿ 65 ಕೇಂದ್ರ ಸಮಿತಿ ಸದಸ್ಯರೂ ಸೇರಿದ್ದಾರೆ. ಕೇಂದ್ರ ಸಮಿತಿ ಸದಸ್ಯರಲ್ಲಿ ಕಾಂ. ಸತ್‌ವಂತ್‌ಸಿಂಗ್ ಅನಾರೋಗ್ಯದ ಕಾರಣ ಭಾಗವಹಿಸಲಿಲ್ಲ. ಒಟ್ಟು 643 ಪ್ರತಿನಿಧಿಗಳು ಹಾಗೂ 48 ವೀಕ್ಷಕರು ಮಹಾಧಿವೇಶನದಲ್ಲಿ ಭಾಗವಹಿಸಿದರು. ಚಿತ್ತಬ್ರತ ಮಂಜುದಾರ್ ಕಾಂ. ಪಿ.ಬಿ.ರಂಗನೇಕರ್ ಮತ್ತು ಕಾಂ. ಎಂ.ದಾಸನ್‌ರವರಿದ್ದ ಅರ್ಹತಾ ಪರಿಶೀಲನಾ ಸಮಿತಿ ಮಂಡಿಸಿದ ವರದಿ ಹೀಗಿದೆ:

ಪ್ರತಿನಿಧಿಗಳಲ್ಲಿ 612 ಪುರುಷರು ಮತ್ತು 31 ಮಹಿಳೆಯರು.
ವೀಕ್ಷಕರಲ್ಲಿ 42 ಪುರುಷರು ಮತ್ತು 6 ಮಹಿಳೆಯರು

ವಯಸ್ಸು	ಪ್ರತಿನಿಧಿಗಳು	ವೀಕ್ಷಕರು
30 ವರ್ಷದವರೆಗೆ	7	2
31 ರಿಂದ 45	203	24
46 ರಿಂದ 60	266	14
61 ರಿಂದ 70	107	8
70 ಕ್ಕಿಂತ ಹೆಚ್ಚು	60	-
ವರ್ಗಮೂಲ		
ಕಾರ್ಮಿಕ ವರ್ಗ	87	5
ಕೃಷಿಕಾರ್ಮಿಕರು	18	-
ಬಡರೈತರು	65	7
ಮಧ್ಯಮರೈತರು	146	15
ಶ್ರೀಮಂತ ರೈತರು	24	2
ಭೂಮಾಲಿಕರು	29	1
ಬೂರ್ಜ್ವಾ	1	-
ಮಧ್ಯಮ ವರ್ಗ	262	18
ಪುಟ್ಟ ಬೂರ್ಜ್ವಾ	11	-
ಶಿಕ್ಷಣ:		-
5 ನೇ ತರಗತಿವರೆಗೆ	46	2
8 ನೇ ತರಗತಿವರೆಗೆ	44	4
ಮ್ಯಾಟ್ರಿಕ್‌ವರೆಗೆ	148	5
ಪದವಿಪೂರ್ವ ಡಿಪ್ಲೊಮೊ	103	5
ಪದವೀಧರರು	170	16
ಸ್ನಾತಕೋತ್ತರ	129	16
ಶಾಲಾಶಿಕ್ಷಣವಿಲ್ಲದವರು	3	-
ಪಕ್ಷಜೀವನ		
1942ರ ಮೊದಲು ಸೇರಿದವರು	82	1
1942-47	58	4
1947-64	229	5
1964-70	131	5
1970-77	117	13
1977ರ ನಂತರ	26	20
ಪಕ್ಷದಲ್ಲಿ ಸ್ಥಾನ		
ಪಿ.ಬಿ.ಸದಸ್ಯರು	10	-
ಕೇಂದ್ರ ಸಮಿತಿ ಸದಸ್ಯರು	54	-
ರಾಜ್ಯ ಸಮಿತಿ ಸದಸ್ಯರು	347	31
ಜಿಲ್ಲಾ ಸಮಿತಿ ಸದಸ್ಯರು	166	2
ಪ್ರಾದೇಶಿಕ ಸಮಿತಿ ಸದಸ್ಯರು	5	1
ಸ್ಥಳೀಯ ಸಮಿತಿ ಸದ್ಯರು	5	1
ಶಾಖಾ ಸದ್ಯಸ್ಯರು	54	13
ರಾಜ್ಯಸಮಿತಿಗಳಡಿ ಕೆಲಸಮಾಡುವವರು	2	-

ಸಾಮೂಹಿಕ ಸಂಘಟನೆಗಳಲ್ಲಿ ಸ್ಥಾನಮಾನ	ಪ್ರತಿನಿಧಿಗಳು	ವೀಕ್ಷಕರು
ಅಖಿಲ ಭಾರತ ಪದಾಧಿಕಾರಿಗಳು	100	4
ಅಖಿಲ ಭಾರತ ಸಮಿತಿ ಸದಸ್ಯರು	100	11
ರಾಜ್ಯ ಸಮಿತಿ ಸದಸ್ಯರು	300	26
ಜಿಲ್ಲಾ ಸಮಿತಿಗಿಂತ ಸದಸ್ಯರು	34	1
ಜಿಲ್ಲಾಸಮಿತಿ ಕೆಳಗೆ	3	-
ತಿಳಿಸಿಲ್ಲ	106	-
ಪಕ್ಷದೊಳಗೆ ಪ್ರದೇಶ ಮೂಲ		
ಕಾರ್ಮಿಕ ಸಂಘಗಳ ಮೂಲಕ	164	10
ಕಿಸಾನ್‌ರಂಗ	115	8
ಕೃಷಿಕಾರ್ಮಿಕ ರಂಗ	17	1
ಯುವಜನ ರಂಗ	36	2
ವಿದ್ಯಾರ್ಥಿ ರಂಗ	237	21
ಮಹಿಳಾ ರಂಗ	9	2
ಸಾಂಸ್ಕೃತಿಕ ರಂಗ	9	1
ಇತರರು	56	3
ಪೂರ್ಣಾವಧಿ ಕಾರ್ಯಕರ್ತರು	558	31
ಪೂರ್ಣಾವಧಿ ಕಾರ್ಯಕರ್ತರಲ್ಲದವರು	164	17
ಈಗ ದುಡಿಯುವ ರಂಗ		
ಪಕ್ಷದ ಸಂಘಟನೆ	281	21
ಕಾರ್ಮಿಕ ಸಂಘ	164	8
ಕಿಸಾನ್ ಸಭಾ	115	7
ಕೃಷಿಕಾರ್ಮಿಕ ಸಂಘ	27	2
ಮಧ್ಯಮ ವರ್ಗದ ನೌಕರ ಸಂಘಟನೆ	6	2
ವಿದ್ಯಾರ್ಥಿ ಸಂಘಟನೆ	19	8
ಮಹಿಳಾ ಸಂಘಟನೆ	22	5
ಸಾಂಸ್ಕೃತಿಕ ಸಂಘಟನೆ	10	1
ಇತರೆ	50	3
ಜೈಲು ಜೀವನ		
ಇಲ್ಲ	146	16
1 ತಿಂಗಳವರೆಗೆ	118	13
1 ವರ್ಷದವರೆಗೆ	109	12
2 ವರ್ಷಗಳವರೆಗೆ	104	4
5 ವರ್ಷಗಳ ವರೆಗೆ	106	-
10 ವರ್ಷಗಳವರೆಗೆ	46	2
10 ವರ್ಷಗಳಿಗಿಂತ ಹೆಚ್ಚು	14	1
ಭೂಗತ ಜೀವನ		
ಇಲ್ಲ	269	34
ಒಂದು ತಿಂಗಳವರೆಗೆ	42	42
ಒಂದು ವರ್ಷದವರೆಗೆ	103	5
2 ವರ್ಷಗಳವರೆಗೆ	106	2
5 ವರ್ಷಗಳವರೆಗೆ	80	2
10 ವರ್ಷಗಳವರೆಗೆ	39	-
10 ವರ್ಷಗಳಗಿಂತ ಹೆಚ್ಚು	4	-

ಅತ್ಯಂತ ಹಿರಿಯ ಪ್ರತಿನಿಧಿ ಪ.ಬಂಗಾಳದ 89 ವರ್ಷ ವಯಸ್ಸಿನ ಕಾಂ. ರತನ್‌ಲಾಲ್ ಬ್ರಹ್ಮನ್. ವೀಕ್ಷಕರಲ್ಲಿ ಅತ್ಯಂತ ಹಿರಿಯರು ಉತ್ತರ ಪ್ರದೇಶದ 70 ವರ್ಷ ವಯಸ್ಸಿನ ಹರ್‌ಸಹಾಯ್‌ಸಿಂಗ್.

ಅತ್ಯಂತ ಕಿರಿಯ ಪ್ರತಿನಿಧಿ ಕೇರಳದ 21 ವರ್ಷದ ಎನ್.ಸುಕನ್ಯಾ. ವೀಕ್ಷಕರಲ್ಲಿ ಅತ್ಯಂತ ಕಿರಿಯರು ಜಮ್ಮು-ಕಾಶ್ಮೀರದ ಮಹಮ್ಮದ್ ಯೂಸುಬ್ ಗ್ಹೋನೇಯಿ ಮತ್ತು ಪಂಜಾಬಿನ ಇಂದುಧವನ್ ಇಬ್ಬರಿಗೂ 25 ವರ್ಷ.

ಅತ್ಯಂತ ದೀರ್ಘ ಪಕ್ಷ ಜೀವನ 1928ರಲ್ಲಿ ಪಕ್ಷಕ್ಕೆ ಬಂದ ಕಾಂ. ಬಿ.ಟಿ.ರಣದಿವೆಯವರದ್ದು: ವೀಕ್ಷಕರಲ್ಲಿ 1938ರಲ್ಲಿ ಪಕ್ಷ ಸೇರಿದ ಆಂಧ್ರಪ್ರದೇಶದ ಕಾಂ. ಎಂ. ಉದಯಂ.

ಅತ್ಯಂತ ಚಿಕ್ಕ ಪಕ್ಷ ಜೀವನವೆಂದರೆ ಪ್ರತಿನಿಧಿಗಳಲ್ಲಿ ಕೇರಳದ ಕಾಂ. ಸುಕನ್ಯಾ ಮತ್ತು ವೀಕ್ಷಕರಲ್ಲಿ ಪಂಜಾಬಿನ ಇಂದು ಧವನ್- ಇಬ್ಬರೂ 1986 ರಲ್ಲಿ ಪಕ್ಷ ಸೇರಿದರು.

ಅತೀ ಹೆಚ್ಚು ಜೈಲು ಜೀವನ 20 ವರ್ಷಕ್ಕೂ ಹೆಚ್ಚು ಕಾಲ ಜೈಲಿನಲ್ಲಿ ಕಳೆದ ಕಾಂ. ನೃಪೇನ್ ಚಕ್ರವರ್ತಿಯವರದ್ದು ಮತ್ತು ಪಶ್ಚಿಮ ಬಂಗಾಳದ ಸುಕುಮಾರ್ 19 ವರ್ಷ 9 ತಿಂಗಳು ಜೈಲು ಅನುಭವಿಸಿದವರು.

ವೀಕ್ಷಕರಲ್ಲಿ ಆಂಧ್ರ ಪ್ರದೇಶದ ಚೌಧರಿ ತೇಜೇಶ್ವರ 13ವರ್ಷ 10ತಿಂಗಳು 2ವಾರ ಜೈಲಿನಲ್ಲಿದ್ದರು.

ಅತ್ಯಂತ ಹೆಚ್ಚು ಭೂಗತ ಜೀವನ ನಡೆಸಿದವರು ಕೇರಳದ ಪಿ.ಕೆ. ಚಂದ್ರನಂದನ್ ಅವರು 13 ವರ್ಷ 6ತಿಂಗಳು ಭೂಗತರಾಗಿದ್ದರು. ಇ.ಕೆ.ನಾಯನಾರ್ 11 ವರ್ಷ ಭೂಗತರಾಗಿದ್ದರು. ವೀಕ್ಷಕರಲ್ಲಿ ಉತ್ತರ ಪ್ರದೇಶದ ಹರಸಹಾಯ್‌ಸಿಂಗ್ 3ವರ್ಷ ಭೂಗತರಾಗಿದ್ದರು.

ಹಿಂದಿನ ಪಾಲಿಟ್‌ಬ್ಯೂರೋ ಸದಸ್ಯರ ಸರಾಸರಿ ವಯಸ್ಸು 75 -3 ವರ್ಷ ಹಿಂದಿನ ಕೇಂದ್ರ ಸಮಿತಿಯ ಸರಾಸರಿ ವಯಸ್ಸು 63-3 ವರ್ಷ ಇದರಲ್ಲಿ ಮೂವರು 40 ವರ್ಷಕ್ಕಿಂತ ಚಿಕ್ಕವರು.

ಮಹಿಳಾ ಕೇಂದ್ರ ಸಮಿತಿ ಸದಸ್ಯರಾದ ಕಾಂ. ಗೋದಾವರಿ ಪರುಳೇಕರ್ ಮತ್ತು ಕಾಂ. ಅಹಿಲ್ಯಾ ರಂಗಣೇಕರ್ ಇಬ್ಬರೂ ಎಂಟು ವರ್ಷ ಜೈಲುವಾಸ ಅನುಭವಿಸಿದವರು.

ಕಾಂ. ಮೋತೀಲಾಲ್ ಶರ್ಮಾ: ಕೇಂದ್ರ ಸಮಿತಿ ಸದಸ್ಯರು ಅತ್ಯಂತ ಹೆಚ್ಚು 38 ಬಾರಿ ಬಂಧಿತರಾಗಿದ್ದಾರೆ. ಪಂಜಾಬಿನ ದೇವೆಂದ್ರ ಥಿಲ್ಲೋಂ 33 ವರ್ಷ ವಯಸ್ಸಿನಲ್ಲೇ 8ವರ್ಷ ಜೈಲುವಾಸ ಅನುಭವಿಸಿದ್ದಾರೆ.

ಚುನಾಯಿತ ಸ್ಥಾನಮಾನ		
ಸಂಸತ್ ಸದಸ್ಯರು	26	-
ಎಂ.ಎಲ್.ಎ./ಎಂ.ಎಲ್.ಸಿ	67	1
ಮಂತ್ರಿ (ಇಬ್ಬರು ಮುಖ್ಯಮಂತ್ರಿಗಳು ಸೇರಿ	18	-
ಕಾರ್ಪೊರೇಷನ್/ಮುನಿಸಿಪಾಲಿಟಿ	10	3
ಜಿಲ್ಲಾ ಪರಿಷತ್ತು	11	-
ಪಂಚಾಯತು ಸಮಿತಿ	4	-
ಗ್ರಾಮಪಂಚಾಯತು	6	-
ಇತರೆ	2	1

ಸಿ.ಪಿ.ಐ.(ಎಂ)ಕರೆ

1ನೇ ಪುಟದಿಂದ

ಜಗಳ ರಾಜ್ಯದ ಆಡಳಿತೆಯ ಮೇಲೆ ಕೆಟ್ಟ ಪರಿಣಾಮ ಬೀರಿದೆ. ಜನ ಪರ ಕೆಲಸಗಳು ಸ್ಥಗಿತಗೊಂಡಂತಾಗಿದೆ. ಕಾಂಗ್ರೆ ಅದರ ಲಾಭ ಪಡೆಯುವ ಪ್ರಯತ್ನದಲ್ಲಿದೆ. ಮೊನ್ನೆ ನಡೆದ ಜಿಲ್ಲಾಪರಿಷತ್-ಮಂಡಲ್‌ಪಂಚಾಯತ್ ಚುನಾವಣೆಗಳಲ್ಲಿ ಜನ ಕಾಂಗ್ರೆ ಪರ ಮತ ನೀಡಿದ್ದು ಕಂಡು ಬರುತ್ತದೆ.

ಆದ್ದರಿಂದ ಕರ್ನಾಟಕದ ಹಾಗೆಯೇ ದೇಶದ ಹಿತದೃಷ್ಟಿಯಿಂದ ಜನತಾ ಪಕ್ಷದ ಮುಖಂಡರು ತಮ್ಮ ಆಂತರಿಕ ಜಗಳವನ್ನು ಬದಿಗಿರಿಸಿ, ಎಲ್ಲರೂ ಒಂದಾಗಿ ರಾಜ್ಯದ ಜನತೆ ಎದುರಿಸುತ್ತಿರುವ ತುರ್ತು ಸಮಸ್ಯೆಗಳಿಗೆ ಪರಿಹಾರ ಒದಗಿಸಿ, ಅವರ ವಿಶ್ವಾಸಗಳಿಸಿ ಕೇಂದ್ರದಲ್ಲಿ ರಾಜೀವ್‌ಗಾಂಧಿ ಸರ್ಕಾರವನ್ನು ಸೋಲಿಸುವ ಪ್ರಯತ್ನದಲ್ಲಿ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳಿಗೆ ನೆರವಾಗಬೇಕೆಂದು ಸಿ.ಪಿ.ಐ.(ಎಂ) ಜನತಾ ಮುಖಂಡರಿಗೆ ಮನವಿ ಮಾಡಿಕೊಳ್ಳುತ್ತಿದೆ.

ಭಾಷಾ-ಕೋಮು ದ್ವೇಷಗಳ ವಿರುದ್ಧ ಕ್ರಮ ಕೈಗೊಳ್ಳಿ

ರಾಜೀವ್‌ಗಾಂಧಿಯವರ ಆರ್ಥಿಕ-ಆಡಳಿತಾತ್ಮಕ ನೀತಿಯಿಂದಾಗಿ ಜನರಲ್ಲಿ ಅಸಂತೃಪ್ತಿ ಹೆಚ್ಚಾಗುತ್ತಿದ್ದು, ಅದರ ವಿರುದ್ಧ ಎಡ ಪಕ್ಷಗಳ ಮುಖಂಡತ್ವದಲ್ಲಿ ವಿಶಾಲ ತಳಹದಿಯ ತೀವ್ರ ಚಳವಳಿ ಬೆಳೆದು ಬರುತ್ತಿರುವಾಗ ಜನರ ಗಮನವನ್ನು ಬೇರೆಡೆಗೆ ಹರಿಸುವ ದೃಷ್ಟಿಯಿಂದಲೂ ಅಂಥ ಹೋರಾಟದಲ್ಲಿ ಒಡಕುಂಟುಮಾಡುವ ದುರುದ್ದೇಶದಿಂದಲೂ ಜಾತಿ, ಭಾಷೆ, ಮಣ್ಣಿನ ಮಕ್ಕಳು ಮುಂತಾದ ವಾದ ಮಂಡಿಸುತ್ತಿದ್ದಾರೆ. ಪ್ರತಿಗಾಮಿ ಶಕ್ತಿಗಳು, ಆ ಕಾರಣದಿಂದಾಗಿಯೇ ಕರ್ನಾಟಕದಲ್ಲಿಯೂ ಜಾತೀಯ- ಭಾಷಿಕ ದಂಗೆಗಳು ಪ್ರಾರಂಭವಾಗಿವೆ.

ಹೆಡ್ಗೆವಾರ ಜನ್ಮಶತಾಬ್ದಿ ದಿನಾಚರಣೆಯ ಹೆಸರಿನಲ್ಲಿ ಆರ್.ಎಸ್.ಎಸ್.ನವರು ಪ್ರಚೋದನಾಕಾರಿ ಗೋಡೆ ಬರಹಗಳನ್ನು ರಾಜ್ಯಾದ್ಯಂತ ಬರೆದು ಧಾರ್ಮಿಕ ಭಾವನೆಗೆ ಪ್ರಚೋದನೆ ನೀಡಿ ಇತರ ಕೋಮಿನವರ ಮೇಲೆ ಅತ್ಯಾಚಾರವನ್ನು ಸಿ.ಪಿ.ಐ.ಎಂ. ಖಂಡಿಸುತ್ತದೆ. ಆರ್.ಎಸ್.ಎಸ್.ನವರ ಪ್ರಚೋದನಕಾರಿ ಗೋಡೆಬರಹ ಮತ್ತು ದಂಗೆ ಎಬ್ಬಿಸುವುದರ ವಿರುದ್ಧ ಜನ ಜಾಗೃತಿಯನ್ನುಂಟುಮಾಡಿ ಅವರ ಕುತಂತ್ರಗಳನ್ನೆದುರಿಸಲು ಎಡ ಮತ್ತು ಜಾತ್ಯಾತೀತ ಶಕ್ತಿಗಳು ಧೈರ್ಯದಿಂದ ಕಾರ್ಯಾಚರಣೆ ಇಳಿಯಬೇಕೆಂದು ಕರೆ ಕೊಡುತ್ತದೆ.

ಕನ್ನಡ ರಣಧೀರ ಪಡೆ ಎಂಬ ಹೆಸರಿನ ಸಂಘಟನೆಯು ಬೆಂಗಳೂರು ನಗರದ ಶ್ರೀರಾಂಪುರದಲ್ಲಿ ತಮಿಳರ ಮೇಲೆ ನಡೆಸುತ್ತಿರುವ ಅತ್ಯಾಚಾರವನ್ನು ಖಂಡಿಸುತ್ತ ಇಂಥ ಕುರುಡು ಕನ್ನಡ ಪ್ರೇಮಿಗಳ ಪರಭಾಷಾ ವಿರೋಧಿ ಶಕ್ತಿಗಳ ಅಪಪ್ರಚಾರ, ದಬ್ಬಾಳಿಕೆಗಳನ್ನೆದುರಿಸಲು ಜನ ಮುಂದಾಗಬೇಕೆಂದು ಕರೆ ಕೊಟ್ಟಿದೆ. ಹಾಗೆಯೇ ತಮಿಳ ಮತ್ತಿನ್ನಿತರ ಅಲ್ಪ ಭಾಷಿಕರಿಗೆ ರಕ್ಷಣೆ ನೀಡಲು ಮುಂದಾಗಬೇಕೆಂದೂ ಕರೆ ನೀಡುತ್ತದೆ.



ಐಕ್ಯತೆಯತ್ತ

1ನೇ ಪುಟದಿಂದ

ಕಮ್ಯೂನಿಸ್ಟ್ ಪಕ್ಷಗಳ ಜೊತೆ ಸಂಬಂಧದ ಪುನಸ್ಸ್ಥಾಪನೆಯಾಗಿದೆ. ಅದರಲ್ಲಿಯೂ ಕಲ್ಕತ್ತಾ ಮಹಾಧಿವೇಶನದ ನಂತರ ಇದು ಸ್ಪಷ್ಟವಾಗಿ ಕಂಡಿದೆ. ಇವೆಲ್ಲದರ ಒಟ್ಟು ಫಲವೇ ಇಂದು ನಮ್ಮೆದುರಿರುವ ಸೌಹಾರ್ದ ಪ್ರತಿನಿಧಿ ಸಂಗಾತಿಗಳು.

ಅಷ್ಟೇ ಅಲ್ಲ ಇಂದು ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಚಳವಳಿಯೊಳಗೆ ಕೂಡ ಹೊಸ ವಾತಾವರಣ ನಿರ್ಮಾಣವಾಗಿದೆ. ಇಂದು ವಿಶ್ವದ ವಿವಿಧ ಕಮ್ಯೂನಿಸ್ಟ್ ಪಕ್ಷಗಳು ತಮ್ಮ ನಿಲುವನ್ನು ಸ್ವತಂತ್ರವಾಗಿ ಧೈರ್ಯವಾಗಿ ಮುಂದಿಡುತ್ತಿವೆ. ಇದರಿಂದ ಕಮ್ಯೂನಿಸ್ಟ್ ಪಕ್ಷಗಳ ನಡುವೆ ಹೊಸ ರೀತಿಯ ಸಂಬಂಧಗಳು ರೂಪುಗೊಳ್ಳುತ್ತಿವೆ. ಅಂತರಾಷ್ಟ್ರೀಯ ಚಳುವಳಿಯಲ್ಲಿನ ಈ ಹೊಸ ವಾತಾವರಣದ ಹಿನ್ನೆಲೆಯಲ್ಲಿ ನಮ್ಮ ಹದಿಮೂರನೇ ಮಹಾಧಿವೇಶನ ಸೇರಿದೆ.

ಮೂರನೆಯದಾಗಿ ಭಾರತ-ಚೀನಾ ಸಂಬಂಧಗಳು ಪಕ್ಷದ ವಿಭಜನೆಯ ಸಮಯದಲ್ಲಿ ಒಂದು ದೊಡ್ಡ ಪ್ರಶ್ನೆಯಾಗಿತ್ತು. ಭಾರತ-ಚೀನಾ ಸಂಬಂಧದ ಅತ್ಯಂತ ಕೆಟ್ಟ ದಿನಗಳಲ್ಲಿಯೂ ನಾವು ಶಾಂತಿಯುತ ಇತ್ಯರ್ಥಕ್ಕಾಗಿ ಹೋರಾಡಿದ್ದೇವೆ. ಮತ್ತು ಅದಕ್ಕಾಗಿ ಬಂಧನಕ್ಕೆ, ಹಿಂಸೆಗೆ ಒಳಗಾಗಿದ್ದೆವೆ. ಇಷ್ಟಾದರೂ ಈ ಸಂಬಂಧವನ್ನು ಸುಮಧುರಗೊಳಿಸಲು ನಮ್ಮ ಪಕ್ಷ ಪ್ರಯತ್ನಿಸಿದೆ. ಇದರಲ್ಲಿ ವೈಯುಕ್ತಿಕವಾಗಿ ನಮಗೂ ಒಂದು ಪಾತ್ರವಿದೆ. ಈಗ ಭಾರತ-ಚೀನಾ ಸಂಬಂಧಗಳು ಮರಳಿ "ಹಿಂದಿ-ಚೀನಿ ಭಾಯಿಭಾಯಿ"ಯ ಉತ್ತುಂಗದ ದಿನಗಳ ಕಡೆಗೆ ಸಾಗುತ್ತಿದೆ. ಗಡಿವಿವಾದ ಪರಿಹಾರಕ್ಕಾಗಿ ಜಂಟಿ ಸಮಿತಿ ನೇಮಿಸಿರುವುದು ಈ ಸುಗಮ ಸಂಬಂಧದ ಸ್ಥಾಪನೆಯ ಸೂಚನೆ ಎಂದು ಸಂತಸವನ್ನು ವ್ಯಕ್ತಪಡಿಸಿದರು.

ಇತಿಹಾಸ ಚಕ್ರದ ಒಂದು ಸುತ್ತು

ಸಿ.ಪಿ.ಐ.(ಎಂ) ಹಾಗೂ ವಿಶ್ವ ಕಮ್ಯೂನಿಸ್ಟ್ ಚಳುವಳಿಯ ಸಂಬಂಧ



ಭಾರತದ ಕಮ್ಯೂನಿಸ್ಟ್ ಚಳವಳಿ 1964ರಲ್ಲಿ ಇಬ್ಭಾಗವಾದ ನಂತರ ಸಿ.ಪಿ.ಐ.(ಎಂ)ನ ಏಳನೇ ಪಾರ್ಟಿ ಅಧಿವೇಶನ ಕಲ್ಕತ್ತಾದಲ್ಲೂ ಸಿಪಿಐನ 7ನೇ ಅಧಿವೇಶನ ಬೊಂಬಾಯಿಯಲ್ಲೂ ನಡೆಯಿತು. ಸಿಪಿಐ(ಎಂ)ನ ಅಧಿವೇಶನದಲ್ಲಿ ಸೋದರ ಪಕ್ಷಗಳ ಪ್ರತಿನಿಧಿಗಳು ಯಾರೂ ಭಾಗವಹಿಸಿರಲಿಲ್ಲ. ಸಿಪಿಐನ ಅಧಿವೇಶನದಲ್ಲಿ ಸೋವಿಯತ್ ನೇತೃತ್ವದ ಅನೇಕ ಪಕ್ಷಗಳು ಭಾಗವಹಿಸಿ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದವು.

ಸಿ.ಪಿ.ಎಸ್‌ಯು. ನಿಯೋಗದ ಮುಖಂಡರಾಗಿದ್ದ ಪೊನಾಮರಿಯೋ ತಮ್ಮ ಭಾಷಣದ ನಂತರ ಲೆನಿನ್ನರ ಭಾವಚಿತ್ರವಿದ್ದ ಕೆಂಪು ಬಾವುಟವನ್ನು ಸಿ.ಪಿ.ಐ.ನ ಚೇರಮನ್ನರಾಗಿದ್ದ [illegible]ವರಿಗೆ ಬಳುವಳಿ ನೀಡಿದರು.

೨೪ ವರ್ಷಗಳ ನಂತರ ಅದೇ ಕೆಂಪು ಪತಾಕೆಯನ್ನು ಕೃಷ್ಣಪಿಳ್ಳೆ ನಗರದಲ್ಲಿ ನಡೆದ ಸಿ.ಪಿ.ಐ.(ಎಂ)ನ ೧೩ನೇ ಅಧಿವೇಶನದಲ್ಲಿ ಸೋವಿಯತ್ ನಿಯೋಗದ ಮುಖಂಡರಾದ ಜಿ.ವಿ.ಕೋಲ್‌ಬಿನ್ ತಮ್ಮ ಅಭಿನಂದನಾ ಭಾಷಣದ ನಂತರ ಇದು ಸಮ್ಮೇಳನದ ಅಧ್ಯಕ್ಷ ಮಂಡಳಿಗೆ ನೀಡಿದರು. ಇದು ಇತಿಹಾಸ ಚಕ್ರ ಒಂದು ಪೂರ್ಣ ಸುತ್ತು ಸುತ್ತಿದೆಯೆಂಬುದನ್ನು ಸಾಬೀತು ಮಾಡಿದೆ.

ಲೆನಿನ್ನರ ಭಾವಚಿತ್ರವಿದ್ದ ಬಾವುಟ ಸಿ.ಪಿ.ಐ.ಗೆ ಸಿಕ್ಕಿದಾಗ ಸಿ.ಪಿ.ಐ.ನ ಪತ್ರಿಕೆ 'ನವಜೀವನ' ಪಕ್ಷಕ್ಕೆ ಲೆನಿನ್‌ಪತಾಕೆ ದೊರೆತಿದೆಯೆಂಬುದಾಗಿ ದಪ್ಪಕ್ಷರಗಳಲ್ಲಿ ಪ್ರಕಟಿಸಿತು.

ಈ ಕಾಲು ಶತಮಾನದಲಿಲ ಆಗಿರುವ ಬದಲಾವಣೆಗಳು ಎಲ್ಲಾ ಕ್ರಾಂತಿಕಾರಿಗಳಿಗೂ ಒಂದು ಪಾಠವಾಗಿದೆ. ಅಂದು ಸಿ.ಪಿ.ಐ.ಗೆ ಬೆಂಬಲ ನೀಡಿದ ಸಾವಿರ ಸಾವಿರ ಭಾರತದ ಕಮ್ಯೂನಿಸ್ಟರು ಇಂದು ಸಿ.ಪಿ.ಐ.(ಎಂ) ಅನ್ನು ಪರಿಗಣಿಸದಿದ್ದ ನೂರಕ್ಕೂ ಹೆಚ್ಚು ಸೋದರ ಪಕ್ಷಗಳು ಇಂದು ಸಿ.ಪಿ.ಐ.(ಎಂ) ಅನ್ನು ಒಂದು ಮಾರ್ಕ್ಸ್‌ವಾದೀ-ಲೆನಿನ್‌ವಾದಿ ಪಕ್ಷವೆಂಬುದಾಗಿ ಅಂಗೀಕರಿಸಿದೆ.

[illegible] ಹೆಸರಿನಲ್ಲಿ ಬಾರತದ ಕಮ್ಯೂನಿಸ್ಟ್ ಚಳವಳಿ ಪುನರ್ ಸಂಘಟಿತಗೊಂಡ ನಂತರ ಮೊಟ್ಟ ಮೊದಲನೆಯ ಸಲ ಈ ಸೋದರ ಪಕ್ಷಗಳ ಪ್ರತಿನಿಧಿಗಳು ಸಿ.ಪಿ.ಐ.(ಎಂ)ನ ಅಧಿವೇಶನದಲ್ಲಿ ಭಾಗವಹಿಸಿದ್ದಾರೆ. ಅಷ್ಟೇ ಅಲ್ಲ, ಆಡಳಿತದಲ್ಲಿರುವ ಕಮ್ಯೂನಿಸ್ಟ್ ಪಕ್ಷಗಳ, ಫ್ರೆಂಚ್-ಇಟಾಲಿಯನ್ ಕಮ್ಯೂನಿಸ್ಟ್ ಪಕ್ಷಗಳ ಮುಖ ಪತ್ರಿಕೆಗಳಲ್ಲಿ ಸಿ.ಪಿ.ಐ.(ಎಂ)ನ 13ನೇ ಅಧಿವೇಶನದ ಕುರಿತು ಹೆಚ್ಚು ಪ್ರಾಮುಖ್ಯತೆ ನೀಡಿ ಲೇಖನಗಳು ಮತ್ತು ವರದಿಗಳನ್ನು ಪ್ರಕಟಸಲಾಗಿದೆ.

ಉದಾಹರಣೆಗೆ ಡಿಸೆಂಬರ್ ೨೮ನೇ ತಾರೀಖು ಸೋವಿಯತ್ ಕಮ್ಯೂನಿಸ್ಟ್ ಪಕ್ಷದ ಮುಖ ಪತ್ರಿಕೆಯಾದ ಪ್ರಾವ್ದಾ (ಪ್ರತಿದಿನ 12 ದಶಲಕ್ಷ ಪ್ರತಿಗಳು ಮಾರಾಟವಾಗುತ್ತದೆ) 13ನೇ ಅಧಿವೇಶನದ ಬಗ್ಗೆ ನಾಲ್ಕು ಕಾಲಂನಷ್ಟು ವರದಿಯನ್ನು ಪ್ರಕಟಸಲಾಗಿದೆ. ಪ್ರಾವ್ದಾದ ವರದಿಗಾರ ತಿರುವಂತನಪುರದಿಂದ ಇದನ್ನು ತಮ್ಮ ಪತ್ರಿಕೆಗೆ ಕಳಿಸಿದ್ದಾರೆ. ಸಿ.ಪಿ.ಐ.(ಎಂ)ನ ಅಧಿವೇಶನದಲ್ಲಿ ಗೋಬಿನ್ ಮಾಡಿದ ಭಾಷಣ, ಸಿ.ಪಿ.ಐ.(ಎಂ)ನ ಸಮ್ಮೇಳನ ಸೋವಿಯತ್ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಗೆ ಕಳುಹಿಸಿದ್ದ ಅಭಿನಂದನಾ ಸಂದೇಶವೂ ಪ್ರಾವ್ದಾದಲ್ಲಿ ಪ್ರಮುಖವಾಗಿ ಪ್ರಕಟಗೊಂಡಿದೆ.

ಡಿಸೆಂಬರ್ ೨೯ರಂದು ಬೀಜಿಂಗ್ ರೇಡಿಯೋ ೩ ನಿಮಿಷಗಳ ಕಾಲ ಸಿ.ಪಿ.ಐ.(ಎಂ)ನ ಸಮ್ಮೇಳನದ ಬಗ್ಗೆ ಸುದ್ದಿಯನ್ನು ಬಿತ್ತರಿಸಿತು. ಚೀನಾದ ಅಧಿಕೃತ ವಾರ್ತಾ ಸಂಸ್ಥೆ ಕ್ಸಿನಾಹುವಾ ತಿರುವನಂತಪುರದ ಅಧಿವೇಶನದ ತಾಜಾ ಸುದ್ದಿಗಳನ್ನು ಹೆಚ್ಚು ಪ್ರಾಮುಖ್ಯತೆಯೊಂದಿಗೆ ಪ್ರಕಟಿಸಿತು. ಚೀನಾ ಕಮ್ಯೂನಿಸ್ಟ್ ಪಕ್ಷದ ಮುಖ ಪತ್ರಿಕೆಯಾದ ಪೀಪಲ್ಸ್ ಡೈಲಿ ಸಮ್ಮೇಳನದಲ್ಲಿ ಚೀನಿ ನಿಯೋಗದ ಮುಖಂಡ ಲೀನ್‌ಚಾನ್‌ಗ್ರೇಲ್ ಮಾಡಿದ ಭಾಷಣವನ್ನು ಚೀನೀ ಕಮ್ಯೂನಿಸ್ಟ್ ಪಕ್ಷದ ಸಂದೇಶವನ್ನು, ಇ.ಎಂ.ಎಸ್., ಇ.ಕೆ.ನಾಯನಾರ್ ಉದ್ಘಾಟನಾ ಸಮಾರಂಭದಲ್ಲಿ ಮಾಡಿದ ಭಾಷಣವೂ ಇ.ಎಂ.ಎಸ್. ನಡೆಸಿದ ಪತ್ರಿಕಾಗೋಷ್ಠಿಯನ್ನು ದೊಡ್ಡ ಸುದ್ದಿಯಾಗಿ ಪ್ರಕಟಿಸಿದೆ.

ಬಲ್ಗೇರಿಯನ್ ಕಮ್ಯೂನಿಸ್ಟ್ ಪಕ್ಷದ ಮುಖಪತ್ರಿಕೆಯಾದ ರಾಬಟ್ ನಿಚೆಟ್, ಜರ್ಮನಿಯ ಆಡಳಿತ ಪಕ್ಷವಾದ ಸೋಶಲಿಸ್ಟ್ ಯೂನಿಟಿ ಪಾರ್ಟಿಯ ಮುಖಪತ್ರಿಕೆಯಾದ ನಯೂಡಚ್ ಲಾಂಗ್ (ನವ ಜರ್ಮನಿಯ ಎಂಬುದು ಇದರ ಅರ್ಥ.)

ಜೆಕೋಸ್ಲಾವಿಯಾದ ಪತ್ರಿಕೆಗಳಲ್ಲಿ ಮೂರು ದಿನಗಳ ಕಾಲ ಸಿ.ಪಿ.ಐ.(ಎಂ) ಅಧಿವೇಶನದ ವರದಿಗಳು, ಭಾಷಣಗಳು, ಸಂದೇಶಗಳು ಪ್ರಕಟಗೊಂಡವು. ಪ್ರಧಾನಕಾರ್ಯದರ್ಶಿ ಇ.ಎಂ.ಎಸ್. ಸಹೋದರ ಪಕ್ಷಗಳ ಮುಖಂಡರುಗಳನ್ನು

ಪುಟ 11ಕ್ಕೆ

ಐ.ಟಿ.ಸಿ. ಕಾರ್ಮಿಕ ಸಂಘದ ಚುನಾವಣೆ

ಸಿ.ಐ.ಟಿ.ಯು.ಗೆ ಭಾರಿ ಜಯ

ಉತ್ಪಾದನೆ ಹೆಚ್ಚಿಸಿದರೆ ಮಾತ್ರ ಹೆಚ್ಚು ವೇತನ ಹಾಗೂ ಬೋನಸ್ ಎಂಬ ತತ್ವದ ವಿರುದ್ಧ ಹಾಗೂ ಗಣಕೀಕರಣದ ವಿರುದ್ಧ 114 ದಿನಗಳ ವೀರ ಹೋರಾಟ ನಡೆಸಿದ ಐ.ಟಿ.ಸಿ. ಕಾರ್ಮಿಕ ಸಂಘವನ್ನು ಮುರಿಯಲು ಹಾಗೂ ಸಿ.ಐ.ಟಿ.ಯು.ವಿಗೆ ಸೋಲಾಗುವಂತೆ ಮಾಡಲು ಸತ ಪ್ರಯತ್ನ ನಡೆಸಿದ ಐ.ಟಿ.ಸಿ. ಆಡಳಿತ ವರ್ಗಕ್ಕೆ ಕಾರ್ಮಿಕರು ಮುಟ್ಟಿ ನೋಡುಕೊಳ್ಳುವಂತಹ ಉತ್ತರ ನೀಡಿದ್ದಾರೆ.

ಎ.ಐ.ಟಿ.ಯು.ಸಿ.ಯನ್ನು ತರಲು ಪ್ರಯತ್ನಿಸಿ ಸೋತು ಕೊನೆಗೆ ಹೆಚ್.ಎಂ.ಕೆ.ಪಿ.ಯ ಮೈಕಲ್ ಫರ್ನಾಂಡೀಸ್‌ರವರನ್ನು ಸಿ.ಐ.ಟಿ.ಯು. ಸಂಘದ ವಿರುದ್ಧ ಸ್ಪರ್ಧೆಗಿಳಿಸಿತು. ಚುನಾವಣೆಯಲ್ಲಿ ಹಣವನ್ನು ನೀರಿನಂತೆ ವೆಚ್ಚ ಮಾಡಲಾಯಿತು.

ಜನವರಿ 7ರಂದು ನಡೆದ ಚುನಾವಣೆಯಲ್ಲಿ ಸೂರ್ಯನಾರಾಯಣರಾವ್ 1250 ಮತಗಳನ್ನು ಪಡೆದು 933 ಮತಗಳ ಭಾರಿ ಅಂತರದಿಂದ ವಿಜಯಗಳಿಸಿದರು ಶೇ. 97.5 ರಷ್ಟು ಮತ ಚಲಾವಣೆ ನಡೆದ ಈ ತುರುಸಿನ ಸ್ಪರ್ಧೆಯಲ್ಲಿ ಸಿ.ಐ.ಟಿ.ಯು.ವಿನ ತಂಡ ಎಲ್ಲಾ ಪದಾಧಿಕಾರಿಗಳ ಸ್ಥಾನವನ್ನು, ಸಮಿತಿಯ ಎಲ್ಲಾ ಸ್ಥಾನಗಳನ್ನು ಗೆದ್ದುಕೊಂಡಿತು. (ವಿವರ ಮುಂದಿನ ವಾರ)